ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧೬-೬-೬೯

★

ಬೆಲೆ ೨೦ ಪೈಸೆ



ಶ್ರೀ. ಜಾಗಿರದಾರ ರಂಗಾಚಾರ್ಯರು

Karmaveer KANNADA ILLUSTRATED WEEKLY HUBLI

ಸಂಪುಟ ೨೧ ಸಂಚಿಕೆ ೯

ಕರ್ಮವೀರ

ಸೋಮವಾರ ಜೇಷ್ಠ ವ. ೩

ತಾರೀಖು ೧೩—೬—೧೯೪೯

ಮುಖಪತ್ರದಲ್ಲಿ

ಮುಂಬಯಿ ಹಾಯಕೋರ್ಟಿನ ನಿವೃತ್ತ ನ್ಯಾಯಾಧೀಶರಾಗಿರುವ ಶ್ರೀ ರಂಗಾಚಾರ್ಯ ಅಪ್ಪಾಚಾರ್ಯ ಜಾಹಗಿರದಾರ ಇವರು ಕರ್ನಾಟಕ ವಿಶ್ವವಿದ್ಯಾಲಯದ ಮೊದಲನೆಯ ಉಪಕುಲಗುರು (ವಾಯಿಸ್ ಚಾನ್ಸಲರ) ಗಳಾಗಲು ಒಪ್ಪಿರುವರೆಂದು ಅಧಿಕೃತವಾಗಿ ಪ್ರಕಟವಾಗಿದೆ.

ಶ್ರೀ ರಂಗಾಚಾರ್ಯರು ಉಚ್ಚ ಸಂಸ್ಕೃತಿ ಮತ್ತು ಶ್ರೇಷ್ಠ ಶಿಕ್ಷಣದಲ್ಲಿ ಕೀರ್ತಿವೆತ್ತ ವಿಜಾಪುರ ಜಿಲ್ಹೆಯ ಅಗರಖೇಡದ ಪ್ರಸಿದ್ಧ ಅಧ್ಯ ಮನೆತನದವರು. ತಮ್ಮ ಉಚ್ಚ ಪರಂಪರೆಗೆ ತಕ್ಕಂತೆ ಶ್ರೀ. ಜಾಹಗಿರದಾರರು ಅಗರಖೇಡ ವಿಜಾಪುರ, ಪುಣೆಗಳಲ್ಲಿ ಅಭ್ಯಾಸಮಾಡಿ ಫಿಜಿಕ್ಸ್-ಕೆಮಿಸ್ಟ್ರಿ ವಿಷಯ ತೆಗೆದುಕೊಂಡು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅನಂತರ ಕನ್ನಡ ತೆಗೆದುಕೊಂಡು ಎಂ. ಎ. ಪಾಸಾದರು. ಕನ್ನಡ ತೆಗೆದುಕೊಂಡು ಎಂ. ಎ. ಪಾಸಾದವರೆಂದರೆ ಇವರು ಎರಡನೆಯವರು. ಅನಂತರ ಇವರು ಎಲೆಲ್. ಬಿ. ಪರೀಕ್ಷೆಯನ್ನು ಪಾಸಾಗಿ ೧೯೧೫ ರಲ್ಲಿ ಮುಂಬಯಿ ಹಾಯಕೋರ್ಟಿನಲ್ಲಿ ವಕೀಲಿಯನ್ನು ಪ್ರಾರಂಭಿಸಿದರು. ತಮ್ಮ ಬುದ್ಧಿಶಕ್ತಿ, ಅಭ್ಯಾಸವೃತ್ತಿ, ಸಾಹಿತ್ಯಕ ಸ್ವಭಾವ, ಪ್ರತಿಪಾದನೆಯ ಪಟುತ್ವ ಮೊದಲಾದ ಗುಣಗಳಿಂದ ಇವರು ಬೇಗನೆ ವಕೀಲಿಯಲ್ಲಿ ಹೆಸರು ಗಳಿಸಿದರು. ಇವರ ಈ ಪಾಂಡಿತ್ಯವನ್ನು ಗುರುತಿಸಿಯೆ ೧೯೩೪ ರಲ್ಲಿ ಇವರನ್ನು ಸರಕಾರೀ ವಕೀಲರನ್ನಾಗಿ ನೇಮಿಸಲಾಯಿತು. ಮೂರು ವರುಷಗಳ ವರೆಗೆ ಇವರು ಆ ಕೆಲಸ ಮಾಡಿದ ಅನಂತರ ೧೯೪೨ ರ ಚಳವಳಿಯಲ್ಲಿ ಇವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಯಿತು. ಆದರೆ ಹಿಂದುಸ್ತಾನ ಸ್ವಾತಂತ್ರ್ಯ ಪಡೆದ ನಂತರ ೧೯೪೭ ರಲ್ಲಿ ಇವರು ಹಾಯಕೋರ್ಟ ನ್ಯಾಯಾಧೀಶರೆಂದು ನೇಮಿಸಲ್ಪಟ್ಟರು. ಇದೇ ವರುಷ ಫೆಬ್ರುಅರಿಯ ವರೆಗೆ ಆ ಹೊಣೆಗಾರಿಕೆಯ ಸ್ಥಳದಲ್ಲಿದ್ದು ಅರುವತ್ತು ವರುಷವಾದ್ದರಿಂದ ಆ ಸ್ಥಳದಿಂದ ನಿವೃತ್ತರಾಗಿ ಮತ್ತೆ ತಮ್ಮ ವ್ಯವಸಾಯದಲ್ಲಿ ತೊಡಗಿದ್ದರು. ಆದರೀಗ ಇವರು ಮುಂಬಯಿ ಸರಕಾರದ ವಿಶೇಷ ಅಗ್ರಹಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಉಪಕುಲಗುರು ಪದವನ್ನಲಂಕರಿಸಲು ಒಪ್ಪಿದ್ದು ಅಭಿನಂದನೀಯವಾಗಿದೆ. ಜುಲೈ ಒಂದನೆಯ ತಾರೀಕಿನಿಂದ ಇವರು ಈ ಅಧಿಕಾರ ಸ್ಥಳವನ್ನು ಸ್ವೀಕರಿಸಿ ಕಾರ್ಯಾರಂಭ ಮಾಡುವರೆಂದು ತಿಳಿಯುತ್ತಿದೆ. ಇವರ ಆಳಿಕೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಭದ್ರವಾದ ತಳಹದಿಯಲ್ಲಿ ಸ್ಥಾಪಿತವಾಗಿ ಯೋಗ್ಯ ರೀತಿಯಿಂದ ಅಭಿವೃದ್ಧಿ ಹೊಂದಿ ಮಾದರಿ ಸಂಸ್ಥೆಯಾಗಿ ಮಾರ್ಪಡುವದೆಂದು ಹಾರಯಿಸುವಾ.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

— ವ್ಯವಸ್ಥಾಪಕ,
" ಕರ್ಮವೀರ " ಹುಬ್ಬಳ್ಳಿ.

ತಿರುವಾಂಕೂರು ಮತ್ತು ಕೊಚ್ಚಿ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಒಂದುಗೂಡಿ ಜುಲೈ ಒಂದರಿಂದ ಒಂದೇ ಒಕ್ಕೂಟದಲ್ಲಿ ಸಮಾವೇಶವಾಗುವವು, ಎರಡೂ ಸಂಸ್ಥಾನಗಳಿಗೂ ಒಂದೇ ಕಾರ್ಯಾಂಗ, ಶಾಸನಸಭೆ ಮತ್ತು ನ್ಯಾಯಾಂಗಗಳು ಸ್ಥಾಪಿತವಾಗುವುವು. ತಿರುವಾಂಕೂರಿನ ಮಹಾರಾಜರು ಮೊದಲನೆಯ ರಾಜಪ್ರಮುಖರಾಗಿ, ಜೀವಂತವಿರುವ ವರೆಗೆ ಆ ಅಧಿಕಾರದಲ್ಲಿ ಉಳಿಯುವರು ಎಂದು ಹೊಸದಿಲ್ಲಿಯಿಂದ ಹೊರಟ ಅಧಿಕೃತ ಪ್ರಕಟನೆಯೊಂದು ಸಾರುತಿದೆ. ಈ ಎರಡೂ ಸಂಸ್ಥಾನಗಳಲ್ಲಿ ದೇವಾಲಯಗಳ ಆಡಳತೆಯ ವಿಷಯವು ಮಹತ್ವದ್ದಾಗಿರುವುದರಿಂದ ಆ ಬಗ್ಗೆ ವಿಶೇಷ ಒಪ್ಪಂದ ಮಾಡಿಕೊಳ್ಳಲಾಗಿದೆ. ಅವೆಲ್ಲ ದೇವಾಲಯಗಳಿಗಾಗಿ ಸ್ವತಂತ್ರ ಸಮಿತಿಗಳನ್ನು ನೇಮಿಸಿಕೊಂಡು ಅವುಗಳ ಆಡಳತೆಯನ್ನು ಸಾಗಿಸಬೇಕೆಂದು ಗೊತ್ತಾಗಿದೆ. ಅವುಗಳಿಗಾಗಿ ವೆಚ್ಚಮಾಡುವ ಹಣವನ್ನು ಕೂಡ ಪ್ರತ್ಯೇಕಿಸಲಾಗಿದೆ. ಈ ಸಂಸ್ಥಾನಗಳ ಒಕ್ಕೂಟ ಪ್ರಶ್ನೆಯ ವಿಚಾರ ನಡೆದಾಗ ತಿರುವಾಂಕೂರಿನ ಮಹಾರಾಜರು ತಾವು ಪದ್ಮನಾಭದೇವರ ಪ್ರತಿನಿಧಿಯೆಂದು ಆಡಳತೆಯನ್ನು ಸಾಗಿಸುತಿರುವುದರಿಂದ ಈ ಸಂಬಂಧದಲ್ಲಿ ತಮಗೆ ಸ್ವತಂತ್ರವಾಗಿ ಏನೂ ಹೇಳಲು ಬರುವುದಿಲ್ಲೆಂದು ಹೇಳಿದ್ದುಂಟು. ಆದರೆ ಇಷ್ಟು ಮಾತ್ರಕ್ಕೆ ಸಂಸ್ಥಾನ ಒಕ್ಕೂಟ ರಚನೆಯದೆಂತು ತಡೆಯಬಲ್ಲುದು? ಆದರೂ ಹೊಸ ವ್ಯವಸ್ಥೆಯಲ್ಲಿ ಈ ದೇವಾಲಯಗಳ ಆಡಳತೆಗಾಗಿ ಪ್ರತ್ಯೇಕ ಏರ್ಪಾಡು ಮಾಡಿದ್ದು ಉಚಿತವಾಗಿದೆ. ಸಂಸ್ಥಾನಿಕರ ವರ್ಷಾಶನ ಅವರ ವೈಯಕ್ತಿಕ ಹಕ್ಕು ಬಾಧ್ಯತೆ ಮುಂತಾದವುಗಳ ಬಗ್ಗೆಯೂ ಒಡಂಬಡಿಕೆಯಾಗಿದ್ದು ಕಾಯ್ದೆ ಮತ್ತು ಪದ್ಧತಿಯ ಪ್ರಕಾರ ಅವನ್ನು ನಡೆಸಿಕೊಂಡು ಹೋಗಲಾಗುವದೆಂದು ಆಶ್ವಾಸಿಸಲಾಗಿದೆ. ನೋಕರರ ಸ್ಥಿತಿಗತಿಗಳ ಬಗ್ಗೆಯೂ ಆಶ್ವಾಸನ ಕೊಡಲಾಗಿದೆ.

ಈ ಎರಡೂ ಸಂಸ್ಥಾನಗಳು ಒಂದಕ್ಕೊಂದು ಹತ್ತಿಕೊಂಡಿದ್ದುದರಿಂದ ಪರಸ್ಪರ ಸಂಬಂಧವು ಹೆಚ್ಚಿದೆ. ಕೊಚ್ಚಿಯ ರಾಜಧಾನಿ ಮತ್ತು ಕೆಲ ಪ್ರದೇಶಗಳು ತಿರುವಾಂಕೂರಿನ ಮಧ್ಯದಲ್ಲಿದ್ದು ಎರ್ನಾಕುಲಂಕ್ಕೆ ತಿರುವಾಂಕೂರಿನಿಂದ ನೀರಿನ ಪೂರಯಿಕೆಯಾಗುತಿದೆ. ಕೆಲ ನದಿಗಳು ಎರಡೂ ಸಂಸ್ಥಾನಗಳಲ್ಲಿ ಹಾಯುವದರಿಂದ ನೀರಾವರಿಯ ಯೋಜನೆಗಳಿಗೂ ಅವಕಾಶವಿದೆ. ಹೀಗೆ ಎರಡೂ ಸಂಸ್ಥಾನಗಳು ಸಂಬದ್ಧವಾಗಿದ್ದರೂ ಬಹಳ ವಿರೋಧ ಭಾವವು ಈ ವರೆಗೆ ಬೆಳೆಯುತ್ತ ಬಂದಿದ್ದಿತು. ಆದರೀಗ ಒಕ್ಕೂಟದ, ರಚನೆಯಾದುದರಿಂದ ಆ ಹಳೆಯ ವಿರೋಧ ಮಾಯವಾಗಿ ಪರಸ್ಪರರಲ್ಲಿ ಐಕ್ಯವುಂಟಾಗಿ ಒಕ್ಕೂಟದ ಸಾರ್ವಾಂಗಿಕ ಪ್ರಗತಿಗೆ ಅನುಕೂಲ ವಾತಾವರಣವುಂಟಾಗುವದೆಂದು ಹಾರಯಿಸಲಾಗಿದೆ. ಒಂದೇ ಸಂಸ್ಕೃತಿ, ಭಾಷೆ, ಪರಂಪರೆಗಳುಳ್ಳ ಇಲ್ಲಿನ ಜನರ ಸರ್ವತೋಮುಖ ಉನ್ನತಿಯಾಗಲೂ ಇದರಿಂದ ಸಾಧ್ಯವಾಗುವದೆಂದು ಆಶಿಸಲಾಗಿದೆ. ಈ ಹೊಸ ಸಂಯುಕ್ತ ಸಂಸ್ಥಾನವು ೯೧೫೫ ಚದುರ ಮೈಲುಗಳಷ್ಟು ವಿಸ್ತಾರದ್ದಿದ್ದು ಜನಸಂಖ್ಯೆ ೭೫ ಲಕ್ಷ ಆಗುವದು. ಆದಾಯ ಸುಮಾರು ೧೩೩೯ ಲಕ್ಷ ಇದೆ.

" ರಚಿತವಾದ ಈ ಒಕ್ಕೂಟದ ರಾಜಪ್ರಮುಖರಿಗೆ, ಗವರ್ನರನಿಗೆ ಸಮಾನವಾದ ಅಧಿಕಾರಗಳನ್ನೂ ಕೊಡಲಾಗುವದೆಂದು ಪ್ರಕಟಿಸಲಾಗಿದೆ. ಈ ಎರಡೂ ಸಂಸ್ಥಾನಗಳು ಸಂಸ್ಥಾನಶಾಖೆಯೊಡನೆ ಮಾಡಿಕೊಂಡ ಒಡಂಬಡಿಕೆ ವಿಶೇಷ ತರಹದ್ದಾಗಿದೆ. ಉಳಿದ ಒಕ್ಕೂಟ ಸಂಸ್ಥಾನಗಳ ಒಪ್ಪಂದದಲ್ಲಿ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಧಿಕಾರವು ಹಿಂದುಸ್ತಾನ ಸರಕಾರಕ್ಕಿದ್ದರೆ ಈ ಒಕ್ಕೂಟ ರಚನೆಯ ಒಡಂಬಡಿಕೆಯಲ್ಲಿ ಆ ಬಗೆಯ ಕರಾರು ಇಲ್ಲ; ಒಪ್ಪಂದದ ಪ್ರಕಾರ ಆಡಳತೆಯನ್ನು ಸಾಗಿಸಿಕೊಂಡು ಹೋಗುವದಾಗದಿದ್ದರೆ ರಾಜಪ್ರಮುಖರಿಗೆ ಸಂಸ್ಥಾನ ಸರಕಾರದ ಎಲ್ಲ ಅಧಿಕಾರಗಳನ್ನು ವಹಿಸಲು ಅವಕಾಶವಿದೆ. ಈ ರಾಜಪ್ರಮುಖರ ಅಧಿಕಾರವನ್ನು ಗವರ್ನರರ ಅಧಿಕಾರದ ಮಟ್ಟಕ್ಕೆ ತಂದುದೂ ವಿಶೇಷವಾಗಿದೆ. ಅದರಂತೆ ಹೊಸ ಒಕ್ಕೂಟದ ರಾಜ್ಯಕೋಶ ವಿಷಯಕ ಸಮೀಕರಣ ಮಾರ್ಗವನ್ನು ರಾಜಪ್ರಮುಖನಿಗೆ ಸಂಯುಕ್ತ ಕಾರಭಾರ ಮತ್ತು ಸುಂಕಗಳ ಸಂಬಂಧದಲ್ಲಿ ಪುರವಣಿ ಅಧಿಕಾರವನ್ನು ಕೊಟ್ಟು ಸುಗಮ ಮಾಡಲಾಗಿದೆ. ಮೂರನೆಯ ವೈಶಿಷ್ಟ್ಯವೆಂದರೆ ದೇವಾಲಯಗಳಿಗೆ ಸಂಬಂಧಿಸಿದ್ದು. ತಿರುವಾಂಕೂರು ಸಂಸ್ಥಾನವೊಂದರಲ್ಲಿಯೆ ೩೪೯ ಹಿರಿ ಮತ್ತು ೧೧೨೩ ಕಿರಿ ದೇವಾಲಯಗಳಿವೆ. ೧೮೧೧ ರಿಂದ ಸರಕಾರದವರೆ ಇವುಗಳ ಆಸ್ತಿಯನ್ನು ವಶಪಡಿಸಿಕೊಂಡು ಆಡಳತೆಯನ್ನು ಸಾಗಿಸುತ್ತ ಬಂದಿರುವರು. ಇವುಗಳ ಆಡಳತೆ ಯಥಾಪ್ರಕಾರ ನಡೆಯುವಂತೆ ಈ ಒಪ್ಪಂದದಲ್ಲಿ ಏರ್ಪಾಡು ಮಾಡಲಾಗಿದೆ.

ಈ ಎರಡೂ ಸಂಸ್ಥಾನಗಳ ಒಕ್ಕೂಟ ರಚನೆಯ ಪ್ರಶ್ನೆಯು ಬಹಳ ದಿನಗಳಿಂದ ನೆನಗುದಿಗೆ ಬಿದ್ದಿದ್ದಿತು. ಸಂಸ್ಥಾನ ಶಾಖೆಯವರಾದರೂ ಯಾವದೊಂದು ಸಂಸ್ಥಾನವನ್ನು ವಿಲೀನಮಾಡುವಲ್ಲಿ ಇಲ್ಲವೆ ಅವುಗಳ ಒಕ್ಕೂಟ ರಚಿಸುವಲ್ಲಿ ಅನವಶ್ಯಕ ಅವಸರ ಮಾಡುವದಿಲ್ಲೆಂಬುದು ಈ ವರೆಗಿನ ಅವರ ಧೋರಣವನ್ನು ಸಮ್ಯಕ್ ಅಭ್ಯಸಿಸಿದವರಿಗೆ ಅರಿಯದ ಮಾತಲ್ಲ. ಜನಾಭಿಪ್ರಾಯವನ್ನು ಚೆನ್ನಾಗಿ ಪರಿವರ್ತಿಸಿಕೊಂಡು, ವಾತಾವರಣವನ್ನು ಅನುಕೂಲ ಮಾಡಿಕೊಂಡು ಅನಂತರವೆ ಹೊಸ ವ್ಯವಸ್ಥೆಯನ್ನು ಜಾರಿಯಲ್ಲಿ ತರುವದುಂಟು. ಅಂತೆಯೆ ತಿರುವಾಂಕೂರುಮತ್ತು ಕೊಚ್ಚಿ ಒಕ್ಕೂಟ ರಚನೆಗೆ ಸ್ವಲ್ಪ ಹೆಚ್ಚು ಸಮಯ ಹಿಡಿಯಿತು. ಆದರೆ ಈ ಬಗೆಯ ಒಕ್ಕೂಟ ರಚನೆಯಿಂದ ಜನತೆಯ ಬೇಡಿಕೆಯೂ ಪೂರ್ಣವಾಗಿ ಮನ್ನಿಸಲ್ಪಟ್ಟಂತಾಗಲಿಲ್ಲ; ಅವುಗಳ ಸಾರ್ವಾಂಗಿಕ ಉನ್ನತಿಯನ್ನೂ ಸಾಧಿಸಿದಂತಾಗಲಿಲ್ಲ. ಆಯಾ ಭಾಷೆಗಳ ಜನರನ್ನು ಒಂದೇ ಆಡಳತೆಯಲ್ಲಿ ತರುವದಾದರೆ ಭಾಷೆ, ಸಂಸ್ಕೃತಿ ಪರಂಪರೆಗಳ ಅಭಿವೃದ್ಧಿಯಾಗಲು ಹೆಚ್ಚು ಅವಕಾಶವುಂಟಾಗುವುದು. ಆದುದರಿಂದ ಸ್ವತಂತ್ರ ಸ್ವಾಯತ್ತ ಕೇರಳ ಪ್ರಾಂತವನ್ನು ರಚಿಸುವದು ಅತ್ಯವಶ್ಯವಾಗಿದೆ ಆದರೂ ಈ ಒಕ್ಕೂಟ ರಚನೆಯಿಂದ ಸ್ವತಂತ್ರ ಕೇರಳ ಪ್ರಾಂತ ರಚನೆಗೆ ಮಾರ್ಗ ಸುಗಮವಾದಂತಾಯಿತು. ಸಂಸ್ಥಾನ ಶಾಖೆಯವರು ಇನ್ನಷ್ಟು ಉದಾರಭಾವವನ್ನು ತಳೆದು ಕೇರಳ ಸ್ವತಂತ್ರ ರಾಜ್ಯವನ್ನು ರಚಿಸಿ ಅಲ್ಲಿನ ಜನತೆಯ ಬಹುದಿನದ ಬೇಡಿಕೆಯನ್ನು ಮನ್ನಿಸಿದ ಶ್ರೇಯಸ್ಸನ್ನು ಪಡೆಯುವರೆಂದು ನಂಬುತ್ತೇವೆ.

ಸಿಕ್ಕಿಂ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಒಕ್ಕೂಟವನ್ನು ರಚಿಸಲು ಸಂಸ್ಥಾನ ಶಾಖೆಯು ಅಣಿಯಾಗುತಿರುವಾಗಲೆ, ಡಾರ್ಜಿಲಿಂಗ ಜಿಲ್ಹೆಯಿಂದ ಸುತ್ತುವರಿಯಲ್ಪಟ್ಟ ಸಿಕ್ಕಿಂ ಸಂಸ್ಥಾನದ ಆಡಳತೆಯನ್ನು ತಾವೇ ವಹಿಸಿಕೊಳ್ಳಬೇಕಾಯಿತು. ಸಂಸ್ಥಾನದಲ್ಲಿ ಶಾಂತಿ ಕಾಯದೆ ಮತ್ತು ಸುವ್ಯವಸ್ಥೆಯನ್ನು ಕಾಯುದುಕೊಳ್ಳುವ ದೃಷ್ಟಿಯಿಂದ ಹಿಂದುಸ್ತಾನ ಸರಕಾರದವರು ಈ ಸಂಸ್ಥಾನದ ಆಡಳತೆಯನ್ನು ತಾವೇ ವಹಿಸಿಕೊಂಡರೆಂದು ಅಧಿಕೃತವಾಗಿ ಸಾರಲಾಗಿದೆ. ಸಿಕ್ಕಿಂ ಸಂಸ್ಥಾನವು ೧೮೯೦ ರಲ್ಲಿ ಹಿಂದುಸ್ತಾನದ ವೈಸರಾಯ ಮತ್ತು ಚೀನೀ ಪ್ರತಿನಿಧಿಯ ನಡುವೆ ಆದ ಒಡಂಬಡಿಕೆಯ ಪರಿಣಾಮವಾಗಿ ಬ್ರಿಟಿಶರ ಸುರಕ್ಷಿತ ಸಂಸ್ಥಾನವಾಯಿತು. ಆ ವರೆಗೆ ಅದರ ಮೇಲೆ ಅಧಿಕಾರ ನಡೆಸುತಿದ್ದ ಚೀನೀ ಸರಕಾರವು ಇದಕ್ಕೆ ಒಪ್ಪಿಗೆಯೀಯಿತು. ಆಗಷ್ಟ ೧೫ ಕ್ಕೆ ಬ್ರಿಟಿಶರು ಇಲ್ಲಿಂದ ಕಾಲ್ಕಿತ್ತಿದ್ದರಿಂದ ಈ ಸಂಸ್ಥಾನದವರೂ ಹಿಂದುಸ್ತಾನ ಸರಕಾರದ ಕೂಡ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡರು. ಆದರೆ ಹಿಂದುಸ್ತಾನದಲ್ಲಿ ಬೀಸಿದ ಸ್ವಾತಂತ್ರ್ಯದ ಗಾಳಿಯು ಈ ಸಂಸ್ಥಾನದ ಮೇಲೆಯೂ ಬೀಸಿ ಇಲ್ಲಿನ ಜನರೂ ಸ್ವಾತಂತ್ರ್ಯಕ್ಕಾಗಿ ಚಡಪಡಿಸಹತ್ತಿದರು. ಸಂಸ್ಥಾನಕಾಂಗ್ರೆಸ್ಸು ಸ್ಥಾಪಿತವಾಗಿ ಹೊಣೆಗಾರ ಸರಕಾರದ ಸ್ಥಾಪನೆಗಾಗಿ ಪ್ರಯತ್ನ ನಡೆಯಿತು. ಇದರಿಂದ ಮಹಾರಾಜರು ಮತ್ತು ಸರಕಾರದ ನಡುವೆ ದ್ವೇಷಭಾವನೆ ಬೆಳೆದು ಆಡಳತೆ ಸುಗಮವಾಗಿ ಸಾಗದಂತಾದ್ದರಿಂದ ಶಾಂತಿ ಸುವ್ಯವಸ್ಥೆಯ ಸ್ಥಾಪನೆಗಾಗಿ ಅದರ ಆಡಳತೆಯನ್ನು ವಹಿಸಿಕೊಳ್ಳಬೇಕಾಯಿತು. ಹಿಂದುಸ್ತಾನ ಸರಕಾರದ ವಿದೇಶ ಶಾಖೆಯ ಉಪಮಂತ್ರಿಗಳಾದ ಡಾ. ಕೇಸಕರರು ಇದಕ್ಕೂ ಮೊದಲು ಇಲ್ಲಿಸಂಚರಿಸಿ ಪರಿಸ್ಥಿತಿಯನ್ನೆಲ್ಲ ತಿಳಿದುಕೊಂಡಿದ್ದರು. ಹಿಂದುಸ್ತಾನಸರಕಾರದಸ್ನೈನ್ಯಬಂದುದರಲಾಭ ಪಡೆದು ಮಹಾರಾಜರು ಸಂಸ್ಥಾನದ ಆಡಳತೆಯನ್ನೆ ವಹಿಸಲು ಹಿಂದುಸ್ತಾನ ಸರಕಾರಕ್ಕೆ ಬಿನ್ನವಿಸಿಕೊಂಡರು. ತತ್ಪರಿಣಾಮವಾಗಿ ಹಿಂದುಸ್ತಾನ ಸರಕಾರವು ಈ ಸಂಸ್ಥಾನದ ಆಡಳತೆಯನ್ನು ವಹಿಸಿಕೊಂಡಿತು.

ಹಿಂದುಸ್ತಾನ ಸರಕಾರದವರು ಸದ್ಯಕ್ಕೆ ಸಿಕ್ಕಿಂದ ಆಡಳತೆಯನ್ನು ವಹಿಸಿಕೊಂಡ ಮಾತ್ರಕ್ಕೆ ಅದರ ಭವಿತವ್ಯದ ನಿರ್ಣಯವಾದಂತಾಯಿತೆಂದು ತಿಳಿಯಲಾಗದು. ನಿರಂಕುಶಾಧಿಕಾರಕ್ಕೆ ಅವಕಾಶವೀಯುವ ಯಾವದೇ ಬಗೆಯ ವ್ಯವಸ್ಥೆಗೆ ಇನ್ನುಮುಂದೆ ಅವಕಾಶ ದೊರೆಯದು. ಇದು ಸಾಧ್ಯವಾಗಬೇಕಾದರೆ ಈ ಸಂಸ್ಥಾನದ ಸ್ವರೂಪವೂ ಬದಲಾಗಬೇಕಾದುದು ಅವಶ್ಯವಾಗಿದೆ. ಸಮೀಪದ ಪ್ರಾಂತದಲ್ಲಿ ಈ ಸಂಸ್ಥಾನವನ್ನು ವಿಲೀನಗೊಳಿಸಿಬಿಟ್ಟರೆ ಸಂಸ್ಥಾನ ಪ್ರಜೆಗಳ ಆಕಾಂಕ್ಷೆಗಳು ಈಡೇರಲು ಅವಕಾಶವುಂಟಾಗುವದು. ಇಂಥ ಸಣ್ಣ ಸಣ್ಣ ಸಂಸ್ಥಾನಗಳನ್ನು ಹಾಗೆಯೇ ಇಡುವದರಿಂದ ಇಲ್ಲವೆ ಅವುಗಳ ಆಡಳತೆಯನ್ನು ಕೇಂದ್ರ ಸರಕಾರವು ವಹಿಸಿಕೊಳ್ಳುವದರಿಂದ ಉದ್ದೇಶವು ಸಫಲವಾಗದು; ಜನತೆಯ ಧ್ಯೇಯ, ಗುರಿಗಳೂ ಸಾಧಿಸವು. ಆಯಾ ನೆರೆಯ ಪ್ರಾಂತಗಳಲ್ಲಿ ಇವನ್ನು ಸಮಾವೇಶಮಾಡಿ ಬಿಟ್ಟರೆ ಸಾರ್ವತ್ರಿಕ ಅಭಿವೃದ್ಧಿಗೆ ಎಡೆಯುಂಟಾಗುವದು. ಅರ್ಧಮರ್ಧ ಮತ್ತು ಪೂರ್ಣ ಸ್ವತಂತ್ರವಾಗಿದ್ದ ಇಂಥ ಸಂಸ್ಥಾನಗಳ ಕಡೆಗೂ ಹಿಂದುಸ್ತಾನ ಸರಕಾರವು ಲಕ್ಷ್ಯವನ್ನು ಕೊಡಹತ್ತಿದೆಯೆಂಬುದು ಸಿಕ್ಕಿಂದ ಆಡಳತೆಯನ್ನು ವಹಿಸಿಕೊಂಡದ್ದರಿಂದ ಗೊತ್ತಾಗುವದು. ಇದೇ ರೀತಿ ನೇಪಾಳ ಭೂತಾನ ಮೊದಲಾದ ಪ್ರದೇಶಗಳ ಭವಿತವ್ಯವನ್ನು ನಿರ್ಣಯಿಸುವದು ಅವಶ್ಯವೆನಿಸಹತ್ತಿದೆ ಈ ಸಂಸ್ಥಾನಗಳಲ್ಲಿ ಇನ್ನು ಹಳೆಯ ತರದ ಆಡಳತೆಯೇ ನಡೆಯುತಿದ್ದು ಪ್ರಜೆಗಳಿಗೆ ಮೂಲಭೂತ ಹಕ್ಕುಗಳು ಕೂಡ ಸಿಕ್ಕುವುದಿಲ್ಲ. ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳೆಂದು ಈ ಪ್ರದೇಶಗಳು ಅಸ್ತಿತ್ವದಲ್ಲಿ ಉಳಿದರೆ ಅದರಿಂದ ಹಿಂದುಸ್ತಾನಕ್ಕೆ ಒಂದು ಬಗೆಯಿಂದ ಗಂಡಾಂತರವೇ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದುದರಿಂದ ಈ ಸಂಸ್ಥಾನಗಳ ಪ್ರಶ್ನೆಯನ್ನು ಆದಷ್ಟು ಬೇಗ ಬಿಡಿಸಲು ಹಿಂದುಸ್ತಾನ ಸರಕಾರವು ಅಣಿಯಾಗುವದೆಂದು ಆಶಿಸುತ್ತೇವೆ. ಅದೇ ರೀತಿಯಾಗಿ ಬ್ರಿಟಿಶೇತರರಾದ ಪೋರ್ತುಗೀಜ ಮತ್ತು ಫ್ರೆಂಚರ ಕಡೆಗಿದ್ದ ಪ್ರದೇಶಗಳನ್ನೂ ಹಿಂದುಸ್ತಾನ ಒಕ್ಕೂಟದಲ್ಲಿ ಸೇರಿಸಿಕೊಳ್ಳುವತ್ತ ಹಿಂದುಸ್ತಾನ ಸರಕಾರವು ತೀವ್ರ ಗಮನ ಕೊಡುವದವಶ್ಯವಾಗಿದೆ.

ಇದು ಪ್ರಾಸ್‌ಪೆಕ್ಟಸ್‌ವಲ್ಲ; ಶೇರು ಮಾರಾಟದ ಜಾಹೀರಾತು ಇದೆ

(ಕಂಪನಿಯ ಪ್ರಾಸ್‌ಪೆಕ್ಟಸ್‌ದ ಇಂಗ್ಲಿಷ್ ಪೂರಾ ಪ್ರತಿಯು, ರಜಿಸ್ಟ್ರಾರ ಆಫ್ ಜಾಯಿಂಟ ಸ್ಟಾಕ ಕಂಪನೀಜ, ಮುಂಬಯಿ ಇವರಲ್ಲಿ ನೊಂದಾಯಿಸಲಾಗಿದೆ.)

ಯಶವಂತ ಕನ್‌ಫೆಕ್‌ಶನರಿ ವರ್ಕ್ಸ ಲಿಮಿಟೆಡ್

ಉದ್ದೇಶ ಹಾಗೂ ಭಾವೀ ಪ್ರಗತಿ

ಇದರ ಜೊತೆಯಲ್ಲಿರುವ ಮೇಮೊರ್‍ಯಾಂಡಂ ಆಫ್ ಅಸೋಸಿಯೇಶನದಲ್ಲಿ ಸರ್ವ ಸಾಧಾರಣ ರೀತಿಯಿಂದ ನಮೂದ ಮಾಡಿದ ಉದ್ದೇಶದಿಂದ ಈ ಕಂಪನಿಯನ್ನು ಸ್ಥಾಪಿಸಲಾಗಿದೆ. ಕನ್‌ಫೆಕ್‌ಶನರಿ ಉದ್ಯೋಗದ ಯಾವತ್ತು ಕಾರ್‍ಯವು, ಅತ್ಯಾಧುನಿಕ ಪದ್ಧತಿಯಿಂದ ಬೆಳೆಸಬೇಕೆಂಬುದೇ ಪ್ರಮುಖ ಉದ್ದೇಶವಾಗಿದೆ. ನಮ್ಮ ಹಿಂದುಸ್ಥಾನದಲ್ಲಿ ಅಧುನಿಕ ಸಲಕರಣೆಗಳಿಂದ ಸಜ್ಜಾದ ಕನ್‌ಫೆಕ್‌ಶನರಿ ಕಾರಖಾನೆಗಳು ತೀರ ಕಡಿಮೆಯಾಗಿವೆ; ಮತ್ತು ಕನ್‌ಫೆಕ್‌ಶನರಿ ಪದಾರ್ಥಗಳ ಬೇಡಿಕೆಯಂತೂ ಒಂದೇ ಸವನೆ ಬೆಳೆಯುತ್ತಲೇ ಇದೆ. ಈ ವಿಷಯದಲ್ಲಿ ಮಧ್ಯವರ್ತಿ ಸರಕಾರದವರು, ಅನ್ನಖಾತೆಯವರಿಂದ ನೇಮಿಸಲಾದ ಸಮಿತಿಯ ಅಭಿಪ್ರಾಯದೊಳಗಿನ "ಶುಗರ ಕನ್‌ಫೆಕ್‌ಶನರಿ" ವಿಷಯದ ವಿಚಾರವು ಉಲ್ಲೇಖನೀಯವಾಗಿದೆ. ಅದು ಹೀಗೆ:-

"ಹಿಂದುಸ್ಥಾನದಲ್ಲಿಯ ಬಹುತರ ಯಾವತ್ತೂ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಮಿಠಾಯಿಗೆ ಬೇಡಿಕೆಯಿದ್ದದ್ದು ಕಂಡುಬರುತ್ತದೆ; ಮತ್ತು ಈ ಬೇಡಿಕೆಯು ವರುಷವರುಷಕ್ಕೆ ಬಹುತರವಾಗಿ ಒಂದೇಸವನೆ ಬೆಳೆಯುತ್ತಲೇ ಹೋಗುವದು. ತೀರ ಸಾದಾಸ್ವರೂಪದ ಲೆಕ್ಕ ಮಾಡಿ, ಹಿಂದುಸ್ಥಾನದ ಒಟ್ಟಾರೆ ಜನಸಂಖ್ಯೆಯಲ್ಲಿ ೧೦೦ ಕ್ಕೆ ೧೫ ರಂತೆ ಜನರು ಮಿಠಾಯಿ ಕೊಳ್ಳುವವರಿದ್ದಾರೆ ಮತ್ತು ತಲೆಯೊಂದಕ್ಕೆ ಎರಡು ಪೌಂಡು ಮಿಠಾಯಿ ಬೇಕೆಂದು ತಿಳಿದರೂ ನಮ್ಮ ನಾಡಿನ ಒಟ್ಟು ವರುಷದ ಬೇಡಿಕೆಯು ಸಾಧಾರಣವಾಗಿ ೧,೦೦,೦೦೦ ಟನ್ನು ಆಗುವದು."

ಮೇಲೆ ಕಾಣಿಸಿದ ಸಮಿತಿಯು ತನ್ನ ವರದಿಯನ್ನು ೧೯೪೩ ರ ಕೊನೆಕೊನೆಗೆ ಒಪ್ಪಿಸಿರುವದು. ಅದರಲ್ಲಿ ಹಿಂದುಸ್ಥಾನದಲ್ಲಿ ಈ ಜಿನಸುಗಳ ಉತ್ಪಾದನೆಯು, ಸಾಧಾರಣವಾಗಿ ೨೦,೦೦೦ ಟನ್ನುಗಳೆಂದೇ ತೋರಿಸಲಾಗಿದೆ. ಈಗಿನ ಪರಿಸ್ಥಿತಿಯಲ್ಲಿಯೂ ಇಂದಿಗೂ ಅದರಲ್ಲಿ ಒಡೆದು ಕಾಣುವಷ್ಟು ವ್ಯತ್ಯಾಸವಾಗಿಲ್ಲೆಂಬ ಸಂಗತಿಯೂ ಸತ್ಯವಾಗಿದೆ.

ನಮ್ಮ ದೇಶದೊಳಗಿನ ಮಿಠಾಯಿಯ ಹುಟ್ಟುವಳಿ ಹಾಗೂ ಮಾರಾಟ ಇವೆರಡರ ಪ್ರಮಾಣವನ್ನು ನೋಡಿದರೆ, ಯೋಜನಾಬದ್ಧವಾದ ಮತ್ತು ಅದ್ಯಾವತ್ ಸಲಕರಣೆಗಳಿಂದ ಯುಕ್ತವಾದ ಕನ್‌ಫೆಕ್‌ಶನರಿ ಉದ್ಯೋಗಕ್ಕೆ ಇನ್ನೂ ಬಹಳೇ ಅನುಕೂಲತೆಯಿದೆಂಬುದು ಮೇಲಿನವಿಧಾನಗಳಿಂದ ಸ್ಪಷ್ಟವಾಗುತ್ತದೆ. ಈ ಬೆಳೆಯುತ್ತಿರುವ ಬೇಡಿಕೆಗೆ ಎದೆಗೊಡಲು ಪ್ರಯತ್ನಿಸುವದೇ ಈ ಕಂಪನಿ ಸ್ಥಾಪನೆಯ ಹೆಗ್ಗುರಿಯಾಗಿದೆ. ಈ ಹುಟ್ಟುವಳಿಗೆ ವಿಲಂಬವಾಗಬಾರದೆಂದು 'ಯಶವಂತ ಕನ್‌ಫೆಕ್‌ಶನರಿ ವರ್ಕ್ಸ' ಕಂಪನಿಯು, ಗುಡ್‌ವಿಲ್ ದಿಂದೊಡಗೂಡಿದ ಎಲ್ಲ ಸಾಧನ ಸಾಮುಗ್ರಿಗಳನ್ನು ಕೊಂಡುಕೊಂಡಿದೆ. ಕಂಪನಿಯ ಹಿಂದಿನ ಕೆಲ ವರುಷಗಳ ವರದಿಗಳನ್ನು ನೋಡಲು, ತಕ್ಕಷ್ಟು ಭಾಂಡವಲಿನ ಅಭಾವದ ಮೂಲಕವೇ ಉದ್ಯೋಗ ಬೆಳವಣಿಗೆಯ ಭಾವೀ ಆಕಾಂಕ್ಷೆಗಳಲ್ಲಿ ಎಡರು ತೊಡರುಗಳು ಉಂಟಾಗಿವೆಯೆಂದು ಸಿದ್ಧವಾಗುತ್ತದೆ.

ಈ ಬಗೆಯ ಅಪೂರ್ಣ ಭಾಂಡವಲದಿಂದಲೂ ಸಹ ಕಂಪನಿಗೆ ೩೧ ಮಾರ್ಚ ೧೯೪೩ ಕ್ಕೆ ಕೊನೆಗೊಂಡ ವರುಷದಲ್ಲಿ ೮,೩೯೦-೪-೯ ರೂಪಾಯಿ ಲಾಭವಾಗಿದೆ. ಹೋದವರುಷದ ಡಿಶಂಬರ ತಿಂಗಳಲ್ಲಿ ಸಕ್ಕರೆಯ ನಿಯಂತ್ರಣವು ಹೊರಬಿದ್ದಿದ್ದರಿಂದ ೩೧ ಮಾರ್ಚ ಕೊನೆಯ ವರೆಗೆ ಮೂರೇ ತಿಂಗಳು ಭರದಿಂದ ಕೆಲಸ ಸಾಗಿಸಲಾಯಿತು. ಅಷ್ಟೇ ಅವಧಿಯಲ್ಲಿ ಕಂಪನಿಗೆ ರೂ. ೫೩೧೩-೧-೦ ಲಾಭವಾಯಿತು. ಇದರ ಮೇಲಿಂದ ಹೆಚ್ಚು ಹೆಚ್ಚು ಹಣವನ್ನು ತೊಡಗಿಸಿ, ಹುಟ್ಟುವಳಿಯನ್ನು ಬೆಳೆಸಿದಂತೆ ಲಾಭದ ಪ್ರಮಾಣವೂ ಬೆಳೆಯುವದೆಂದು ಸ್ಫುಟವಾಗಿ ಕಂಡುಬರುವದು.

ಕಾರ್‍ಯದೊಳಗಿನ ನೈಪುಣ್ಯವು ಬೆಳೆಯಬೇಕೆಂದು ಕಂಪನಿಯು, ಇದೇ ಉದ್ಯೋಗದಲ್ಲಿ ಎಷ್ಟೋ ವರುಷಗಳಿಂದ ನುರಿತ ಶ್ರೀ. ಕೆ. ಎಲ್. ಜೋಗದೇವ ಎಂಬ ಮಹನೀಯರ ಅನುಭವದ ನೆರವು ಪಡೆದು, ಅವರ ಸಹಕಾರವನ್ನು ಸಂಪಾದಿಸಿರುವದು; ಮತ್ತು ತಂತ್ರ-ವಿಶಾರದರಾದ ಶ್ರೀ. ಎಸ್. ವ್ಹಿ. ಗೋಡಬೋಲೆ ಇವರೂ ಕಂಪನಿಗೆ ಕಾಲಕಾಲಕ್ಕೆ ತಮ್ಮ ದೀರ್ಘ ಕಾಲದ ಅನುಭವದ ಹಾಗೂ ಜ್ಞಾನದ ನೆರವು ನೀಡುವ ಅಶ್ವಾಸನವನ್ನು ದಯಪಾಲಿಸಿರುವರು; ಮತ್ತು ಭಾರತೀಯರ ರುಚಿಗೆ ಸರಿಹೋಗುವಂಥ ಕಂಪನಿಯ ಬಗೆಬಗೆಯ- ಪೇಪರಮಿಂಟುಗಳನ್ನು ಪೇಟೆಯಲ್ಲಿ ತರುವ ಯೋಜನೆಯನ್ನೂ ಮಾಡಿರುವರು.

ಅಧಿಕೃತ ಭಾಂಡವಲು --- ೨,೦೦,೦೦೦ ರೂಪಾಯಿ

ಪ್ರತಿಯೊಂದು ೨೫ ರೂ. ಗಳಂತೆ ೫ ರೂ. ಬಡ್ಡಿಯ ೨,೦೦೦ ರಿಡೀಮೇಬಲ್ ಕ್ಯುಮ್ಯುಲೇಟಿವ್ಹ ಪ್ರೆಫರನ್ಸ ಶೇಅರುಗಳಲ್ಲಿ ಮತ್ತು ಪ್ರತಿಯೊಂದು ೧೦ ರೂ ಗಳಂತೆ ೧೫,೦೦೦ ಆರ್ಡಿನರಿ (ಸಾಮಾನ್ಯ) ಶೇಅರುಗಳಲ್ಲಿ ವಿಭಾಗಿಸಲಾಗಿದೆ

ಮಾರಾಟಕ್ಕಾಗಿ ತೆಗೆದ ಭಾಂಡವಲು--- ೧,೦೦,೦೦೦

ಪ್ರತಿಯೊಂದು ೨೫ ರೂಪಾಯಿಗಳಂತೆ ೫ ರೂಪಾಯಿ ಬಡ್ಡೀ ದರದ ೧,೦೦೦ ರಿಡೀಮೇಬಲ್ ಕ್ಯುಮ್ಯುಲೇಟಿವ್ಹ ಪ್ರೆಫರನ್ಸ ಶೇಅರುಗಳಲ್ಲಿ ವಿಭಾಗಿಸಿದೆ. ಪ್ರತಿಯೊಂದು ಶೇರು ೨೫ ರೂ. ಗಳದಿದ್ದು ಅರ್ಜಿಯ ಸಂಗಡ ೧೫ ರೂ. ಮತ್ತು ಅರ್ಜಿ ಮಂಜೂರಾಯಿತೆಂದರೆ ೧೦ ರೂ. ಕೊಡಬೇಕಾಗುವದು; ಹಾಗೂ ಇನ್ನುಳಿದ ೭೫,೦೦೦ ರೂ. ಯನ್ನು ಪ್ರತಿಯೊಂದು ೧೦ ರೂ. ಗಳಂತೆ ೭,೫೦೦ ಆರ್ಡಿನರಿ ಶೇಅರುಗಳಲ್ಲಿ ವಿಭಾಗಿಸಿದೆ. ಪ್ರತಿಯೊಂದು ಶೇರು ೧೦ ರೂ. ಗಳದಿದ್ದು ಶೇಅರಿನ ಅರ್ಜಿಯ ಸಂಗಡ ೫ ರೂ., ಅರ್ಜಿ ಮಂಜೂರಾಯಿತೆಂದರೆ ೫ ರೂ. ಕೊಡಬೇಕಾಗುವದು.

ಸಂಚಾಲಕ ಮಂಡಲ

೧ ಶೇಠ ಆದಮ ಎ. ಬಂದುಕವಾಲಾ (ಅಧ್ಯಕ್ಷ) ವ್ಯಾಪಾರಸ್ಥರು, ಬೆಳಗಾವಿ.
ಸಂಚಾಲಕ— ದಿ ಬ್ಯಾಂಕ ಅಫ್ ಸಿಟಿಝನ್ಸ ಲಿ. ಬೆಳಗಾವಿ
ಸಂಚಾಲಕ— ದಿ ಸೋಶಲ್ ಸರ್ವಿಸ ಪ್ರಾವ್ಹಿಡೆಂಟ ಇನ್‌ಶ್ಯೂರನ್ಸ ಕಂಪನಿ ಲಿ. ಬೆಳಗಾವಿ.
ಸಂಚಾಲಕ— ದಿ ಕರ್ನಾಟಕ ಇನ್‌ವ್ಹೆಸ್ಟಮೆಂಟ ಟ್ರಸ್ಟ ಲಿ.-ಬೆಳಗಾವಿ.

೨ ಶ್ರೀ ವ್ಹಿ. ಡಿ. ಯಾರ್ದಿ, ಜಮೀನದಾರ, ಖಾನಾಪೂರ-ಬೆಳಗಾವಿ.
ಸಂಚಾಲಕ— ಸಾಯನಾಕರ ಬಂಧು ಲಿ, ಭವಾನಿನಗರ, ಜಿ. ಸಾತಾರಾ.

೩ ಶ್ರೀ ಕೆ. ಕೆ. ಹಂಡೆ, ಪ್ರೊಪ್ರಾಯಟರ ಲಕ್ಷ್ಮೀ-ಸೋಡಾವಾಟರ ಫ್ಯಾಕ್ಟರಿ ಬೆಳಗಾವಿ
ಸಂಚಾಲಕ— ಸಾಯನಾಕರ ಬಂಧು ಲಿ. ಭವಾನಿನಗರ ಜಿ. ಸಾತಾರಾ.
ಸಂಚಾಲಕ— ಸಾಯನಾಕರ ಮ್ಯಾಚ್ ವರ್ಕ್ಸ ಲಿ. ಭವಾನಿನಗರ ಜಿ. ಸಾತಾರಾ.
ಕೌನ್‌ಶೀಲರ ಶಹಾಪೂರ, ಮ್ಯುನಸಿಪಾಲ್ಟಿ, ಶಹಾಪೂರ-ಬೆಳಗಾವಿ.

೪ ಶ್ರೀ ಎಮ್. ಪಿ. ಪೋವಾರ ... ಟಿಳಕವಾಡಿ, ಬೆಳಗಾವಿ.

೫ ಶ್ರೀ ಪಿ. ಆರ್. ಸಿದ್ದಯೇ, ವ್ಯಾಪಾರಸ್ಥರು ಮತ್ತು ಕಮೀಶನ್ ಏಜಂಟರು ಬೆಳಗಾವಿ

೬ ಶ್ರೀ ಕೆ. ಎಲ್. ಜೋಗದೇವ, ಕನ್‌ಫೆಕ್‌ಶನರಿ ಮ್ಯಾನುಫ್ಯಾಕ್ಚರರು, ಅನಗೋಳ ರೋಡ, ಟಿಳಕವಾಡಿ-ಬೆಳಗಾವಿ.
ಸಂಚಾಲಕ— ಸಾಯನಾಕರ ಬಂಧು ಲಿ. ಭವಾನಿನಗರ, ಜಿ. ಸಾತಾರಾ.

೭ ಶ್ರೀ ಜಿ. ವ್ಹಿ. ಗಾದಗೀಳ (ಪದಸಿದ್ಧ), ಜಿ. ಡಿ. ಕಾಮ್, ಕಮೀಶನ್ ಎಜಂಟರು, ಅನಗೋಳ-ಬೆಳಗಾವಿ.

೮ ಶ್ರೀ ವ್ಹಿ. ಎಲ್. ಜೋಗದೇವ (ಪದಸಿದ್ಧ), ಬೇಡೇಕರ ಸದರ, ನೇರಲ,ಜಿ. ಕುಲಾಬಾ.

ಬ್ಯಾಂಕರರು

೧ ದಿ ನ್ಯೂ ಸಿಟಿಝನ್ ಬ್ಯಾಂಕ ಆಫ್ ಇಂಡಿಯಾ ಲಿ. ಮುಂಬಯಿ ಮತ್ತು ಶಾಖೆ.
೨ ದಿ ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ ಲಿ. ಮುಂಬಯಿ ಮತ್ತು ಶಾಖೆ.
೩ ದಿ ಬೆಳಗಾವ ಬ್ಯಾಂಕ ಲಿ. ಬೆಳಗಾವಿ ಮತ್ತು ಶಾಖೆ.

ಆಡಿಟರರು

೧ ಮೆಸರ್ಸ ಏ. ವ್ಹಿ. ದೇಶಪಾಂಡೆ ಮತ್ತು ಕಂಪನಿ, ಇನ್ ಕಾರ್ಪೋರೇಟೆಡ್ ಅಕೌಂಟಂಟ್ಸ (ಲಂಡನ), ರಜಿಸ್ಟರ್ಡ ಅಕೌಂಟಂಟ್ಸ ಅಂಡ್ ಆಡಿಟರರು, ಮುಂಬೈ ಹಾಗೂ ಬೆಳಗಾವಿ.

ಲೀಗಲ್ ಅಡ್‌ವ್ಹಾಯಜರರು

೧ ಶ್ರೀ ವ್ಹಿ. ಆರ್ ಭಟ, ಎಮ್. ಏ. ಎಲ್. ಎಲ್. ಎಮ್., ಪ್ರಾಚಾರ್ಯ, ರಾಜಾ ಲಖಮಗೌಡಾ ಲಾ ಕಾಲೇಜ, ಟಿಳಕವಾಡಿ-ಬೆಳಗಾವಿ
೨ ಶ್ರೀ ಏ. ವ್ಹಿ. ಕುಲಕರ್ಣಿ, ಬಿ.ಎ., ಎಲ್. ಎಲ್. ಬಿ. ವಕೀಲ, ಅನಗೋಳ-ಬೆಳಗಾವಿ.

ಟೆಕ್‌ನಿಕಲ್ ಅಡ್‌ವ್ಹಾಯಜರರು

೧ ಶ್ರೀ ಎಸ್. ವ್ಹಿ. ಗೋಡಬೋಲೆ, ಎಮ್. ಎಸ್. ಸಿ, ಬಿ./ಏಜಿ., ಟೆಕ್‌ನಿಕಲ್ ಎಕ್ಸಪರ್ಟ, ಟಿಳಕವಾಡಿ-ಬೆಳಗಾವಿ.

ರಜಿಸ್ಟರ್ಡ ಆಫೀಸು

"ಯಶವಂತ ನಿವಾಸ", ಅನಗೋಳ ರೋಡ, ಪೋಸ್ಟ ಟಿಳಕವಾಡಿ-ಬೆಳಗಾವಿ

ಪ್ರಾಥಮಿಕ ವೆಚ್ಚ

ಕಮಿಶನ್ ಮತ್ತು ಬ್ರೋಕರೇಜದ ಹೊರತಾಗಿ ಪ್ರಾಥಮಿಕ ವೆಚ್ಚವು ೫,೦೦೦ ರೂಪಾಯಿಗಳಿಗಿಂತ ಹೆಚ್ಚಿಗೆ ಬರಲಾರದು.

ಕನಿಷ್ಠ ಬಂಡವಾಳ

ತೀರ ಕಡಿಮೆಯೆಂದರೆ, ೨೫,೦೦೦ ರೂ. ಗಳ ದರ್ಶನಿ ಬೆಲೆಯ ಶೇಅರುಗಳಿಗಾಗಿ ಅರ್ಜಿಗಳು ಬಂದ ಕೂಡಲೆ, ಸಂಚಾಲಕ ಮಂಡಲವು ಶೇಅರುಗಳ ಮಂಜೂರಿಯನ್ನಾರಂಭಿಸುವದು.

ಮ್ಯಾನೇಜಿಂಗ ಎಜಂಟರೂ ಅವರ ಶ್ರಮ—ಧನವೂ

ಕಂಪನಿಯು ರಜಿಸ್ಟರ ಮಾಡಿದಂದಿನಿಂದ ಇಪ್ಪತ್ತು ವರುಷಗಳ ಅವಧಿಯ ವರೆಗೆ, ಮೆಸರ್ಸ ಜೋಗದೇವ ಅ್ಯಂಡ್ ಸನ್ಸ ಇವರನ್ನು ಮ್ಯಾನೇಜಿಂಗ ಎಜಂಟರೆಂದು ನೇಮಿಸಲಾಗಿದೆ.

(ಅ) ಮ್ಯಾನೇಜಿಂಗ ಎಜಂಟರೆಂದು ಅವರಿಗೆ ತಿಂಗಳೊಂದಕ್ಕೆ ೩೦೦ ರೂ. ಶ್ರಮಧನ (ಮುಶಾಹಿರಾ) ಕೊಡಲಾಗುವದು- ಪ್ರತಿ ವರುಷ ೫೦ ರೂ. ಗಳಂತೆ, ಅದನ್ನು ೫೦೦ ರೂ. ಗಳ ವರೆಗೆ ಬೆಳೆಸಲಾಗುವದು.

(ಬ) ಯಾವ ವರುಷ ೧೦೦ ಕ್ಕೆ ೪ ರಿಂದ ೬ ರ ವರೆಗೆ ಡಿವ್ಹಿಡೆಂಡ (ಬಡ್ಡಿ) ಹಂಚಲು ಶಕ್ಯವಾಗುವದೊ ಆ ವರುಷ ಮ್ಯಾನೇಜಿಂಗ ಎಜಂಟರಿಗೆ ೧೦೦ ಕ್ಕೆ ೧೫ ರಂತೆ ಹೆಚ್ಚಿಗೆ ಕಮೀಶನ್ ದೊರೆಯುವದು; ಮತ್ತು ಇದರಂತೆಯೇ ೧೦೦ ಕ್ಕೆ ೬ ರಂತೆ ಇಲ್ಲವೆ ಅದಕ್ಕೂ ಹೆಚ್ಚಿಗೆ ಡಿವ್ಹಿಡೆಂಡ ಹಂಚುವ ಶಕ್ಯತೆಯುಂಟಾದಲ್ಲಿ, ಆ ವರುಷ ಅವರಿಗೆ ೧೦೦ ಕ್ಕೆ ೨೦ ರಂತೆ ಹೆಚ್ಚಿಗೆ ಕಮೀಶನ್ ದೊರೆಯುವದು.

ಕಮೀಶನ್ ಹಾಗೂ ಬ್ರೋಕರೇಜ

ಕಂಪನಿಯು ಅಧಿಕೃತ ಪ್ರತಿನಿಧಿಗಳಿಗೆ ಅವರು ದೊರಕಿಸಿ ಕೊಟ್ಟ ಶೇರುಗಳ ದರ್ಶನಿ ಬೆಲೆಯಲ್ಲಿ ಹೆಚ್ಚೆಂದರೆ ೧೦೦ ಕ್ಕೆ ೫ ರಂತೆ ಕಮೀಶನವಾಗಲಿ, ಬ್ರೋಕರೇಜವಾಗಲಿ ಕೊಡುವದು.

ಸಂಚಾಲಕರ ಯೋಗ್ಯತೆ

ಕಂಪನಿಯ ೨,೦೦೦ ರೂ. ದರ್ಶನಿ ಬೆಲೆಯ ಶೇಅರು ತೆಗೆದುಕೊಳ್ಳುವವರಿಗೆ ಮಾತ್ರ ಸಂಚಾಲಕರಾಗುವ ಯೋಗ್ಯತೆಯು ಪ್ರಾಪ್ತವಾಗುವದು; ಆದರೆ ಈ ನಿರ್ಬಂಧವು ಮೊದಲಿನ ಸಂಚಾಲಕರಿಗೂ ಪದಸಿದ್ಧ ಇಲ್ಲವೆ ಕರ್ಜಕತಬಿಗಳನ್ನು ತೆಗೆದುಕೊಳ್ಳುವವರ ಮುಖಾಂತರದ ಸಂಚಾಲಕರಿಗೆ ಅನ್ವಯಿಸುವದಿಲ್ಲ.

ಸಂಚಾಲಕರ ಸಹಾಯ ಧನ

ಸಂಚಾಲಕ ಮಂಡಲದ ಇಲ್ಲವೆ ಸಮಿತಿಯ ಸಭೆಗೆ ಉಪಸ್ಥಿತನಿದ್ದ ಬಗ್ಗೆ ಪ್ರತಿಯೊಬ್ಬ ಸಂಚಾಲಕನಿಗೆ ಅವನ ಕೆಲಸಕ್ಕಾಗಿ ಸಹಾಯಧನವೆಂದು ೫೦ ರೂ. ಗಳಿಗಿಂತ ಹೆಚ್ಚಾಗದಷ್ಟು ಹಣ ಸಂಚಾಲಕ ಮಂಡಲವು ಗೊತ್ತು ಮಾಡಿದಷ್ಟು ಕೊಡಲಾಗುವದು.

ಸಂಚಾಲಕ ಮಂಡಲವು ಯಾವದೇ ಸಂಚಾಲಕನಿಗೆ, ಅವನು ಬೆಳಗಾವಿಯ ರಹಿವಾಸಿಯಾಗಿರದಿದ್ದರೆ, ಸಭೆಗೆ ಉಪಸ್ಥಿತನಾದ ಬಗ್ಗೆ ಮೇಲ್ಕಾಣಿಸಿದ ಅವನ ಗೊತ್ತಾದ ಸಹಾಯಧನವನ್ನಲ್ಲದೆ ಪ್ರವಾಸದ ವೆಚ್ಚವೆಂದು ಹೆಚ್ಚು ಹಣ ಕೊಡಬಹುದು, ಇಲ್ಲವೆ ಯಾವನೊಬ್ಬ ಸಂಚಾಲಕನಾಗಲಿ, ಸಂಚಾಲಕರಾಗಲಿ ಕಂಪನಿಯ ಸಲುವಾಗಿ, ಅದರ ನಿಯಮಗಳಿಗನುಸಾರವಾಗಿ ಹೆಚ್ಚು ಕೆಲಸ ಮಾಡಿದಲ್ಲಿ ಅದರ ಸಲುವಾಗಿಯೂ ಕಾಲಕಾಲಕ್ಕೆ ಅವರಿಗೆ ಕೊಡಬೇಕಾದ ಹೆಚ್ಚಿನ ಸಹಾಯಧನ [ಮುಶಾಹಿರಾ] ಗೊತ್ತುಮಾಡಿ, ಅದನ್ನೂ ಅವರಿಗೆ ಸಲ್ಲಿಸಬಹುದು.

ಉದ್ಯೋಗದ ಖರೀದಿ

ಶ್ರೀ ಕೇಶವ ಲಕ್ಷ್ಮಣ ಜೋಗದೇವ ಅನಗೋಳರೋಡ, ಟಿಳಕವಾಡಿ ಬೆಳಗಾಂವ ಇವರಿಂದ ಅವರ 'ಯಶವಂತ ಕನ್‌ಫೆಕ್‌ಶನರಿ ವರ್ಕ್ಸ' ಎಂಬ ಚಾಲತಿ (ಕೆಲಸ ಕೊಡುತ್ತಿರುವ) ಕಾರಖಾನೆಯನ್ನು ಈ ವರ್ಷ ಕೊಂಡುಕೊಳ್ಳಲು ಕರಾರನ್ನು ಕಂಪನಿಯು ಅವರೊಡನೆ ಮಾಡಿಕೊಂಡಿರುವದು. ಕಳೆದ ಮೂರು ವರುಷಗಳಲ್ಲಿ ಈ ಉದ್ಯೋಗದಲ್ಲಾದ ಲಾಭದ ಪತ್ರಿಕೆ ಮತ್ತು ೩೧-೧-೧೯೪೪ ರ ಕೊನೆಯ ಆಢಾವೆಪತ್ರಿಕೆ ಹಾಗೂ ಪ್ರಾಸ್ಪೆಕ್ಟಸ್ ಇದರ ಜೊತೆಯಲ್ಲಿ ಇಡಲಾಗಿದೆ. ಖರೀದಿ ಸಲುವಾಗಿ ಕಂಪನಿಯು ಅವರಿಗೆ ರೋಖ ೧೦,೦೦೦ ರೂ. ಮತ್ತು ೪,೦೦೦ ರೂ. ಗಳ ದರ್ಶನಿ ಬೆಲೆಯ ಪೂರಾ ರಕಮು ತುಂಬಿದ ಸಾಮಾನ್ಯ (ಆರ್ಡಿನರಿ) ಶೇರು ಕೊಡುವದನ್ನು ಗೊತ್ತುಮಾಡಲ್ಪಾಗಿದೆ. ಅದರಲ್ಲಿ ರೋಖ ೪೦೦೦ ರೂಪಾಯಿ ಮತ್ತು ೪೦೦೦ ರೂ. ಗಳ ದರ್ಶನಿ ಬೆಲೆಯ ಆರ್ಡಿನರಿ ಶೇಅರು ಇಷ್ಟು ಹಣ ಗುಡ್‌ವಿಲ್ ಎಂದು ಕೊಡಲಾಗಿದೆ.

(೧೫ನೆಯ ಪುಟ ನೋಡಿರಿ)

Sharatchandra Advtg. Belgaum

ಸಭಾಶಾಸ್ತ್ರ

(ನಾ. ಕಸ್ತೂರಿ)

ಇಂದು ಸಭಾಪರ್ವ.... ಪ್ರಜಾಸತ್ತೆಯ ಯುಗ, ಸಹಜವಾಗಿಯೇ ಸಭಾಪರ್ವ! ಸಭೆಗಳನ್ನು ಸೇರಿಸಿ, ಜನರೆದುರು ವಿಚಾರಪೂರಿತವಾದ ಪ್ರಚಾರಭಾಷಣಗಳನ್ನು ಸುರಿದು, ಅವರನ್ನು ನಲಿಸಿ ಒಲಿಸುವುದು ನಾಯಕರ ಕರ್ತವ್ಯ. ಅದ್ದರಿಂದಲೇ, ಈಗ ನಾವು ಯಾವ ಪತ್ರಿಕೆಯನ್ನು ತೆರೆದರೂ ನಡೆಯಲಿರುವ, ನಡೆದ, ನಡೆಯುತ್ತಿರುವ ಸಮ್ಮೇಲನ, ಸಭೆಗಳ ಸುದ್ದಿಗಳನ್ನೂ ಕಾಗದತುಂಬ ಕಾಣುತ್ತಿರುವುದು.

ಆದರೆ, ಈಚೆಗೆ ಹಲವು ವರ್ಷಗಳಿಂದ ಕನ್ನಡ ನಾಡಿನಲ್ಲೂ ಇತರ ಪ್ರಾಂತಗಳಲ್ಲೂ ಬೆಳೆದು ಬೆಂಗಾಡಾಗಿರುವ ಸಭಾಶಾಸ್ತ್ರದ ತೊಡಕುಗಳಿಂದ ಉಪನ್ಯಾಸಕರಿಗೂ ಸಂಚಾಲಕರಿಗೂ ತುಂಬ ಅಡ್ಡಿ ಆತಂಕಗಳಾಗುತ್ತಿವೆ, ಎಂದು ಸೂಚಿಸುವುದೇ ಈ ಲೇಖನದ ಉದ್ದೇಶ.

ಸಭೆ ಸೇರಿಸುವುದಕ್ಕೆ ಸಭಾಮಂದಿರ ಬೇಕಾಗಿಲ್ಲವೆಂಬುದು ಒಂದು ದೊಡ್ಡ ಅನುಕೂಲ. ಮರದ ನೆರಳೋ, ಮರಳಿನ ರಾಶಿಯೋ, ಗುಡಿಯ ಮಂಟಪವೋ, ಯಾವುದಾದರೂ ಸಾಕು. ಸಂಜೆ ಹೊತ್ತು ಬೇರೆ ಯಾವ ಕೆಲಸ ಕಾರ್ಯಗಳೂ ಇಲ್ಲದ, ಒಂಟಿಯಾಗಿ ಒಂದು ಮೈಲಿ ದೂರ ಕಾಲು ಬೀಸಿಕೊಂಡು ನಡೆದು ದೇಹಕ್ಕೂ ಮನಸ್ಸಿಗೂ ಆನಂದವನ್ನು ಕೊಡಲರಿಯದ ಜನರಂತೂ ಪ್ರತಿ ಒಂದು ಊರಲ್ಲೂ ಇರುತ್ತಾರೆ. ಎಲ್ಲಿ ನಾಲ್ಕು ಮಂದಿ ಸೇರುತ್ತಾರೊ, ಅಲ್ಲೆಲ್ಲ ಇಂಥವರು ಒಬ್ಬರಾದ ಮೇಲೊಬ್ಬರು ಬಂದು ಐದು, ಆರು, ಏಳು ಎಂದು ಸಭೆಯನ್ನು ಅಲಂಕರಿಸುತ್ತಾರೆ. ಉಪನ್ಯಾಸಕರು ಯಾರೇ ಆಗಲಿ, ವಿಷಯ ಏನೇ ಇರಲಿ, ನಮ್ಮೂರಲ್ಲಿ ಸಂಜೆ ೬ ಗಂಟೆಗೆ ಕನಿಷ್ಠ ಪಕ್ಷ ೩೦ ಸೋಮಾರಿಗಳಾದರೂ ಚಂದ್ರಗ್ರಹಣದದಿನ ಕೂಡ ಸಭಿಕರಾಗಿ ಸಿಕ್ಕೇ ಸಿಕ್ಕುತ್ತಾರೆ. ಅದ್ದರಿಂದ, ಸಂಚಾಲಕರುಯಾರೂ ಆ ವಿಷಯದಲ್ಲೂ ಚಿಂತೆ ಹಚ್ಚಿಕೊಳ್ಳಬೇಕಾಗಿಲ್ಲ.

ಇನ್ನು ಉಳಿದಿರುವುದು, "ಪ್ರಾರ್ಥನೆ" ಹಿಂದೂಸ್ತಾನ "ಸೆಕ್ಯುಲರ್ ಸ್ಟೇಟ್" ಆದರೂ, ಪ್ರತಿ ಒಂದು ಸಭೆಗೆ ಮೊದಲೂ, ದೇವತೆಗಳನ್ನು ಪ್ರಾರ್ಥಿಸಿಕೊಳ್ಳುವುದು ಸಭಾಶಾಸ್ತ್ರ, ನಡುವೆ ಮಳೆ ಬರದಿರುವುದಕ್ಕೂ ಕಲ್ಲುಗಳು ಬೀಳದಿರುವುದಕ್ಕೂ, ಕೇಳುವವರ ಕಿವಿ ಅರಳುವುದಕ್ಕೂ ಅವರು ಮತ್ತೊಮ್ಮೆ ಇಂಥ ಸಭೆಗೆ ಮರಳುವುದಕ್ಕೂ ದೇವರನ್ನು ಪ್ರಾರ್ಥಿಸುವುದು ಸೂಕ್ತ. ಅದನ್ನು ಸಂಚಾಲಕನೇ ಸದಾ ಮಾಡುತ್ತಿರುತ್ತಾನೆ. ಆದರೆ, ಸಭಾಶಾಸ್ತ್ರದ ಪ್ರಕಾರ, ಈ ಕಾರ್ಯವನ್ನು ಊರಿನ ಶಾಲಾ ಬಾಲಿಕೆಯರೇ ಮಾಡಬೇಕು; ಅಪಸ್ವರ- ಅರ್ಥಗಟಿ, ಎಷ್ಟು ಹೆಚ್ಚು ಇದ್ದಿತೋ, ಅಷ್ಟು ಅನುಕೂಲ. ಬಾಲಿಕೆಯರು ತಮ್ಮ ಶಾಲೆಗಳಲ್ಲಿ ದಿನದಿನವೂ ಹಾಡುವ ಸಾಮೂಹಿಕ ಗೀತೆಯಾದರೆ ಬಹಳ ಒಳ್ಳೆತು.

ಸಭೆ ಎಂದರೆ, ಉಪನ್ಯಾಸ; ಉಪನ್ಯಾಸಕೊಬ್ಬ ಉಪನ್ಯಾಸಕ; ಅದನ್ನು ಕೇಳುತ್ತ ಆತನ ಪಕ್ಕದಲ್ಲೇ ಕುಳಿತು ಆಕಳಿಸುವುದಕ್ಕೊಬ್ಬ ಅಧ್ಯಕ್ಷ.... ಇಷ್ಟೇ ಅನಿವಾರ್ಯ ಎಂಬುದು ಶಾಸ್ತ್ರ. ಆದರೆ, ಈಚೆಗೆ, ಮತ್ತೊಬ್ಬ ವ್ಯಕ್ತಿಯೂ ಅತ್ಯಗತ್ಯ ಎಂದು ಟೀಕಾಕಾರರು ಹೇಳತೊಡಗಿದ್ದಾರೆ. ಈ ಕಂದಾಚಾರಕ್ಕೆ ಅನೇಕ ಸಂಚಾಲಕರೂ ಸಭಾಕರ್ತರೂ ಬಾಯಿಬಿಗಿದು ತಲೆ ಬಾಗಿರುತ್ತಾರೆ. ಅವರು ಯಾರೆಂದರೆ, ಉದ್ಘಾಟಕರು! ಅರ್ಧಗಂಟೆಯ ಕಾಲ ನಡೆಯುವುದೆಂದು ಗೊತ್ತಾಗಿರುವ ಸಭೆಗೂ ಉದ್ಘಾಟಕ! ತನಗೆ ಬೇಕಾದ ಒಬ್ಬರು ದೊಡ್ಡ ಮನುಷ್ಯರನ್ನು ಸಭೆಗೆ ಎಳೆತಂದು, ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವ ಫಿತೂರಿ ಹೂಡಿದ, ಯಾರೋ ಒಬ್ಬರ ತಂತ್ರ ಇದು. ಹೇಗೋ, ಸಭಾಶಾಸ್ತ್ರದಲ್ಲಿ ಒಂದು ಪಂಕ್ತಿಯನ್ನು ಆಕ್ರಮಿಸಿಕೊಂಡು ಬಿಟ್ಟಿದೆ. ಅದನ್ನು ತೊಡೆದು ಹಾಕಲು ಯಾರಿಂದಲೂ ಸಾಧ್ಯವಿಲ್ಲ. ಅದ್ದರಿಂದ ಸಂಚಾಲಕನ ಕೆಲಸ ಬಹಳ ಅಧಿಕರಿಸಿತು. ಉಪನ್ಯಾಸಕನನ್ನು ಹುಡುಕಿ ತರಬೇಕು; ಆತನಿಗೆ ವಿಷಯ ಹುಡುಕಿ ಕೊಡಬೇಕು; ಆತನ ಗುಣ, ಶೀಲ, ಗಂಟಲು ಇವುಗಳಿಗೆ ತಾನು ಊರವರಲ್ಲಿ ಹೊಣೆಗಾರಿಕೆ ಹೊತ್ತುಕೊಳ್ಳಬೇಕು; ಆತನಿಗಿಂತ ವಯಸ್ಸು, ಕೀರ್ತಿ, ಶಗಾರ, ತೂಕಎಲ್ಲದರಲ್ಲೂ ಹೆಚ್ಚಿನ ಮತ್ತೊಬ್ಬಸ್ಥಳೀಯ ವ್ಯಕ್ತಿಯನ್ನು ಬುಟ್ಟಿಯಲ್ಲಿ ಹಿಡಿದು, ಭದ್ರತರವಾದ ಕುರ್ಚಿಯಲ್ಲಿ ಅಧ್ಯಕ್ಷ ಎಂದು ಅವಾಹಿಸಿ ಕೂಡಿಸಬೇಕು.

ಆ ಮೇಲೆ ಉದ್ಘಾಟಕರನ್ನು ಹುಡುಕಬೇಕು. ಪ್ರಧಾನ ಮಂತ್ರಿಗಳಿಂದ ಹಿಡಿದು, ಪ್ರಾಯಿಮರಿ ಶಾಲೆ ಮುಖ್ಯೋಪಾಧ್ಯಾಯರವರೆಗೂ ಎಲ್ಲರೂ ಒಲ್ಲೆ ಎಂದಾಗ, ಹಿಂದೆ ತಾನು ಗೊತ್ತುಮಾಡಿದ್ದ ಉಪನ್ಯಾಸಕರನ್ನೇ ಉದ್ಘಾಟಿಸುವಂತೆಯೂ, ಅಧ್ಯಕ್ಷರನ್ನೇ ಉಪನ್ಯಾಸ ಮಾಡುವಂತೆಯೂ ಒಪ್ಪಿಸಿ, ಉಪನ್ಯಾಸಕ್ಕೆ ಬೇರೊಬ್ಬರನ್ನು ತಂದು..... ಅಂತು, ಈ ತ್ರಿಕೋಣ ವಿಚಿತಿಯಿಂದ ಆತ ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಸಾಮಾನ್ಯವಾಗಿ, ಉದ್ಘಾಟಕರು ಒಂದುವರೆ ಗಂಟೆ ಕಾಲವೂ ಅಧ್ಯಕ್ಷರು ಒಂದು ಗಂಟೆ ಕಾಲವೂ ಸುದೀರ್ಘವೂ ಸುಲಲಿತವೂ ಸಾರಗರ್ಭವೂ ಆದ ಭಾಷಣಗಳನ್ನು ಮಾಡುವುದರಿಂದ, ಉಪನ್ಯಾಸಕನೆನಿಸಿಕೊಂಡು ಕೂಡಲು ಹಿಂಜರಿಯುವವರು ಅತಿವಿರಳ.. ಉದ್ಘಾಟಕರು ಎಲ್ಲರಿಗಿಂತ ದೊಡ್ಡ ತಿಮಿಂಗಲವಾಗಿರಬೇಕಾದ್ದರಿಂದ, ಅವರ ನೆರಳು ಚಿಕ್ಕವರನ್ನೆಲ್ಲ ಬಾಧಿಸುತ್ತದೆ. ಅವರ ಮಂದಹಾಸಕ್ಕಾಗಿ ಎಲ್ಲರೂ ಬಯಸುತ್ತಾರೆ; ಅವರ ಭಾಷಣವೇ ಇನ್ನೊಂದಿಷ್ಟು ಹೊತ್ತು ನಡೆದಿದ್ದರೆ ಚೆನ್ನಾಗಿತ್ತು, ಎಂದು ಎಲ್ಲರೂ ಮರ್ಯಾದೆ ಮಾಡುತ್ತಾರೆ; ಮುಗಿದ ಮೇಲೆ ಬಾಯಿಬಿಟ್ಟು ಹೇಳುತ್ತಾರೆ. ಉಳಿದ ಇಬ್ಬರು ಮಹನೀಯರ ಮನಸ್ಸಿಗೂ ಆಗ ಮುಳ್ಳು ಚುಚ್ಚಿದಂತಾಗುತ್ತದೆ. ಅದರೂ ಚಿಂತೆ ಇಲ್ಲ. ಉದ್ಘಾಟನೆ ಆಗಲೇ ಬೇಕು.

ಉದ್ಘಾಟಕರನ್ನು ಕ್ರಮಬದ್ಧವಾಗಿ ಸೂಚಿಸುವವರೊಬ್ಬರಿರಲೇ ಬೇಕು. ಅವರ ಹೊಗಳುಮಾತನ್ನು ಅನುಮೋದಿಸುತ್ತ, ಇನ್ನಿಬ್ಬರು ಭಾಷಣ ಮಾಡಲೇಬೇಕು. ತಮ್ಮ ಮಾತು ಮುಗಿಸಿ, ಕಾರ್ಯಗೌರವದಿಂದ ಉದ್ಘಾಟಕರು ಸಭೆಯನ್ನು ತ್ಯಜಿಸುವಾಗ, ಅವರಿಗೆ ಸಲ್ಲತಕ್ಕ ವಂದನೆಯನ್ನು ಸಂಚಾಲಕರು ಕೂಡಲೇ ಒಪ್ಪಿಸಿಬಿಡಬೇಕು. ಸಭೆಯ ಪರವಾಗಿಯೂ ಅವರ ಪ್ರಸಾದವನ್ನು ಬಯಸುವ ಸಂಘಗಳ ವ್ಯಕ್ತಿಗಳ ಪರವಾಗಿಯೂ ಅವರಿಗೆ ಪುಷ್ಪಹಾರಗಳನ್ನರ್ಪಿಸಬೇಕು. ಇದನ್ನು ಕಂಡು, ತಾವು ಹಾಕದಿದ್ದರೆ, ಎಲ್ಲಿ ಅವರು ಕೋಪಿಸಿಕೊಳ್ಳುತ್ತಾರೋ ಎಂಬ ಭಯದಿಂದ, ಇತರರೂ ಹೂಮಾಲೆಗಳನ್ನು ಹಿಡಿದು ಓಡಿ ಬರುವರು.

ಇಷ್ಟು ಶಾಸ್ತ್ರಗಳೂ ಮುಗಿದ ಮೇಲೆ, **ಸಂದೇಶಪಠನ.** ಇದನ್ನು ಜಂಟಿ ಕಾರ್ಯದರ್ಶಿಯು ತಾನೇ ಸ್ವತಃ ನೆರವೇರಿಸತಕ್ಕದ್ದು, ಅದು ಆತನ ಅಜನ್ಮಹಕ್ಕು. ಅದಕ್ಕಾಗಿಯೇ ಜಂಟಿಕಾರ್ಯದರ್ಶಿ ಎಂಬ ಸ್ಥಾನವನ್ನು ಸಭಾಶಾಸ್ತ್ರದಲ್ಲಿ ನಮೂದಿಸಿರುವುದು. "ನಿಮ್ಮ ಅಹ್ವಾನ ತಲಪಿತು. ನಾನು ಅಲ್ಲಿಗೆ ಬರುವುದಿಲ್ಲ. (ಅದ್ದರಿಂದ) ನಿಮ್ಮ ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆಯುತ್ತವೆ ಎಂಬ ಭರವಸೆ ನನಗಿದೆ" ಎಂಬುದು ಸಾಮಾನ್ಯವಾಗಿ ಸಂದೇಶಗಳ ಒಕ್ಕಣೆ. ಇನ್ನು ಕೆಲವು, "ಸ್ವತಂತ್ರ ಭಾರತದಲ್ಲಿ ಮೊತ್ತಮೊದಲು ನೀವು ನನ್ನ ಮಿತ್ರರಾದ .... ರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿದ್ದೀರಿ. ನನ್ನ ದೇಹ ಇಲ್ಲಿದ್ದರೂ, ನನ್ನ ಆತ್ಮ ಬೇರೊಂದೆಡೆ ಇದೆ ಎಂಬುದನ್ನು ಮಾತ್ರ ನಿಮಗೆ ತಿಳಿಸಬಯಸುತ್ತೇನೆ" ಎಂದಿರುತ್ತವೆ. "ನಿಮ್ಮ ಸಭೆ ನಿರಾತಂಕವಾಗಿ ಕೊನೆಗಾಣಲಿ" ಎಂದು ಒಬ್ಬರು ಆಶೀರ್ವದಿಸಿರುತ್ತಾರೆ. "ಶ್ರೀಮಾನ್ .....ರು ನಿಮ್ಮ ಸಭೆಯನ್ನು ಉದ್ಘಾಟಿಸುತ್ತಾರೆ ಎಂದು ತಿಳಿಯುತ್ತೇನೆ. ನಿಮ್ಮ ಸಭೆ ಜಯಪ್ರದವಾಗಿ ಜರುಗಲಿ ಎಂಬುದೇ ನನ್ನ ಪ್ರಾರ್ಥನೆ" ಎಂದು ಮತ್ತೊಬ್ಬರು ಆಶಿಸಿರುತ್ತಾರೆ. ಎಂಥ ಸಭೆಗಾದರೂ ಹತ್ತು ಹನ್ನೆರಡು ಸಂದೇಶಗಳನ್ನಾದರೂ ಸಂಚಾಲಕರು ಈಗಿನ ಕಾಲದಲ್ಲಿ ಸುಲಭವಾಗಿ ಪಡೆಯಬಹುದು. ಇಂಥ ಸಂದೇಶಗಳನ್ನು ತಯಾರಿಸಿ ರವಾನಿಸುವುದಕ್ಕಾಗಿಯೇ . ಮಂತ್ರಿಗಳು ಮುಂತಾದವರು ಆಪ್ತಕಾರ್ಯದರ್ಶಿಗಳನ್ನು ನಿಯಮಿಸಿಕೊಂಡಿರುವಾಗ, ಅವರಿಂದ ಖಂಡಿತವಾಗಿಯೂ ಪುರುಸೊತ್ತಿನಲ್ಲೇ ಅಮೂಲ್ಯ ಸಂದೇಶಗಳು ಬಂದೇಬರುವುವು. ಈ ಸಂದೇಶಗಳಿಂದ, ಸಭಿಕರಿಗೆ ಒಂದು ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ. "ಅಲ್ಲಿಗೆ ಆಗಮಿಸದೆ ಇದ್ದ ಮಹನೀಯರೆಲ್ಲ ಬೇರೆ ಬೇರೆ ಕಡೆ ಜೀವಂತರಾಗಿರುವರು" ಎಂದು.

ಅನಂತರ, ಅಧ್ಯಕ್ಷರ ಅಯ್ಕೆ! ಇದೇನಿದು? ಎಂಟುದಿನಗಳಿಂದಲೂ ಇಂಥವರೇ ಅಧ್ಯಕ್ಷ ಪೀಠವನ್ನು ಅಲಂಕರಿಸತಕ್ಕದ್ದೆಂದು ಅಚ್ಚು ಹಾಕಿಸಿ, ಚೀಟಿ ಹಂಚಿ, ಡಂಗುರ ಹೊಡೆದಾಯಿತಲ್ಲಾ, ಎಂಥರೆ, ಯಾರು ಬಿಡುತ್ತಾರೆ? ಎಲ್ಲವೂ ಶಾಸ್ತ್ರೋಕ್ತವಾಗಿ ನಡೆಯಲೇಬೇಕು. 'ಕಾಲವು ಅನಂತ,' ಎಂದು ಉಪನಿಷತ್ತುಗಳು ಕೂಗುತ್ತಿರುವಾಗ, ಅಧ್ಯಕ್ಷರ ಆಯ್ಕೆಗಾಗಿ ಅರ್ಧಗಂಟೆ ವ್ಯಯವಾದರೆ, ನಷ್ಟವೇನು? ಅವರನ್ನು ಆ ಸ್ಥಾನಕ್ಕೆ ಸೂಚಿಸಬೇಕು. ಅದನ್ನು ಅಲಂಕರಿಸಲು ಅವರೇ ಯೋಗ್ಯರು ಇತರರೆಲ್ಲ ಅಯೋಗ್ಯರುಎಂದು ಸಾಧಿಸಬೇಕು, ಆ ವಾದವನ್ನು ಇನ್ನಿಬ್ಬರು ಸಮರ್ಥಿಸಬೇಕು; ಅನಂತರ, ಅವರು, ಸಭಿಕರ ಕರತಾಡನಗಳ ನಡುವೆ, ಪೀಠದಲ್ಲಿ ಕುಳ್ಳಿರಬೇಕು—ಅದು ಸಿದ್ಧಾಂತ.

ಅಧ್ಯಕ್ಷರುಗಳಿಗೆಲ್ಲ ಒಂದು ರೀತಿಯ ಭಯ ಬರುವುದುಂಟು. ತಾವು ಪೀಠಕ್ಕೆ ಏರಿದ ಕೂಡಲೇ, ಸಭೆ ಅಲ್ಪ ಸ್ವಲ್ಪ ಕರಗುವುದನ್ನು ಕಂಡು, ಅವರು ತಮ್ಮ ಭಾಷಣವನ್ನು ಆಗಲೇ ಹೇಳಿ ಮುಗಿಸಬೇಕೆಂದು ನಿಶ್ಚಯಿಸುವರು. ಕೈಗಡಿಯಾರವನ್ನು ನೋಡುವವರ, ಹಾಗೂ, ಕೈಗಡಿಯಾರ ನಿಂತು ಹೋಗಿದೆಯೋ ಎಂದು ಕುಲುಕುವವರ ಸಂಖ್ಯೆ ಹೆಚ್ಚುವುದನ್ನು . ಕಂಡು "೬" ನಾನೀಗ ಬಾಯಿಮುಚ್ಚಿ ಕೂತು, ಉಪನ್ಯಾಸವಾದ ನಂತರ ಭಾಷಣ ಮಾಡೋಣವೆಂದರೆ, ಒಂದು ಕಿವುಡುಕಿವಿ ಕೂಡ ನನಗೆ ದೊರೆಯುವಂತಿಲ್ಲ; ಎಂದು ಅವರು ತರ್ಕಿಸಿ, ತಮ್ಮ ಸುದೀರ್ಘ ಭಾಷಣವನ್ನು ಆಗಲೇ ದಯಪಾಲಿಸುವರು...

ಇದರಿಂದ, ಉಪನ್ಯಾಸಕಮಹಾಶಯನ ಉತ್ಸಾಹಾಂಶ ಏರುವುದು. ಸಭಿಕರ ಆಕಳಿಕೆಗಳು ನಿಮಿಷ ನಿಮಿಷಕ್ಕೂ ಭಯಂಕರವಾಗುವುವು. ತಾಯಂದಿರೆಲ್ಲ ಮಕ್ಕಳನ್ನು ಚಿವುಟಿ ಅಳಿಸಿ ಹೊರ ಹೊರಡಲು ನೆಪ ಹುಡುಕುವರು. ಅಲ್ಲದೆ, ತಾನು ಹೇಳಬೇಕೆಂದಿದ್ದ ಸ್ವಾರಸ್ಯ ವಿಷಯಗಳನ್ನೆಲ್ಲ ಒಂದೊಂದಾಗಿ ಉದ್ಘಾಟಕರೂ ಅಧ್ಯಕ್ಷರೂ ಕಸಿದು ಎಸೆಯುತ್ತಿರುವುದನ್ನು ಕಂಡು, ಆತನ ಜೀವ ಬಡಿದಾಗುವುದು. "ಸಂದಿಗ್ಧ—ವಾತಾವರಣ," "ಪ್ರಜಾಸ್ತೋಮದ-ಭಯಾನಕ-ಪರಿಸ್ಥಿತಿ," "ವಿಸ್ವಾರ-ಪಕ್ಷ ಪ್ರತಿಪಕ್ಷಗಳ-ತಿಕ್ಕಾಟ." "ಸ್ವಸಂಪೂರ್ಣ —ಸರ್ವ—.ತಂತ್ರ---ಸ್ವಾತಂತ್ರ್ಯ" "ಯಾಂತ್ರಿಕ.ನಿಯಂತ್ರಣ" ಮುಂತಾದ ಮುತ್ತು ಹವಳಗಳನ್ನು ತಾನು ಸಭೆಯ ಮುಂದೆ ಎರಚಬೇಕೆಂದಿದ್ದು, ಆ ಇಬ್ಬರೂ ತನಗೆ ಮೊದಲೇ ಎರಚಿ ಅವನ್ನು ಅಗ್ಗ ಮಾಡುವುದನ್ನು ಕಂಡು, ಉಪನ್ಯಾಸಕನು ಕುಗ್ಗಿಹೋಗುವನು. ಹಾಗೆ, ಆಗಬೇಕಾದದ್ದೇ ಶಾಸ್ತ್ರ. ಆ ದಿನದ ಸಭೆಗೆ ತಾನು ಮೂಲಸ್ತಂಭ ಎಂದು ಆತ ತಿಳಿದಿದ್ದರೆ, ತಪ್ಪು ಆತನದು. ಆದಿನ ನೆರೆದಿದ್ದವರೆಲ್ಲ ಆತನನ್ನು ಕೇಳಲು ಕುತೂಹಲರಾಗಿದ್ದಾರೆ ಎಂದು ಆತ ಭಾವಿಸಿದ್ದರೆ, ತಿಳಿಗೇಡಿತನ ಆತನದು. ನಿಜಕ್ಕೂ ಆತ, ನಿಮಿತ್ತ ಮಾತ್ರ. ಉದ್ಘಾಟಕ ಮಹಾಶಯರನ್ನು ಹೇಗಾದರೂ ಊರಿಗೆ ಕರೆಸಿ, ಉಪಚರಿಸಿ ಅವರಿಂದ ಹಲಕೆಲವು ರೀತಿಯ ಪ್ರಯೋಜನಗಳನ್ನು ಪಡೆಯಲು ಸಂಚಾಲಕನ ದೊಡ್ಡಪ್ಪ ಮಾಡಿದ ಫಿತೂರಿ, ಆ ದಿನದ ಸಭೆ! ಅಧ್ಯಕ್ಷರಿಗೆ ಮುಂದಿನ ಚುನಾವಣೆಯಲ್ಲಿ ವೋಟು ಬಂದೀತೇನೋ ಎಂಬ ಭಯದಿಂದ, ಅವರ ಟೊಳ್ಳನ್ನು ಬಯಲು ಮಾಡುವುದಕ್ಕಾಗಿ ಆತನಿಗೆ ಆಗದವರು ಹೂಡಿದ ತಂತ್ರ, ಆ ದಿನದ ಸಭೆ! ಉಪನ್ಯಾಸಕ, ಕೇವಲ ಯಜ್ಞಪಶು!

ಉಪನ್ಯಾಸಕರ ಪರಿಚಯಭಾಷಣ, ಹದಿನೈದುನಿಮಿಷ ಮಾತ್ರ ನಡೆಯತಕ್ಕದ್ದೆಂದೂ ಅದೇ ದಿನದ ಇತರ ಪರಿಚಯ ಭಾಷಣಗಳಿಗಿಂತ ಚಿಕ್ಕದಾಗಿಯೂ ರಸರಹಿತವಾಗಿಯೂ ಇರತಕ್ಕದ್ದೆಂದೂ ಶಾಸ್ತ್ರ ಹೇಳುತ್ತದೆ. ಏಕೆಂದರೆ, ಅವರು ಏಳುತ್ತಲೂ ಸಭೆಯೂ ಎದ್ದುಬಿಡಬೇಕೆಂಬುದೇ ಗೂಢಾರ್ಥ. ಗೊಂದಲದ ಮಧ್ಯ ಗೋವಿಂದ ಎಂಬಂತೆ, ಮುಖ್ಯ ಕಾರ್ಯದರ್ಶಿ ಆಭಾರಹೇಳಿ, ಹಾರವನ್ನೂ ನೀಡಬೇಕಾದದ್ದು...ಶಾಸ್ತ್ರ.—

ವಾಚುಗಳ ಬೆಲೆ ಇಳಿಸಲಾಗಿದೆ

೧೫ ಜ್ಯುವೆಲ್ಸ ರೋಲ್ಡ ಗೋಲ್ಡ ಬೆಂಟಶೇಪ ಅಥವಾ ರೌಂಡು ಶೇಪ ೧೦ ವರ್ಷ ಗ್ಯಾರಂಟಿ	ರೂ. ೭೫-೦-೦
೧೫ ಜ್ಯುವೆಲ್ಸ ಕ್ರೋಮ ರೌಂಡು ಅಥವಾ ಚೌಕು	ರೂ. ೪೫-೦-೦
೪ ಜ್ಯುವೆಲ್ಸ ರೋಲ್ಡಗೋಲ್ಡ ಫ್ಯಾನ್ಸಿ ರೌಂಡು ಶೇಪ್	ರೂ. ೨೮-೦-೦
ಅಮೇರಿಕನ್ ಪಾಕೆಟ ವಾಚು	ರೂ. ೨೦-೦-೦
ಇಂಗ್ಲೀಷ ಮೇಕ ಟೆಂಪಿಸು ... ಅಲಾರಂ	ರೂ. ೨೪-೦-೦
ಸ್ವಿಸ್ ಮೆಕ ಟೆಂಪಿಸು ,,	ರೂ. ೨೧೦-೦
ಹೊಸ ಮಾದರಿಯ ಕ್ರೋಮ ಟೈಂಪಿಸು ಅಲಾರಾಂ	ರೂ. ೧೮-೦-೦
"ಇಗಲ್" ಅಮೇರಿಕನ ಫೌಂಟನ್‌ಪೆನ್ನು	ರೂ. ೫-೦-೦

ವ್ಹಿ. ಪಿ. ಖರ್ಚು ಬೇರೆ.

ಎಸ್. ಎಲ್. ಧಾಕಪ್ಪಾ & ಸನ್

ವಾಚ ಡೀಲರ್ಸ್, ಸಿರ್ಸಿ-ಕ್ಯಾನರಾ (ಕ. ವೀ.)

ರೂಪಾಯಿ ೧೦,೦೦೦ ಮುಫತ್ತು

ಚಿನ್ನ ತೊಲ ಒಂದಕ್ಕೆ ರೂ. ೨—೮—೦

"ಅಮೇರಿಕನ್ ಹೊಸ ಚಿನ್ನ"ದ ಅದ್ಭುತ ಪ್ರಖ್ಯಾತಿ

ಒಂದು ಸಲ ಪರೀಕ್ಷಿಸಿರಿ! ಸಂತುಷ್ಟರಾಗುವಿರಿ!!

ಪಥನ್‌ಕೋಟೆಯ ಶ್ರೀ ಹಜಾರಿಲಾಲ್ ಜಾವಲರ ಅಭಿಪ್ರಾಯ

"ನೀವು ಕಳುಹಿಸಿದ 'ಅಮೇರಿಕನ್ ನ್ಯೂ ಗೋಲ್ಡ್'ನ ಪಾರ್ಸಲ್ ತಲುಪಿತು. ತುಂಬಾ ಉಪಕಾರಿ, ಚಿನ್ನಕ್ಕೆ ಸರಿಸಮಾನವಾಗಿದೆ ಎಂದು ತಿಳಿಸಲು ತುಂಬಾ ಹರ್ಷವಾಗುತ್ತೆ. ಈ ಕಾಗದ ತಲುಪಿದ ಕ್ಷಣ ೬ ತೊಲ ಚಿನ್ನವನ್ನು ಕಳುಹಿಸಿಕೊಡಿ. ಇನ್ನಷ್ಟು ಆರ್ಡರುಗಳನ್ನು ಕಳುಹಿಸಲಿರುವೆವು."

ವಜ್ರ ಕಲ್ಲು ಕಟ್ಟಿಡಕ್ಕೆ ಈ ಚಿನ್ನವು ಅಪ್ಪಟ ಚಿನ್ನದಷ್ಟೇ ಹೊಳಪು ಕೊಡುವುದು. ಈ ಚಿನ್ನವನ್ನು ತಂತಿಯಾಗಿ ಎಳೆಯಬಹುದಲ್ಲದೆ ತಟ್ಟೆಯಾಗಿಯೂ ಹೊಡೆಯಬಹುದು. ಎಲ್ಲ ಬಗೆಯ ಆಭರಣಗಳನ್ನೂ ತಯಾರಿಸಬಹುದು. ಅನುಭವಿಯಾದ ಒಡವೆ ವ್ಯಾಪಾರಿಗೂ ಪರೀಕ್ಷಿಸಿ ಹೇಳಲಸಾಧ್ಯ. ಮೇಲೆ ನಮೂದಿಸಿದ ಸರ್ಟಿಫಿಕೇಟ್ ತಪ್ಪೆಂದು ರುಜುವಾತ ಮಾಡುವವರಿಗೆ ರೂ. ೧೦,೦೦೦ ಬಹುಮಾನ. ಈ ಚಿನ್ನದ ಪ್ರಚಾರಕ್ಕಾಗಿ ಪ್ರತಿ ಚಿನ್ನವು ತೊಲ ೧ ಕ್ಕೆ ರೂ. ೨-೮-೦, ೩ ತೊಲಕ್ಕೆ ರೂ. ೭, ೬ ತೊಲಕ್ಕೆ ರೂ. ೧೩ ಮತ್ತು ೧೦ ತೊಲಕ್ಕೆ ರೂ. ೨೦ ರಂತೆಯೂ ಕೊಡಲಾಗುತ್ತೆ. ಅಂಚೆಯ ವೆಚ್ಚ ಪ್ರತ್ಯೇಕ ಒಪ್ಪಿಗೆಯಾಗದಿದ್ದಲ್ಲಿ ಹಣ ವಾಪಸ್.

ಮುಫತ್ತು:— ೩ ತೊಲ ಚಿನ್ನ ಕೊಳ್ಳುವವರಿಗೆ, ನವೀನ ಮಾದರಿಯ ೨ ಜೊತೆ ಬಳೆ. ೬ ತೊಲ ಕೊಳ್ಳುವವರಿಗೆ ೨ ಜೊತೆ ನೂತನ ಬಗೆ ಬಳೆಗಳು ಮತ್ತು ಒಂದು ಜೊತೆ ಕಿವಿಯಾಭರಣ ೧೦ ತೊಲಕೊಳ್ಳುವವರಿಗೆ ಅಧುನಿಕ "ನೆಕ್‌ಲೇಸ್" ಮುಫತ್ತುಕೊಡಲಾಗುತ್ತೆ.

THE IMPERIAL COMMERICIAL COMPANY. REGD:
(K. V. H.) JULLUNDUR CITY.

ಜನೆವರಿ ೨೬ ಕ್ಕೆ ಹೊಸ ಪ್ರಜಾರಾಜ್ಯದ ಘೋಷಣೆ

ಏಕತಂತ್ರ ಸರಕಾರದ ಬಗ್ಗೆ ಹಲವರ ಪ್ರ ಯ ತ್ನ

ಟ್ರೂಮನ್ ಸ್ಟಾಲಿನ್‌ರಲ್ಲಿ ಭೆಟ್ಟಿಯ ಸಂಭವ

ಹೊಸ ಘಟನೆ ಬರುವದೆಂದು ?

ಹಿಂದುಸ್ತಾನದ ಪ್ರಜಾರಾಜ್ಯ ಘಟನೆಯು ೧೯೫೦ ನೇ ಜನೆವರಿ ೨೬ ರಂದು ಅಂದರೆ ಸ್ವಾತಂತ್ರ್ಯ ದಿನದಂದು ಘೋಷಿಸಲ್ಪಡುವದೆಂದು ಘಟನಾಸಮಿತಿಯು ಕಾಂಗ್ರೆಸ ಪಕ್ಷದ ಸಭೆಯಲ್ಲಿ ಗೊತ್ತುಮಾಡಲಾಗಿದೆ. ಅದು ೧೯೪೯ ಅಕ್ಟೋಬರ ೨ ನೇ ತಾರೀಕಿನ ದಿವಸ ಅಂದರೆ ಗಾಂಧೀಜಿಯು ಹುಟ್ಟಿದ ದಿನ ಕೊನೆಯ ಸ್ವರೂಪದಲ್ಲಿ ಸ್ವೀಕೃತವಾಗುವದು. ಕಲಮುವಾರ ಚರ್ಚೆ ಜುಲೈ ಇಲ್ಲವೆ ಅಗಸ್ಟದಲ್ಲಿ ಮುಗಿಯಬಹುದು. ಅನಂತರ ಅದನ್ನು ಯೋಗ್ಯ ರೀತಿಯಿಂದ ವಿಸಂಗತವಾಗದಂತೆ ಹೊಂದಿಸಿ ಸರಿಪಡಿಸುವದಕ್ಕೆ ಒಂದೆರಡು ತಿಂಗಳು ಹತ್ತಬಹುದು. ಇದಲ್ಲದೆ ಸದ್ಯದ ಕಾಯದೆ ಮತ್ತು ಕಟ್ಟಳೆಯನ್ನು ಹೊಸ ಘಟನೆಗನುಗುಣವಾಗಿ ಬದಲಿಸುವದವಶ್ಯವಾಗಿದೆ. ಈ ರೀತಿ ಚರ್ಚೆ ಮಾಡಿದ ಅನಂತರ ಘಟನೆಯ ಕಲಮುಗಳನ್ನು ಮತ್ತೊಮ್ಮೆ ಪೂರ್ಣವಾಗಿ ಬರೆದು ಪ್ರತಿಯು ಮುದ್ರಣ ಹೊಂದಿ ಮತ್ತೆ ಘಟನಾಸಮಿತಿಯಲ್ಲಿ ಸಾಮಾನ್ಯ ಚರ್ಚೆ ನಡೆದು ಸ್ವೀಕೃತವಾಗಬೇಕಾದರೆ ಜನೆವರಿ ೨೬ ರ ವರೆಗೆ ಅವಧಿ ಬೇಕಾಗಬಹುದು. ಇದನ್ನೆಲ್ಲ ವಿಚಾರಿಸಿ ಕಾಂಗ್ರೆಸ ಪಕ್ಷದವರು ಜನೆವರಿ ೨೬ ಕ್ಕೆ ಹೊಸ ಪ್ರಜಾರಾಜ್ಯದ ಘೋಷಣೆ ಮಾಡಬೇಕೆಂದು ನಿರ್ಧರಿಸಿದ್ದಾರೆ.

ಘಟನಾ ಸಮಿತಿ

ಹಿಂದುಸ್ತಾನದ ವರಿಷ್ಠ ನ್ಯಾಯಮಂಡಲದ ಅಧಿಕಾರದ ಸಂಬಂಧದಲ್ಲಿ ಇರುವ ಕಲಮುಗಳ ವಿಚಾರ ತಾ. ೪ ಕ್ಕೆ ನಡೆಯಿತು. ಅಹಿಂಸಾತತ್ವದಲ್ಲಿ ಶ್ರದ್ಧೆಯಿರುವ ಹಿಂದುಸ್ತಾನದಲ್ಲಿ ಮರಣದಂಡನೆ ಇರಕೂಡದು, ಅದು ಇಲ್ಲದಂತಾದರೆ ಆ ಬಗ್ಗೆ ಅಪೀಲಿನ ಪ್ರಶ್ನೆಯೆ ಉದ್ಭವಿಸುವದಿಲ್ಲ ಎಂದು ಡಾ. ಅಂಬೇಡಕರರು ಚರ್ಚೆಗೆ ಉತ್ತರ ಕೊಡುತ್ತ ಹೇಳಿದರು. ವಿಶೇಷ ಚರ್ಚೆಯು ಅನಂತರ ಈ ಕಲಮು ಸ್ವೀಕೃತವಾಯಿತು. ಇದಕ್ಕೂ ಮೊದಲು ಪ್ರಾಂತೀಯ ಶಾಸನ ಸಭಾ ಸದಸ್ಯರ ಹಕ್ಕುಬಾಧ್ಯತೆಗಳ ಬಗ್ಗೆ ಚರ್ಚೆ ನಡೆದು ಸದಸ್ಯತ್ವದ ಅರ್ಹತೆಯಿಲ್ಲದಾಗ ಅಥವಾ ಇನ್ನೂ ಪ್ರತಿಜ್ಞೆ ಸ್ವೀಕರಿಸುವ ಮುನ್ನ ಶಾಸನ ಸಭೆಯಲ್ಲಿ ಕುಳಿತು ಮತದಾನ ಮಾಡಿದರೆ ಅವರಿಗೆ ಪ್ರತಿದಿನ ೧೦೦ ರೂಪಾಯಿ ದಂಡ ವಿಧಿಸಬೇಕೆಂಬ ಕಲಮು ಸ್ವೀಕೃತವಾಯಿತು.

೭ ನೇ ತಾರೀಕಿನ ದಿವಸ ವರಿಷ್ಠ ನ್ಯಾಯಾಲಯಕ್ಕೆ ಸಂಬಂಧಿಸಿದ ೭ ಕಲಮುಗಳು ಸ್ವೀಕೃತವಾದವು. ಮೂಲ ಕಲಮಿಗೆ ಡಾ. ಅಂಬೇಡಕರರು ಮಂಡಿಸಿದ ತಿದ್ದುಪಡಿಯಲ್ಲಿ ವರಿಷ್ಠ ನ್ಯಾಯಮಂಡಲಕ್ಕೆ ಅಪೀಲು ವಿಚಾರಿಸುವ ಅಧಿಕಾರ ಅಬಾಧಿತವಿದೆ. ಆದರೆ ಮುಂದೆ ಹೋಗುವ ಅಪೀಲುಗಳ ಸಂಖ್ಯೆ ಕಡಮೆಯಾಗುವಂತೆ ಅವುಗಳ ದುರ್ವ್ಯಾದೆಯನ್ನು ನಿಯಂತ್ರಿಸುವ ಕಾನೂನು ಮಾಡಲು ಪಾರ್ಲಮೆಂಟಿಗೆ ಅಧಿಕಾರವಿರಬೇಕೆಂದು ಈ ತಿದ್ದುಪಡಿಯಲ್ಲಿ ಹೇಳಿದೆ. ಪ್ರತಿಯೊಂದು ಹಾಯಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರು, ಅಧ್ಯಕ್ಷರು ಅವಶ್ಯವೆಂದು ಭಾವಿಸಿದಷ್ಟು ನ್ಯಾಯಾಧೀಶರು ಇರಬೇಕೆಂದು ಮಂಡಿಸಲ್ಪಟ್ಟ ಸೂಚನೆ ಸ್ವೀಕೃತವಾಯಿತು ಹಾಯಕೋರ್ಟ ನ್ಯಾಯಾಧೀಶರನ್ನು ನೇಮಿಸುವಾಗ ಮುಖ್ಯ ನ್ಯಾಯಾಧೀಶರು ಅಧ್ಯಕ್ಷರ ಪೂರ್ವ ಸಮ್ಮತಿ ಪಡೆಯಬೇಕೆಂಬ ಕಲಮು ಸ್ವೀಕೃತವಾಯಿತು.

ಮುಂಗಡ ಪತ್ರ ಸ್ವೀಕಾರಕ್ರಮದಲ್ಲಿ ಬದಲಾವಣೆ ಮಾಡಬೇಕೆಂಬ ಕಲಮನ್ನು ಡಾ. ಅಂಬೇಡಕರರು ಮಂಡಿಸಿದರು. ಈ ಬದಲಾವಣೆಯಿಂದ ಹಿರಿಯೋಲಗಕ್ಕೆ ಹಣಕಾಸಿನ ಮೇಲೆ ಹೆಚ್ಚಿನ ನಿಯಂತ್ರಣ ದೊರೆಯುವುದಲ್ಲದೆ ಅದರ ಮೇಲೆ ಸದ್ಯಕ್ಕಿಂತ ಹೆಚ್ಚು ಚರ್ಚೆ ನಡೆಸಲು ಅನುಕೂಲತೆಯೊದಗುವದು ಎಂದು ಮುಂತಾಗಿ ಹೇಳಿದರು. ಈ ಬಗ್ಗೆ ವಿಶೇಷ ಚರ್ಚೆಯಾಗಿ ಡಾ. ಅಂಬೇಡಕರರು ಮಂಡಿಸಿದ ತಿದ್ದುಪಡಿ ಸ್ವೀಕೃತವಾಯಿತು.

ಏಕತಂತ್ರ ಹಿಂದುಸ್ತಾನ

ಘಟನಾ ಸಮಿತಿಯು ಸಂಯುಕ್ತ ರಾಜ್ಯ ಘಟನೆಯ ತತ್ವವನ್ನೊಪ್ಪಿ ರಾಜ್ಯಘಟನೆಯನ್ನು ಸಿದ್ಧ ಮಾಡುತಿರುವಾಗ ಕೆಲವರು ಏಕತಂತ್ರ ಹಿಂದುಸ್ತಾನದ ಬಗ್ಗೆ ಪ್ರಯತ್ನ ನಡೆಸಿರುವರೆಂದು ತಿಳಿಯುತ್ತದೆ. ಹಿಂದುಸ್ತಾನದಲ್ಲಿಯ ಸದ್ಯದ ಪ್ರಾಂತಗಳನ್ನು ಕೂಡಿಸಿ ಆಡಳಿತೆಯ ಸೌಕರ್ಯದ ದೃಷ್ಟಿಯಿಂದ ಈಗಿನ ಮಿಲಿಟರಿ ಪ್ರಾದೇಶಿಕ ಕ್ಷೇತ್ರಕ್ಕನುಗುಣವಾಗುವಂತೆ ನಾಲ್ಕು ಅಥವಾ ಅಯಿದು ವಿಭಾಗಗಳಲ್ಲಿ ಅದನ್ನು ಹಂಚಬೇಕೆಂದು ಘಟನಾ ಸಮಿತಿಯ ಬಂಗಾಲ ಸದಸ್ಯರು ಒಂದು ಯೋಜನೆಯನ್ನು ಮಂಡಿಸಿರುವರು. ಭಾಷಾನ್ವಯ ಪ್ರಾಂತ ರಚನೆಯ ಬೇಡಿಕೆಗೆ ಇದು ವಿರೋಧಕವಾಗಿದೆ. ಇದರ ಪುರಸ್ಕರ್ತರು ಹಿಂದುಸ್ತಾನದ ಆಡಳಿತೆ ಏಕತಂತ್ರಾಧಿಕಾರದ್ದಾಗಿದ್ದು ಇಡೀ ಹಿಂದುಸ್ತಾನಕ್ಕೆ ಒಂದೇ ಪಾರ್ಲಮೆಂಟು ಒಂದೇ ಮಂತ್ರಿಮಂಡಲವಿರಬೇಕೆಂದು ಪ್ರತಿಪಾದಿಸುತ್ತಾರೆ. ಆಡಳಿತೆಯ ಅನುಕೂಲತೆಗಾಗಿ ಹಿಂದುಸ್ತಾನದಲ್ಲಿ ನಾಲ್ಕು ಇಲ್ಲವೆ ಅಯಿದು ಭಾಗಗಳನ್ನು ಮಾಡಬಹುದಂತೆ. ತಮ್ಮೀ ಯೋಜನೆಯ ಹಿನ್ನೆಲೆಯೆಂದು ಇದರ ಪುರಸ್ಕರ್ತರು ಕೆಲವು ಕಾರಣಗಳನ್ನು ಕೊಡುವದುಂಟು. ಮೊದಲನೆಯದಾಗಿ ಪ್ರಾಂತೀಯ ಮತ್ತು ಸಂಸ್ಥಾನ ಮಂತ್ರಿಮಂಡಳಗಳು ಮೇಲಿಂದ ಮೇಲೆ ಉರುಳುತಿರುವದು ಮತ್ತು ಅವು ಸ್ಥಿರ ಭದ್ರವಾದ ತಳಹದಿಯ ಮೇಲೆ ರಚಿತವಾಗುವ ಲಕ್ಷಣ ಕಾಣದಿರುವದಾಗಿದೆ. ಎರಡನೆಯದಾಗಿ ಕರ ಹೇರುವ ಪದ್ಧತಿ ಎಲ್ಲ ಪ್ರಾಂತಗಳಲ್ಲಿ ಒಂದೇ ಬಗೆಯದಿಲ್ಲದಿರುವದು ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಸ್ವೀಕೃತವಾಗುವ ಕಾಯದೆಗಳೂ ಭಿನ್ನ ಭಿನ್ನವಾಗಿರುವದು. ಕೊನೆಯದಾಗಿ ಕೇಂದ್ರ ಸರಕಾರಕ್ಕೆ ಎಲ್ಲ ಪ್ರಾಂತೀಯ ಸರಕಾರಗಳಿಂದ ದೊರೆಯುವ ಸಹಕಾರದಲ್ಲಿಯೂ ಹೆಚ್ಚು ಕಡಿಮೆ ಇರುವದು ಮತ್ತು ಪ್ರಾಂತೀಯತೆಯ ಭಾವನೆ ಬೆಳೆಯುತಿರುವದು. ಇದೆಲ್ಲವನ್ನನುಲಕ್ಷಿಸಿದರೆ ದೇಶದಲ್ಲಿ ಪ್ರತ್ಯೇಕತಾಭಾವನೆ ಉಗ್ರಸ್ವರೂಪ ತಾಳುವದೆಂಬ ಅಂಜಿಕೆಯಿದ್ದುದರಿಂದ ಈ ಬಗೆಯ ಏಕತಂತ್ರಾಧಿಕಾರವನ್ನು ಪುರಸ್ಕರಿಸುವದಾಗಿ ಅವರು ಅಭಿಪ್ರಾಯ ಪಡುತಿರುವರು. ಈ ಬಗೆಯ ಯೋಜನೆಯನ್ನು ಹಿಂದುಸ್ತಾನದ ಘಟನೆಯಲ್ಲಿ ಸೇರಿಸುವದು ಯೋಗ್ಯವಾದೀತೆ, ಈಗಿನ ಪರಿಸ್ಥಿತಿಯಲ್ಲಿ ಅದು ವ್ಯಾವಹಾರಿಕವಾಗಬಲ್ಲದೇ 'ಎಂದು ಮುಂತಾಗಿ ಘಟನಾಸಮಿತಿಯ ಅಧ್ಯಕ್ಷರು ಮತ್ತು ಮಾರ್ಗದರ್ಶನಸಮಿತಿಯವರು ವಿಚಾರ ನಡೆಸಿರುವರೆಂದೂ ತಿಳಿಯುತ್ತದೆ. ಈ ಯೋಜನೆಯು ಸಂಯುಕ್ತ ರಾಜ್ಯ ಪದ್ಧತಿಗೆ ವಿರೋಧಕವಾಗಿಲ್ಲೆಂದೂ ಸದ್ಯದಲ್ಲಿ ಭದ್ರವಾದ ಕೇಂದ್ರ ಸರಕಾರ ಇರುವದವಶ್ಯವಾಗಿದೆಯಾದ್ದರಿಂದ ಇದನ್ನು ಪುರಸ್ಕರಿಸಲಾಗುತಿದೆಯೆಂದೂ ಇದರ ಯೋಜಕರ ಪ್ರತಿಪಾದನೆ. ಇದರಿಂದ ಮಿಲಿಟರಿ ರಾಜ್ಯ ಪ್ರಸ್ಥಾಪನೆಗೆ ಅವಕಾಶವಿತ್ತಂತಾಗುವದೆಂದು ಕೆಲವರು ಅಭಿಪ್ರಾಯಪಟ್ಟರೆ ಮತ್ತೆ ಹಲವರು ಇದನ್ನು ಅಂಗೀಕರಿಸುವದರಿಂದ ದೇಶದಲ್ಲಿ ನಿಜವಾದ ಪ್ರಜಾರಾಜ್ಯವನ್ನು ಸ್ಥಾಪಿಸಿದಂತಾಗುವದೆಂದು ಅಭಿಪ್ರಾಯಪಡುತಿರುವರು.

ಕರ್ನಾಟಕದಲ್ಲಿ ಹೊಸ ರೇಲ್ವೆ

ಮುಂಬಯಿ ಪ್ರಾಂತದಲ್ಲಿ ಮುಂಬಯಿ ಸರಕಾರವು ಕೆಳಗೆ ಬರೆದ ಫೀಡರ ರೇಲ್ವೆ ಹಾಕಬೇಕೆಂದು ವಿಚಾರ ನಡೆಸಿದೆ. ಮನಮಾಡ-ನರಢಾನ, ಕುರ್ಲಾ-ಕರಜತ, ದಿವಾ-ದಾಸಗಲ್, ಭುಲಸಾರ-ಧರಮಪುರ, ಬೇಲಾಪೂರ-ಶೇಗಾಂವ, ಬಾರಾಮತಿ-ಪಂಢರಪುರ, ಸಾತಾರಾ-ಕೋರೇಗಾವ ಅಳಣಾವರ-ಕಾರವಾರ, ಹುಕ್ಕೇರಿ-ನಿಪ್ಪಾಣಿ ಮತ್ತು ಪುಣೆ-ಖಡಕವಾಸಲಾ ಈ ಯೋಜನೆಗಳಿವೆ. ಪುನಾರಚಿತ ಸಾರಿಗೆ ಮಂಡಲವು ಈ ಯೋಜನೆಗಳ ವಿಚಾರವನ್ನು ನಡೆಸಿದೆ. ಖಡಕವಾಸರಾದಲ್ಲಿ ಸೈನ್ಯ ಕಾಲೇಜು ಇರುವದರಿಂದ ಈ ಲೈನಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗಿದೆ. ಪಾತಾಳಗಂಗಾ ಕಂದರದ ಅಭಿವೃದ್ಧಿ ಅವಶ್ಯವೆನಿಸಿದ್ದರಿಂದ ಅದರ ಮೇಲೆ ಹಾಯ್ದು ಹೋಗುವ ಕುರ್ಲಾ ಕರ್ಜತ್ ರೇಲ್ವೆ ಯೋಜನೆಯು ಅವಶ್ಯವೆನಿಸಿದೆ. ಪಾತಾಳಗಂಗಾ ಮತ್ತು ಉಲ್ಹಾಸ ನದಿತೀರದಲ್ಲಿ ರಾಯಿನ್, ಕಾಗದ ಕೆಮಿಕಲ್ಸ ಕಾರಖಾನೆಗಳನ್ನು ತೆಗೆಯಬಹುದು. ಉತ್ತರ ಕನ್ನಡದ ಅರಣ್ಯದ ಸದುಪಯೋಗವಾಗಬೇಕಾದರೆ ಅಳಣಾವರ ಕಾರವಾರ ರೇಲ್ವೆ ಅತ್ಯವಶ್ಯವಾಗಿದೆ. ನಿಪ್ಪಾಣಿಯ ವ್ಯಾಪಾರ ಸಾಗಾಟಕ್ಕೆ ಹುಕ್ಕೇರಿರೋಡ ನಿಪ್ಪಾಣಿ ರೇಲ್ವೆ ಅವಶ್ಯವಾಗಿದೆ. ಸಪ್ಟಂಬರದಲ್ಲಿ ಸೇರಲಿರುವ ಸಾರಿಗೆ ಮಂಡಲದ ಸಭೆಯಲ್ಲಿ ಈ ಯೋಜನೆಗಳ ವಿವರವಾದ ಚರ್ಚೆ ನಡೆಯುವದು. ಆಹಾರ ಪದಾರ್ಥಗಳ ಸಾಗಾಟಕ್ಕಾದರೂ ಇಂಥ ರೇಲ್ವೆಗಳು ಅವಶ್ಯವೆಂದು ಸಾರಿಗೆ ಮಂಡಲದ ಅಧ್ಯಕ್ಷತೆ ವಹಿಸಿದ್ದ ಮಂತ್ರಿವರ್ಯ ಡಾ. ಗಿಲ್ಡರರು ಸಾರಿದರು. ಸಪ್ಟಂಬರದಲ್ಲಿ ಸಾರಿಗೆ ಮಂಡಲವು ಈ ಬಗ್ಗೆ ವಿವರವಾಗಿ ಚರ್ಚಿಸಿದ ಅನಂತರ ಹಿಂದುಸ್ತಾನ ಸರಕಾರಕ್ಕೆ ಈ ಯೋಜನೆಗಳನ್ನು ಕಳಿಸಲಾಗುವದು. ಸುರತ, ರತ್ನಾಗಿರಿ ಮತ್ತು ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣಗಳನ್ನು ಕಟ್ಟುವ ಬಗ್ಗೆ ಹಿಂದುಸ್ತಾನ ಸರಕಾರವು ವಿಚಾರಿಸುತಿದೆಯೆಂದೂ ಡಾ. ಗಿಲ್ಡರರು ಆ ಸಭೆಯಲ್ಲಿ ಸಾರಿದರು. ಕರ್ನಾಟಕದಲ್ಲಿ ಈ ಮೊದಲು ಹಲವಾರು ರೇಲ್ವೆ ಯೋಜನೆಗಳ ವಿಚಾರ ನಡೆದು ಒಂದಿಲ್ಲೊಂದು ನೆಪದಿಂದ ಅವೆಲ್ಲ ಹಿಂದೆ ಬಿದ್ದುದುಂಟು. ಈ ಸಲ ಹಾಗೆ ಆಗದೆ ಈ ಎರಡು ಯೋಜನೆಗಳಾದರೂ ಕಾರ್ಯರೂಪದಲ್ಲಿ ಬರಲಿ.

ಹಿಂದುಸ್ತಾನದ ಆಯಾತ ಮತ್ತು ನಿರ್ಯಾತ ವ್ಯಾಪಾರ

೧೯೪೮-೪೯ ರಲ್ಲಿ ಹಿಂದುಸ್ತಾನದ ವಿದೇಶ ಕರಾವಳಿ ವ್ಯಾಪಾರವು ನಿರ್ಯಾತಕ್ಕಿಂತ ಆಯಾತವೇ ಹೆಚ್ಚಿಗಿದ್ದು ೯೫ ಕೋಟಿ ರೂಪಾಯಿಗಳು ಈ ರೀತಿ ಹಿಂದುಸ್ತಾನದಿಂದ ಹೊರಗೆ ಹೋದುವೆಂದು ಇದೀಗ ಪ್ರಸಿದ್ಧವಾದ ಅಂಕಿಗಳಿಂದ ಗೊತ್ತಾಗುತ್ತದೆ. ೧೯೪೮-೪೯ ರಲ್ಲಿ ಒಟ್ಟು ವ್ಯಾಪಾರ ೯೪೧ ಕೋಟಿ ರೂಪಾಯಿ ಆಗಿದ್ದು ಹಿಂದಿನ ವರುಷ ಅದು ೮೦೨ ಕೋಟಿ ರೂಪಾಯಿಯದಾಗಿತ್ತು. ಈ ವರುಷದ ವ್ಯಾಪಾರದಲ್ಲಿ ೫೧೮ ಕೋಟಿ ರೂಪಾಯಿಯ ಆಯಾತ ಮತ್ತು ೪೨೩ ಕೋಟಿ ರೂಪಾಯಿಯ ನಿರ್ಯಾತ ವ್ಯಾಪಾರವಿದೆ. ನೂಲು ಜವಳಿ, ಬಣ್ಣ ಕತ್ತರಿ ಸಾಮಾನ ಮೊದಲಾದವುಗಳ ಆಯಾತ ಈ ವರುಷ ಕಡಮೆಯಾಗಿದ್ದರೂ ಯಂತ್ರಸಾಮಾನ, ಬೇಳೆ ಹಾಗು ಹಿಟ್ಟು, ಹತ್ತಿ, ಎಣ್ಣೆ, ವಾಹನಗಳು, ಲೋಹಗಳು, ರಸಾಯನ ಹಾಗು ಔಷಧಗಳ ಆಯಾತವು ಹೆಚ್ಚಿದೆ. ಯಂತ್ರ ಸಾಮಾನಗಳ ಆಯಾತದಲ್ಲಿಯೆ ೨೧.೭೩ ಕೋಟಿ ರೂಪಾಯಿಗಳು ಹೆಚ್ಚಿಗೆ ಹೋಗಿವೆ. ನಾರಿನ ಸಾಮಾನ, ಚಹಾ, ಜವಳಿ ಹಾಗು ನೂಲು ಈ ವರ್ಷ ಹೆಚ್ಚಾಗಿ ಹೊರಗೆ ಹೋಗಿವೆ. ಸಂಯುಕ್ತ ಸಾಮ್ರಾಜ್ಯ ಮತ್ತು ಅಮೇರಿಕೆಗಳೆ ಹಿಂದುಸ್ತಾನದ ಮುಖ್ಯ ಗಿರಾಕಿಗಳಿದ್ದು ಅವು ಅನುಕ್ರಮವಾಗಿ ೯೭೬೭ ಲಕ್ಷ ಮತ್ತು ೭೦೦೩ ಲಕ್ಷ ರೂಪಾಯಿಗಳ ಸರಕು ಕೊಳ್ಳುತ್ತಿರುವವು. ಅದೇ ರೀತಿ ಹಿಂದುಸ್ತಾನವು ಸಂಯುಕ್ತ ಸಾಮ್ರಾಜ್ಯದಿಂದ ೧೫೨೦೩ ಲಕ್ಷ ಮತ್ತು ಅಮೇರಿಕೆಯಿಂದ ೧೦೪೨೪ ಲಕ್ಷ ರೂಪಾಯಿಗಳ ಸರಕು ಕೊಳ್ಳುವದು. ಉಳಿದ ರಾಷ್ಟ್ರಗಳ ಆಯಾತ ನಿರ್ಯಾತಗಳೂ ಹೆಚ್ಚಿವೆ. ಆಯಾತದ ಅಂಕಿಗಳು ಕಡಮೆಯಾಗಬೇಕಾದರೆ ಹಿಂದುಸ್ತಾನವು ಆಹಾರ ಪದಾರ್ಥಗಳಲ್ಲಿ ಪೂರ್ಣವಾಗಿ ಸ್ವಾವಲಂಬಿಯಾಗಿ ಉಳಿದ ಅವಶ್ಯಕ ಪದಾರ್ಥಗಳನ್ನು ಉತ್ಪಾದಿಸಬೇಕಾಗುವದೆಂದು ಪ್ರತ್ಯೇಕ ಹೇಳಬೇಕಿಲ್ಲ.

ಕಾಶ್ಮೀರ ಸಮಸ್ಯೆ

ಕಾಶ್ಮೀರ ಸಮಸ್ಯೆ ಇನ್ನೂ ಬಗೆಹರಿಯಲೊಲ್ಲದು. ತಾವು ಕಳಿಸಿದ ಕರಾರಗಳನ್ನು ಹಿಂದುಸ್ತಾನ ಪಾಕಿಸ್ತಾನ ಸರಕಾರಗಳೆರಡೂ ಅನಿರ್ಬಂಧವಾಗಿ ಒಪ್ಪಬೇಕೆಂಬ ಸಂಧಾನ ಸಮಿತಿಯು ಮಾಡಿಕೊಂಡ ಬಿನ್ನಹವನ್ನು ಎರಡೂ ಸರಕಾರಗಳು ಮನ್ನಿಸಿಲ್ಲವೆಂದು ಸಮಿತಿಯವರು ಅಧಿಕೃತವಾಗಿ ಪ್ರಕಟಿಸಿದ್ದಾರೆ. ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳು ಕಳಿಸಿದ ಉತ್ತರಗಳನ್ನು ಸಂಧಾನ ಸಮಿತಿಯೀಗ ಲಕ್ಷಪೂರ್ವಕವಾಗಿ ವಿಚಾರಿಸುತಿದೆ. ಸಮಿತಿಯ ಸೂಚನೆಯಂತೆ ಎರಡೂ ಸರಕಾರಗಳು ಜೂನ ೧ ರಿಂದ ಯುದ್ಧ ನಿಲ್ಲಿಸಿದ್ದರೂ ಕೆಲ ವಿಷಯಗಳಲ್ಲಿ ಉಂಟಾದ ಮತಭೇದವಿನ್ನೂ ಮಾಯವಾಗಿಲ್ಲ. ಸಾರ್ವತ್ರಿಕ ಮತಗಣನೆ ನಡೆಯುವಾಗ ಅಲ್ಲಿ ಸೈನ್ಯವಿರಬೇಕೊ ಇರಬಾರದೊ ಎಂಬುದೆ ಮತಭೇದದ ಮುಖ್ಯ ಪ್ರಶ್ನೆಯೆಂದು ಹೇಳಬಹುದಾಗಿದೆ. ಸಮಿತಿಯೆಣಿಸಿದಂತೆ ಎರಡೂ ಸರಕಾರಗಳು ಅನಿರ್ಬಂಧವಾಗಿ ಕರಾರುಗಳಿಗೆ ಒಪ್ಪದಿದ್ದುದರಿಂದ ಮುಂದೇನು ಎಂಬುದಾಗಿ ಅದು ವಿಚಾರಿಸುತಿದೆ. ಮತಭೇದವಳಿದು ಪ್ರಶ್ನೆ ಸಮಾಧಾನಕರವಾಗಿ ಬಗೆಹರಿಯಬಹುದೆಂದು ಸಮಿತಿಯಿನ್ನೂ ಆಸೆ ತಾಳಿದೆ. ಕಾಶ್ಮೀರ ಸಂಸ್ಥಾನ ಸೀಮೆಯ ಪಾಕಿಸ್ತಾನ ಗಡಿಯಲ್ಲಿರುವ ಅಝಾದ ಕಾಶ್ಮೀರ ಸೈನ್ಯವನ್ನು ವಿಸರ್ಜಿಸುವ ವಿಚಾರದ ತೀರ್ಮಾನ ಮಾಡುವದೆ ಸಮಿತಿಯು ಮಾಡತಕ್ಕ ಮುಖ್ಯ ಕೆಲಸವಾಗಿದೆಯೆಂದು ಯುಕ್ತರಾಷ್ಟ್ರ ಸಂಘದಲ್ಲಿ ಹಿಂದುಸ್ತಾನದ ಶಾಶ್ವತ ಸದಸ್ಯರಾಗಿರುವ ಶ್ರೀ ಬಿ. ನರಸಿಂಗರಾಯರು ಅಭಿಪ್ರಾಯಪಡುತಿರುವರು. ಅಝಾದ ಕಾಶ್ಮೀರ ಸೈನ್ಯದಲ್ಲಿ ಸುಮಾರು ೩೦ ಸಾವಿರ ಜನ ಇದೆ. ಸಂಧಾನ ಗಡಿಯಾಚೆ ಇಷ್ಟು ಸಶಸ್ತ್ರ ಸೈನ್ಯವಿರುವವರೆಗೂ ಸ್ವತಂತ್ರ ಮತ್ತು ನಿಷ್ಪಕ್ಷಪಾತವಾದ ಜನಮತಗಣನೆ ನಡೆಯಲಾರದೆಂದು ಇವರ ಅಭಿಪ್ರಾಯವಾಗಿದೆ. ಕಾಶ್ಮೀರದಲ್ಲಿ ಬಹುಸಂಖ್ಯರು ಮುಸಲ್ಮಾನರಿದ್ದ ಮಾತ್ರಕ್ಕೆ ಅವರೆಲ್ಲ ಪಾಕಿಸ್ತಾನವನ್ನು ಸೇರುವರೆಂದು ಹೇಳಲಾಗದು. ಅಲ್ಲಿನ ಮುಸಲ್ಮಾನರಿಗೂ ಹಿಂದೀಯರಿಗೂ ನಿಕಟ ಸಂಬಂಧವಿದೆಯಲ್ಲದೆ ಭಾಷೆ ಮತ್ತು ಸಾಂಸ್ಕೃತಿಕ ಸಂಬಂಧವೂ ಇದೆ. ಜನಮತಗಣನೆಯ ಪರಿಣಾಮವೇನಾದೀತೆಂಬದನ್ನೂ ಹೇಳಲಿಕ್ಕಾಗದು ಎಂದು ಮುಂತಾಗಿ ನರಸಿಂಗರಾಯರ ಅಭಿಪ್ರಾಯ. ಪರಿಸ್ಥಿತಿ ಹೀಗಿರುವಾಗ ಏನಾಗುವದೋ ನೋಡಬೇಕು ?

ಸ್ಟಾಲಿನ್-ಟ್ರೂಮನ್ ಭೆಟ್ಟಿ ?

ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್‌ರು ರಶಿಯಾದ ಸರ್ವಾಧಿಕಾರಿಯಾದ ಸ್ಟಾಲಿನ್‌ರೊಡನೆ ನೇರವಾದ ಸ್ನೇಹ ಸಂಬಂಧ ಬೆಳಸಿಕೊಳ್ಳಬೇಕೆಂದು ಆತುರಪಡಹತ್ತಿದ್ದಾರೆಂದು ತಿಳಿಯುತ್ತದೆ. ಈ ಉದ್ದೇಶ ಸಾಧನೆಗಾಗಿಯೆ ಅಧ್ಯಕ್ಷ ಟ್ರೂಮನ್‌ರ ಮಿತ್ರರಾದ ಬರ್ನಾರ್ಡ ಬರೂಚ ಇವರನ್ನು ಮಾಸ್ಕೋದಲ್ಲಿ ಅಮೇರಿಕೆಯ ರಾಯಭಾರಿಯೆಂದು ನೇಮಿಸಬಹುದೆಂದೂ ದಟ್ಟವಾದ ವಾರ್ತೆ ಇದೆ. ಪ್ಯಾರೀಸಿನಲ್ಲಿ ಸೇರಿದ ವಿದೇಶ ಮಂತ್ರಿಗಳ ಪರಿಷತ್ತು ಯಶಸ್ವಿಯಾಗುವ ಲಕ್ಷಣ ತೋರಿದ್ದರಿಂದ ಅದನ್ನು ಅನಿಯಮಿತ ಅವಧಿಯವರೆಗೆ ಮುಂದೆ ಹಾಕಬೇಕಾಗಿ ಬಂದ ಈ ಸಮಯದಲ್ಲಿ ಟ್ರೂಮನ್ನರು ಸ್ಟಾಲಿನ್ನರೊಡನೆ ನೇರವಾದ ಸಂಬಂಧ ಬೆಳಸಿಕೊಳ್ಳಲು ಆತುರಪಡುತಿರುವದರಿಂದ ರಾಜಕೀಯ ವರ್ಗದಲ್ಲಿ ಆಶ್ಚರ್ಯ ವ್ಯಕ್ತಪಡಿಸಲಾಗುತಿದೆ. ಅದರಲ್ಲಿಯೂ ಅವರು ಫ್ರಾನ್ಸ ಬ್ರಿಟನ್ ಮೊದಲಾದ ರಾಷ್ಟ್ರಗಳ ಕೈಬಿಟ್ಟು ಸ್ಟಾಲಿನ್‌ರೊಡನೆ ಸಂಧಾನ ನಡೆಸುವುದು ಮತ್ತಷ್ಟು ಆಶ್ಚರ್ಯಕರ ಎಂದು ಕೆಲವು ಮುತ್ಸದ್ದಿಗಳು ಅಭಿಪ್ರಾಯ ಪಡುತಿರುವರು. ಬ್ರಿಟಿಶ್ ವಿದೇಶಮಂತ್ರಿಯಾದ ಬೆವಿನ್‌ರು ರಶಿಯ ಅಮೇರಿಕೆಗಳು ಪರಸ್ಪರ ಸ್ನೇಹಸಂಬಂಧ ಬೆಳೆಸದಂತೆ ಪ್ಯಾರಿಸ ಮಾತುಕತೆಯ ಕಾಲಕ್ಕೆ ಪ್ರಯತ್ನ ಮಾಡಿದರೆಂದೂ ಇದಕ್ಕೆ ತಕ್ಕಮಟ್ಟಿಗೆ ಯಶಸ್ಸು ದೊರೆತಿದೆಯೆಂದೂ ವಾಶಿಂಗಟನ್‌ದಲ್ಲಿಯ ರಾಜಕೀಯ ವರ್ಗಗಳು ಅಭಿಪ್ರಾಯಪಡುತಿವೆ. ಕಳೆದ ವರುಷವೇ ಅಧ್ಯಕ್ಷ ಟ್ರೂಮನ್ನರು ಮಾಸ್ಕೋ ರಾಯಭಾರಪದಕ್ಕೆ ಬರೂಚರನ್ನು ನೇಮಿಸಲು ಸಿದ್ಧರಾಗಿದ್ದರು. ಆದರೆ ವಿದೇಶ ಶಾಖೆಯಲ್ಲಿ ಇಲ್ಲದವರನ್ನು ರಾಯಭಾರಿಯಾಗಿ ನೇಮಿಸುವದರಿಂದ ಬ್ರಿಟಿಶ್ ವಿದೇಶ ಶಾಖೆಯವರು ನೊಂದಿಕೊಳ್ಳಬಹುದೆಂದು ಆಗ ವಿರೋಧ ವ್ಯಕ್ತವಾದ್ದರಿಂದ ಟ್ರೂಮನ್‌ರು ಹಿಂದೆ ಸರಿದರು. ಆದರೀಗ ಪರಿಸ್ಥಿತಿ ಬದಲಾದ್ದರಿಂದ ಟ್ರೂಮನ್ನರು ಬರೂಚರನ್ನು ನೇಮಿಸಿ ಸ್ಟಾಲಿನ್‌ರೊಡನೆ ನೇರವಾದ ಸಂಬಂಧ ಬೆಳಸಲು ಪ್ರಯತ್ನಿಸುತಿರುವರೆಂದು ತಿಳಿಯುತ್ತದೆ. ಅಮೇರಿಕೆ ರಶಿಯಗಳಲ್ಲಿ ಸ್ನೇಹ ಸಂಬಂಧ ಬೆಳೆಯುವ ಅಂಜಿಕೆಯಿಂದ ಯುರೋಪಿನ ರಾಷ್ಟ್ರಗಳಲ್ಲಿ ಈಗಾಗಲೆ ಗಡಿಬಿಡಿಯುಂಟಾಗಿದೆ.

ಅಮೇರಿಕ ರಾಷ್ಟ್ರದ ಅಸ್ತಿವಾರ ಅಂದರೆ ರೆಡ್ ಇಂಡಿಯನ್ ಜನಾಂಗಗಳ ಅಸ್ಥಿರಾಶಿ

ಮೂಲನಿವಾಸಿಗಳ ಮಸಣದ ಮೇಲೆ ಅಮೇರಿಕನ್ನರು ತಮ್ಮ "ಭವ್ಯ ಸಂಸ್ಕೃತಿ" ಯನ್ನು ಕಟ್ಟಿದುದರ ಕ್ರೂರ ಕಥೆ

ಲೇ:— ಪ್ರೊ. ಬಾಗಲೋಡಿ ದೇವರಾಯರು

೧೬-೧೭ ನೆಯ ಶತಮಾನಗಳಲ್ಲಿ ಇಂಗ್ಲೆಂಡಿನಲ್ಲಿ ಪ್ಯೂರಿಟನ್ಸ್ ಎಂಬ ಕ್ರೈಸ್ತರಲ್ಲಿ ಅತಿ "ಮಡಿ" ಜಾತಿಯ ಜನರ ಮೇಲೆ ದಬ್ಬಾಳಿಕೆ ನಡೆಯುತ್ತಿತ್ತು. ಅವರಿಗೆ ತಮ್ಮ ಧರ್ಮವನ್ನು ಅನುಸರಿಸಲು ಅನುಮತಿ ಇರಲಿಲ್ಲ. ಸರಕಾರದ ಪೀಡೆ ದಮನ ಮತ್ತು ಅಸಹಿಷ್ಣುತೆಗಳನ್ನು ತಡೆಯಲಾರದೆ ಪ್ಯೂರಿಟನ್ನರು ತಂಡತಂಡವಾಗಿ ಇಂಗ್ಲೆಂಡನ್ನು ಬಿಟ್ಟು ಅಮೇರಿಕಕ್ಕೆ ತಲೆತಪ್ಪಿಸಿಕೊಂಡುಬರಲಾರಂಭಿಸಿದರು.

೧೬೨೦ ನೆಯ ಆಗಸ್ಟ್ ೫ ಅಮೇರಿಕನ್ನರಿಗೆ ಚರಿತ್ರಾರ್ಹವಾದುದು. ಆ ದಿನ ಪ್ಯೂರಿಟನ್ ಇಂಗ್ಲೀಶರ ಒಂದು ಪಂಗಡ ಮೇಫ್ಲವರ್ ಎಂಬ ಹಡಗಿನಲ್ಲಿ ಅಮೇರಿಕಕ್ಕೆ ಬಂದು ಪ್ಲೀಮತ್ ಎಂಬಲ್ಲಿ ತಂಗಿತು. ಈ "ಪಿತೃ ಯಾತ್ರಿಕರು" ಅಮೇರಿಕದಲ್ಲಿಳಿದು, ಆ ಸಸ್ಯ ಸಮೃದ್ಧವಾದ ಭೂಮಿಯನ್ನು ತಮಗೆ ದಯಪಾಲಿಸಿದುದಕ್ಕಾಗಿ ದೇವರನ್ನು ಪೂಜಿಸಿ, ತಮ್ಮ ವಸತಿಗಳನ್ನು ಕಟ್ಟಿದರು. ದೇವರು ತನ್ನ ನಚ್ಚಿನ ಬಿಳಿಯ ಸುಪುತ್ರರಮೇಲೆ ಆಶೀರ್ವಾದ ಕರೆದಿರಬೇಕು ಮತ್ತು ತನ್ನ ಲಕ್ಷಾಂತರ ತಾಮ್ರವರ್ಣೀಯ ಮಕ್ಕಳನ್ನು (ಮಲಮಕ್ಕಳಾಗಿರಬಹುದೇ ?) ಮರೆತಿರಬೇಕು. ಏಕೆಂದರೆ, ಇದೇ ಈ ರೆಡ್ ಇಂಡಿಯನ್ ಹತಭಾಗ್ಯರ ಕೊನೆಗಾಲವಾಯಿತು.

ವೀರಜನಾಂಗ

ಆಕಾಲದಲ್ಲಿ ಇಡೀ ಅಮೇರಿಕ ಖಂಡದ ಅರಣ್ಯಗಳಲ್ಲಿ ಬೇಟೆಯಾಡುತ್ತಲೋ, ಕೃಷಿ ಮಾಡುತ್ತಲೋ, ಇರೋಕಿ, ಅಲಗಾಂಕ್ವಿನ್ ಸೆಮಿನೋಲ್, ಪೀಮಾ, ಅಪಾಷ್, ನವಾಯೋ, ಚೀಕ್ಸಾ, ಚಿರೋಕಿ, ಚಿಕ್ಸಾ, ಕ್ರಾ, ಕೋಮಾಂಚ್, ಪಾನ್ನೀ, ಪೊಟ್ವಾಟಾಮಿ, ಆರಾಪಾಹೂ, ಮೊದಲಾದ ಜನಾಂಗಗಳು ಸ್ವಚ್ಛಂದವಾಗಿ ಇದ್ದುವು. ಇವರು ದೃಷ್ಟಪುಷ್ಟರು, ಸ್ಫುರದ್ರೂಪಿಗಳು, ಕುದುರೆ ಸವಾರಿಯಲ್ಲಿ ನುರಿತವರು. ಅಲ್ಲದೆ ಅತಿ ಸ್ವಾಭಿಮಾನಿಗಳು, ಕಷ್ಟ ಸಹಿಷ್ಣುಗಳು; ಇವರ ಜೀವನ-ರೀತಿ ಅದ್ಭುತವಾಗಿತ್ತು. ಚಿಕ್ಕಂದಿನಲ್ಲೇ ಮಕ್ಕಳನ್ನು ಯೋಧರನ್ನಾಗಿ ಮಾಡುವುದಕ್ಕಾಗಿ ಅವರಲ್ಲಿ ಕಷ್ಟಸಹಿಷ್ಣುತೆಯನ್ನು ಉಂಟುಮಾಡುವುದಕ್ಕಾಗಿ, ಕಾಡುಗುಡ್ಡಗಳಲ್ಲಿ ಕಠಿನವಾದ ಕೆಲಸ ಮಾಡಿಸುತ್ತಿದ್ದರು. ನಿರಾಹಾರ ಇರುವುದು, ಬೆಂಕಿಯಿಂದ ಸುಡಿಸಿಕೊಳ್ಳುವುದು; ಇರುವೆಗಳಿಂದ ಗುಹ್ಯಾಂಗಗಳಲ್ಲಿ ಚುಚ್ಚಿಸಿಕೊಳ್ಳುವುದು, ಇತ್ಯಾದಿ ಪ್ರತಿ ರೆಡ್ ಇಂಡಿಯನ್ನನ ವಿದ್ಯಾದೀಕ್ಷೆಯಾಗಿತ್ತು. (ಇವರನ್ನು ನಾಶ ಮಾಡಿ ಕೊಂದ ಬಿಳಿಯರೂ, ರೆಡ್ ಇಂಡಿಯನ್ನರನ್ನು ತಿರಸ್ಕಾರದಿಂದ ಕಾಣುತ್ತಿದ್ದಿಲ್ಲ. ಇಂಡಿಯನ್ನನನ್ನು ಕೊಲೆ ಮಾಡುವಾಗಲೂ ಗೌರವಿಸುತ್ತಿದ್ದರು. ಇಂದಿಗೂ ರೆಡ್ ಇಂಡಿಯನ್ ರಕ್ತ ಬೆರೆತ ಬಿಳಿಯನು ತನ್ನ ಇಂಡಿಯನ್ ಕುಲ-ಸಂಪರ್ಕದ ವಿಷಯವಾಗಿ ಹೆಮ್ಮೆ ಪಡುತ್ತಾನೆ).

ಈಗ ಈ ಜನಾಂಗಗಳಲ್ಲಿ ನೂರರಲ್ಲಿ ತೊಂಭತ್ತು ಹತವಾಗಿವೆ. ರೆಡ್ ಇಂಡಿಯನ್ನರ ವಿಗ್‌ವಾಮ್ ಡೇರೆಗಳು ಈಗ ಅವರ ಕಲ್ಪನೆಯ "ಅರಣ್ಯ ಸ್ವರ್ಗ" ದಲ್ಲಿ ಮಾತ್ರ ಉಳಿದಿವೆ. ಅಳಿದುಳಿದ ಕೆಲವು ರೆಡ್ ಇಂಡಿಯನ್ ಪಂಗಡಗಳು ಪ್ರತ್ಯೇಕಿಸಿಟ್ಟ "ರಿಜರ್ವೇಶನ್" ಗಳಲ್ಲಿ, (Reservation) ಕ್ಷಯಿಸುತ್ತಾ ಕ್ಷಂಸಯಿತ್ತಾ ಬದುಕಿದ್ದಾರೆ.

೧೬೮೨ ರಲ್ಲಿ ವಿಲಿಯಂ ಪೆನ್ ಎಂಬ ಮಹಾತ್ಮನು ಅಮೇರಿಕದಲ್ಲಿ "ಕ್ವೇಕರ್" ಎಂಬ ಧಾರ್ಮಿಕರ ರಾಜ್ಯವನ್ನು ಕಟ್ಟಿದನು. ಇಂಗ್ಲೆಂಡಿನ ಅರಸನಿಂದ ಸುಮಾರು ಇಂಗ್ಲೆಂಡಿನಷ್ಟೇ ದೊಡ್ಡ ಭೂಭಾಗವನ್ನು ಪಡೆದುಕೊಂಡು, ಅಲ್ಲಿ ಕ್ವೇಕರ್ ಜನರು ನೆಲಸುವಂತೆ ಮಾಡಿದನು. ರೆಡ್‌ಇಂಡಿಯನ್ನರ ಮಾತೃಭೂಮಿಯನ್ನು, ಯುಗಯುಗಾಂತರಗಳಿಂದ ಅವರು ನೆಲಸಿ ಹುಟ್ಟಿ ಬೆಳೆದ ಭೂಮಿಯನ್ನು, ಯಾರಿಗೋ ಮಾರಲು ಇಂಗ್ಲೆಂಡಿನ ಅರಸನಿಗೆ ಎಲ್ಲಿಂದ ಅಧಿಕಾರವೋ ತಿಳಿಯದು. ಹೇಗೂ ಈ ಭೂಭಾಗ-ಪೆನ್‌ಸಿಲ್ವೇನಿಯಾ. ಅವರ ನಾಡಾಯಿತು. ಅಲ್ಲಿ ವಾಸವಾಗಿದ್ದ ರೆಡ್ ಇಂಡಿಯನ್ನರನ್ನೆಲ್ಲಾ ಸಭೆಗೂಡಿಸಿ ವಿಲಿಯಂ ಪೆನ್ನನು ಅವರಿಗೆ ಘೋಷಣೆಯಿತ್ತು, ಬಿಳಿಯರೂ ಕೆಂಪುಜನರೂ ಅಣ್ಣತಮ್ಮಂದಿರಂತೆ ಬಾಳಬೇಕೆಂದೂ, "ಸೂರ್ಯಚಂದ್ರರು ಇರುವನಕ, ನೀರುಹರಿವನಕ, ಹುಲ್ಲು ಹಸುರಿರುವ ತನಕ, ರೆಡ್ ಇಂಡಿಯನ್ನರ ಹಕ್ಕುಗಳಿಗೆ ಲೋಪಬಾರದೆಂದು" ಆಶ್ವಾಸನವಿತ್ತು ಕರಾರು ಮಾಡಿಕೊಂಡನು. ಇದರ ಸಂತೋಷಾರ್ಥವಾಗಿ ಇಂಡಿಯನ್ ಅರಸೂ ("ಸಾಚೆಮ್")

ಬಿಳಿಯರ ಧೋರಣೆ

ವಿಲಿಯಂ ಪೆನ್ನನೂ "ಶಾಂತಿಯ ಕೊಳವೆ" ಯಲ್ಲಿ ಹೊಗೆ ಬತ್ತಿ ಸೇದಿದರು. ಇದೀಗ ಪೆನ್‌ಸಿಲ್ವೇನಿಯದಲ್ಲಿ ಒಪ್ಪಂದದಲ್ಲಿ ಹೇಳಿದಂತೆ ಸೂರ್ಯಚಂದ್ರರಿದ್ದಾರೆ, ಹೊಳೆ ಹರಿಯುತ್ತಿದೆ, ಹುಲ್ಲು ಹಚ್ಚ ಹಸುರಾಗಿವೆ. ರೆಡ್ ಇಂಡಿಯನ್ನರು ಮಾತ್ರ ಇಲ್ಲ. ಅವರೆಲ್ಲ ಎಂದೋ ಹೇಳ ಹೆಸರಿಲ್ಲದಂತೆ ನಾಶವಾಗಿ ಹೋಗಿದ್ದಾರೆ.

ಬಿಳಿಯರ ಧೋರಣೆ ಹೀಗಿತ್ತು; "ದೇವರ ಆಜ್ಞೆ ಮತ್ತು ಐರೋಪ್ಯ ಕಾಯಿದೆಯ ಪ್ರಕಾರ ಅಮೇರಿಕವು ಬಿಳಿಯರದು. ಅಲ್ಲಿಯ ಸಸ್ಯ, ಖನಿಜ, ಮೃಗ, ಮಾನವಸಂಪತ್ತು ಎಲ್ಲಾ ಬಿಳಿಯರ ಸೊತ್ತು. ಈ ಕಾಡುಗಳನ್ನು ಕಡಿದು ನಾಡು ಮಾಡಿ ಸಮಾಜವನ್ನು ಕಟ್ಟಬೇಕಾದರೆ ಕಾಡುಗಳ ದುಷ್ಟಮೃಗಗಳಾದ ಪೂಮಾ, ಇತ್ಯಾದಿ ಕಾಡು ಪ್ರಾಣಿಗಳನ್ನೂ ಹಾವುಗಳನ್ನೂ ನಾಶಮಾಡಬೇಕು. ರೆಡ್ ಇಂಡಿಯನ್ ಜನರೂ ಒಂದು ತರದ ದುಷ್ಟಮೃಗಗಳು. ಅವರನ್ನು ಸಂಹರಿಸದೆ ಇದ್ದರೆ ಕಾಡನ್ನು ನಾಡಾಗಿ ಮಾಡುವಂತಿಲ್ಲ. ಅವರು ಅತಿ ಸ್ವಾಭಿಮಾನಿಗಳೂ ಆಗಿದ್ದುದರಿಂದ ನೀಗ್ರೋಗಳಂತೆ ಗುಲಾಮರಾಗಲು ಅವರು ಒಪ್ಪುತ್ತಿರಲಿಲ್ಲ. ಆದುದರಿಂದ ನಿರುಪಾಯರಾಗಿ ಬಿಳಿಯರು ಅವರನ್ನು ಕೊಲ್ಲಬೇಕಾಯಿತು."

ಅಮೇರಿಕದಲ್ಲಿ ಬಿಳಿಯರು ಆಸ್ತಿ ಪಡೆದುಕೊಂಡ ಕಥೆ ಸ್ವಾರಸ್ಯದ್ದಿದೆ. ಹೆಚ್ಚು ಇಂಡಿಯನ್ನರನ್ನು ಕಾಡು ಮೃಗಗಳಂತೆ ಬೇಟೆಯಾಡಿ ಕೊಂದು, ಅವರ ಆಸ್ತಿಗಳನ್ನು ಕಸಿದುಕೊಂಡರು. ಕೆಲವುಬಾರಿ ಅವರ ಅರಸರಿಗೆ ಯಥೇಚ್ಛ ಹೆಂಡ ಕುಡಿಸಿ ಅವರಿಂದ ಕರಾರು ಪತ್ರಗಳಿಗೆ ರುಜುಮುದ್ರೆ ಹಾಕಿಸಿಕೊಂಡರು. ಮಸ್ಸಾಚುಸೆಟ್ಸ್ ಪ್ರಾಂತ್ಯದ ಬೆಲೆ ಮೂರು ಗಡಿಗೆ ಹೆಂಡ ಎಂದು ಈಗಲೂ ಅಮೇರಿಕದಲ್ಲಿ ನಗೆಮಾತಾಗಿ ಪ್ರಚಾರದಲ್ಲಿದೆ. ಇಡೀ ನ್ಯೂಯಾರ್ಕ್ ಪ್ರಾಂತವನ್ನು ೨೪ ಡಾಲರುಗಳಿಗೆ ಪಡೆದುಕೊಂಡದ್ದು ಚರಿತ್ರಪ್ರಸಿದ್ಧ ವಿಷಯ.

ಎಷ್ಟೋ ಜನ ರೆಡ್ ಇಂಡಿಯನ್ನರು ಕ್ರೈಸ್ತ ಧರ್ಮಕ್ಕೆ ಸೇರಿದರೆ ತಮ್ಮ ರಕ್ಷಣೆಯಾಗುವುದೆಂದು ನಂಬಿ ಕ್ರೈಸ್ತಧರ್ಮವನ್ನು ಅವಲಂಬಿಸಿದ್ದು ಮಾತ್ರವಲ್ಲದೆ ಇಂಗ್ಲೀಷು ಭಾಷೆಯನ್ನು ಕಲಿತು, ಇಂಗ್ಲೀಷು ಹೆಸರುಗಳನ್ನು ಇಟ್ಟುಕೊಂಡರು. ಆದರೆ ಪಾದರಿಗಳು ಈ ದುರ್ಭಾಗ್ಯರಿಗೆ "ದಂಗೆಯೇಳಬೇಡಿ; ಸರಕಾರದ ಎದುರು ದಂಗೆಯೇಳುವುದು ಮಹಾಪಾಪ" ಎಂದು ಬೋಧಿಸಿ ಅವರನ್ನು ನಿಷ್ಕ್ರಿಯರನ್ನಾಗಿ ಮಾಡಿದುದೇ ಲಾಭವಾಯಿತು !

ವಿಶ್ವಾಸದ್ರೋಹ

ಫಿಲಿಪ್ ಎಂಬ ರೆಡ್ ಇಂಡಿಯನ್ ಅರಸು ಕ್ರೈಸ್ತಧರ್ಮವನ್ನವಲಂಬಿಸಿ, ಕ್ರೈಸ್ತ ಹೆಸರನ್ನು ಇಟ್ಟುಕೊಂಡು, ಬಿಳಿಯರ ಮೈತ್ರಿಯನ್ನು ಸಂಪಾದಿಸಲು ಯತ್ನಿಸುತ್ತ ಇದ್ದನು. ಆದರೆ ದೌರ್ಭಾಗ್ಯವಶಾತ್, ಅತನ ಅಸ್ತಿ-ಭೂಮಿಗಳೆಲ್ಲಾ ಅತಿಫಲವತ್ತಾದುವು. ಆದುದರಿಂದ ಏನೇನೋ ಕುಂಟುನೆವಗಳನ್ನು ಹೂಡಿ ಬಿಳಿಯರು ಆತನನ್ನು "ಊರು-ಆಸ್ತಿ ಬಿಟ್ಟು ತೊಲಗು" ಎಂದು ಆಜ್ಞೆಯಿತ್ತರು. ಈತನ ರಾಜ್ಯದ ಹೆಸರು ಪೋಗನೋಕೆಟ್ (Pokanoket) ಎಂದು. ಪಾದರಿಗಳೂ ಮುಖಂಡರುಗಳೂ ಎಷ್ಟು ಬೋಧಿಸಿದರೂ ಫಿಲಿಪ್ ರಾಜ್ಯವನ್ನು ತೊರೆಯಲು ಒಪ್ಪಲಿಲ್ಲ. ಆದುದರಿಂದ ಬಿಳಿಯರ ಫಿರಂಗಿಗಳು ರೆಡ್ ಇಂಡಿಯನ್ನರ ಬಿಲ್ಲು ಬಾಣಗಳ ಎದುರು ಗುಂಡಿನ ಮಳೆಗರೆದು, ರೆಡ್ ಇಂಡಿಯನ್ನರು ಸತ್ತುಹೋದರು, ಫಿಲಿಪ್ಪನೂ ಅತನ ಹೆಂಡಿರು ಮಕ್ಕಳೂ ಸೆರೆಸಿಕ್ಕರು. ಆತನನ್ನು ಫಿರಂಗಿಯ ಬಾಯಿಗೆ ಕೊಟ್ಟು ಕೊಲ್ಲುವ ಮುನ್ನ "ಆತನ ಕೊನೆಯ ಇಚ್ಛೆ ಏನಾದರೂ ಇದೆಯೋ?" ಎಂದು ವಿಚಾರಿಸಿದರು. ಫಿಲಿಪ್ "ನನ್ನನ್ನು ಜೀವಂತ ಸುಡಿರಿ; ನಿಮಗೆ ಆನಂದವಾಗಬಹುದು" ಎಂದನು. (—ವಾಶಿಂಗ್ಟನ್ ಇರ್ವಿಂಗ್)

ಹಾಗೆಯೇ ಇನ್ನೊಬ್ಬ ಸಾಚೆಮನನ್ನು (ಅರಸು) ಗಲ್ಲಿಗೇರಿಸುವ ಕಾಲದಲ್ಲಿ, ಪಾದರಿಗಳು ಬಂದು ಆತನಿಗೆ ಕ್ರೈಸ್ತಮತವನ್ನು ಬೋಧಿಸತೊಡಗಿದರು. "ಏಸುದೇವನ ಧರ್ಮವನ್ನು ಸ್ವೀಕರಿಸು. ಸತ್ತ ಒಡನೆಯೇ ಸ್ವರ್ಗಕ್ಕೆ ಹೋಗುತ್ತೀಯೆ. ಇಲ್ಲವಾದರೆ ನರಕ" ಎಂದು ಬೋಧಿಸಿದರು. ಅರಸು ತುಸು ಹೊತ್ತು ಯೋಚಿಸಿ ಉತ್ಸುಕರಾದ ಪಾದರಿಗಳೊಡನೆ" ಸ್ವರ್ಗದಲ್ಲೂ ಬಿಳಿಯರಿದ್ದಾರೆಯೋ?" ಎಂದು ಪ್ರಶ್ನಿಸಿದನು. "ಹೌದು" ಎಂದು ಉತ್ತರ ಬಂದೊಡನೆಯೇ ಆತನು, "ನೇಣು ಬಿಗಿಯಿರಿ; ನನಗೆ ಸ್ವರ್ಗ ಬೇಡ" ಎಂದನಂತೆ.

ಎಷ್ಟೋ ಕಡೆಗಳಲ್ಲಿ ಸರಳ ಹೃದಯರಾದ ಈ ಕೆಂಪು ಜನರು ತಾವೇ ಮುಂದೆ ಬಂದು ಬಿಳಿಯರನ್ನು ಸ್ವಾಗತಿಸಿ, ಅವರಿಗೆ ಆಸ್ತಿಪಾಸ್ತಿ ಕೊಟ್ಟು, ಕ್ರೈಸ್ತ ಧರ್ಮವನ್ನು ಸೇರಿ, ಇಗರ್ಜಿ ಕಟ್ಟಿಸಿದರು. ಅದರ ಫಲವಾಗಿ ಅವರು ಲಯವಾದರು.

ಈಗಿನ ಜಾರ್ಜಿಯ, ಟೆನೆಸ್ಸಿ, ಮಿಸಿಸಿಪಿ ಮತ್ತು ಅಲಬಾಮಾ ಪ್ರಾಂತಗಳಲ್ಲಿ ಐದು ಜನಾಂಗಗಳ ರೆಡ್ ಇಂಡಿಯನ್ನರು ಸಾಕಷ್ಟು ಸಂಪನ್ನರಾಗಿ ಉಳಿದಿದ್ದರು. ಇವರಲ್ಲಿ ಚೆರೋಕೀ ಎಂಬ ಜನಾಂಗವಂತೂ ತುಂಬ ಮುಂಬರಿದು, ಬೇಸಾಯ ಮಾಡಿ, ಕ್ರೈಸ್ತ ಇಗರ್ಜಿಗಳನ್ನೂ ಪಾಠಶಾಲೆಗಳನ್ನೂ ಕಟ್ಟಿಸಿ, ಇಂಗ್ಲೀಷು ನಾಗರಿಕತೆಯನ್ನು ಸವಿಯುತ್ತ ಇದ್ದರು.

ಪಾಶವೀ ಕ್ರೌರ್ಯ

ಆದರೆ ೧೮೩೨ ರಲ್ಲಿ ಸರಕಾರಕ್ಕೆ ಈ ಭೂಭಾಗವು ಒಳ್ಳೆಯ ಫಲವತ್ತಾದುದೆಂದು ತಿಳಿಯಿತು. ಆದುದರಿಂದ ಕೂಡಲೆ "ಈ ಭೂಭಾಗವು ಬಿಳಿಯರ ವಸತಿಗಾಗಿ ಕಾದಿಡಲ್ಪಟ್ಟಿದೆ." ಎಂದು ಘೋಷಣೆ ಹೊರಡಿಸಿತು. ಇಂಡಿಯನ್ನರು ವಿರೋಧಿಸಿದುದರಿಂದ ಯುದ್ಧವಾಗಿ ನಾಗರಿಕತೆಗೆ, (ಅಂದರೆ ಗುಂಡು-ಫಿರಂಗಿಗಳಿಗೆ) ವಿಜಯವಾಯಿತು. ಇಂಡಿಯನ್ನರು ಸತ್ತು ಸತ್ತು, ೧೬,೦೦೦ ಮಂದಿ ಮಾತ್ರ ಉಳಿದರು. ಈ ಗಾಯಪಟ್ಟ, ಬಳಲಿದ, ಹತಶೇಷ ೧೬,೦೦೦ ನಿರ್ಭಾಗ್ಯರನ್ನು ಸೈನಿಕರು ಕೋವಿಗತ್ತಿಯಿಂದ ಕುಕ್ಕುತ್ತ ಕುಕ್ಕುತ್ತ ನೂರಾರು ಮೈಲು ದೂರದ "ಒಕ್ಲಹೋಮ" ಪ್ರಾಂತಕ್ಕೆ ಅಟ್ಟಿದರು.

ಇದು ಗುಡ್ಡಗಾಡು ಪ್ರದೇಶ. ಆದರೂ ಈ ಹತಶೇಷ ಇಂಡಿಯನ್ನರು ಇದನ್ನೇ ಸ್ವರ್ಗವಾಗಿ ಭಾವಿಸಿ "ಒಕ್ಲಹೋಮ" ಅಂದರೆ "ನಮ್ಮ ನಾಡು" ಎಂದು ಹೆಸರಿಟ್ಟರು. ಈ ಪ್ರಾಂತವು ಒಳ್ಳೆಯ ಅಭಿವೃದ್ಧಿಯನ್ನು ಪಡೆಯಿತು, ಬೇಸಾಯ ಮಾಡುತ್ತ ಇಂಡಿಯನ್ನರು ಸಮೃದ್ಧಿಯಿಂದಿದ್ದರು. ಚೆರೋಕೀ ಜನಾಂಗವು ತನ್ನದೇ ಆದ ಪತ್ರಿಕೆಗಳನ್ನು, ಮುದ್ರಣಾಲಯಗಳನ್ನು ನಡೆಸುತ್ತಿತ್ತು. ನೆರೆಹೊರೆಯ ಬಿಳಿಯರ ಪ್ರಾಂತಗಳಿಗಿಂತ ಹೆಚ್ಚು ಶಾಲೆಗಳೂ ಸಾಕ್ಷರತೆಯೂ ಇವರಲ್ಲಿದ್ದವು.

ಆದರೆ ಆ ಸೌಖ್ಯವನ್ನು ಅನುಭವಿಸುವುದು ಈ ಬಡಪಾಯಿಗಳ ಹಣೆಯಲ್ಲಿ ಬರೆದಿರಲಿಲ್ಲ. ೧೮೮೯ ರಲ್ಲಿ ಈ ಭಾಗದ ಮೇಲೂ ಬಿಳಿಯರ ಗೃಧ್ರದೃಷ್ಟಿ ಬಿದ್ದಿತು. ಒಕ್ಲಹೋಮವು ಬಿಳಿಯರ ವಸತಿಗೆ ಯೋಗ್ಯವೆಂದು ಸರಕಾರದ ಅಪ್ಪಣೆಯಾಯಿತು. ೧೮೮೯ ಎಪ್ರಿಲ್ ೨೨ ನೆಯ ದಿನ ಹನ್ನೆರಡು ಗಂಟೆಯ ಹೊತ್ತಿಗೆ ಒಂದು ತೋಫು ಹಾರಿಸಿದಾಗ, ಯಾವ ಬಿಳಿಯನೂ ಒಕ್ಲಹೋಮವನ್ನು ಪ್ರವೇಶಿಸಿ, ಮನಸ ಬಂದಷ್ಟು ಭೂಮಿಯನ್ನು ಆಕ್ರಮಿಸಿ "ತನ್ನ ಆಸ್ತಿಯನ್ನಾಗಿ ಮಾಡಬಹುದೆಂ"ದು ಶಾಸನವಾಯಿತು. ಆ ದಿನ ಹನ್ನೆರಡು ಗಂಟೆಗೆ ತೋಫು ಹಾರಿಸುತ್ತಲೇ, ಬಿಳಿಯರು ತಂಡ ತಂಡವಾಗಿ ಕೋವಿ-ಗುಂಡು ಹಿಡಿದುಕೊಂಡು ಬಂದು, ಕೆಂಪು ಜನರನ್ನು ಹೊಡೆದು ಓಡಿಸಿ, ಭೂಮಿಯನ್ನೆಲ್ಲ ಆಕ್ರಮಿಸಿದರು; ಆಸ್ತಿಯನ್ನೆಲ್ಲ ಸ್ವಾಹಾಕರಿಸಿದರು.

ಈ ಘೋರವಾದ "ಕಾಯದೇಶಿರ" (Legal) ದರೋಡೆಯಾದ ಮೇಲೆ ದಯಾಳು ಸರಕಾರಕ್ಕೆ ಇಂಡಿಯನ್ನರ ಮೇಲೆ ಕೃಪೆ ಹುಟ್ಟಿತು. ಅವರನ್ನು ಸರಕಾರದ ರಕ್ಷಿತ ಪುತ್ರರು (WARDS) ಎಂದು ಸಾರಿತು. ಇವರ "ರಕ್ಷಣೆ"ಗೆಂದು "ಇಂಡಿಯನ್ ಬೋರ್ಡು" ಎಂಬ ಇಲಾಖೆಯನ್ನು ನಿರ್ಮಿಸಿದರು. ಈ ಇಲಾಖೆ ಇಂಡಿಯನ್ನರನ್ನು ರಕ್ಷಿಸುವಬದಲು ಭಕ್ಷಿಸಿದ್ದರಿಂದ ಇದನ್ನು "ಆ್ಯಂಟಿ ಇಂಡಿಯನ್ ಬೋರ್ಡ್" ಎಂದು ಜಾನ್ ಗುಂಥರನು ಕರೆದಿದ್ದಾನೆ. ಇಂಡಿಯನ್ನರೆಲ್ಲ ರಿಸರ್ವೇಶನ್ ಕಾಡುಗಳಲ್ಲಿ ವಾಸಿಸಬೇಕೆಂದು ಶಾಸನವಾಯಿತು. ಇಲ್ಲಿಯೂ ಇವರ ಭೂಮಿಗಳನ್ನೆಲ್ಲಾ ಇಂಡಿಯನ್ ಬೋರ್ಡಿನ ಅಧಿಕಾರಿಗಳು ಸುಂಗಿ ಹಾಕಿದರು ಇಲ್ಲವೆ ಮಾರಿದರು. ಈ ರಿಸರ್ವೇಶನ್‌ಗಳೊಳಗೆ ಖನಿಜಸಂಪತ್ತು ಇದ್ದರೆ ಅದನ್ನು ತಾವೇ ಉಪಯೋಗಿಸುವ ಅಧಿಕಾರ ಇಂಡಿಯನ್ನರಿಗಿಲ್ಲ. ಆ ಸಂಪತ್ತಿನ ಆಡಳಿತೆಗಾಗಿ ಬೋರ್ಡು ತಾನೇ ವಕೀಲರುಗಳನ್ನು ನೇಮಿಸುತ್ತದೆ. ಈ ವಕೀಲರು (ಇಂದಿಗೂ) ಇಂಡಿಯನ್ನರನ್ನು ಚೆನ್ನಾಗಿ ವಂಚಿಸಿ ಸುಲಿಯುತ್ತಾರೆ. ಅವರು ಏನೇನೋ ಕಾಯಿದೆ ಪತ್ರಗಳಿಗೆ ಸರಳರಾದ ಇಂಡಿಯನ್ನರ ಹೆಬ್ಬೆಟ್ಟು ರುಜು ತೆಗೆದುಕೊಂಡು ಅವರನ್ನು ಸುಲಿಯುತ್ತಾರೆ.

ಇದರ ಪರಿಣಾಮವಾಗಿ ದಾರಿದ್ರ್ಯ, ದುಃಖ ಮತ್ತು ಅಭಿಮಾನಭಂಗದಿಂದ ಈ ಜನರಿಗೆ ಎದೆಯೊಡೆದಂತಾಗಿದೆ. ೧೮೫೦ ರಲ್ಲಿ ೧೨೦೦೦೦ ಸಂಖ್ಯೆಯಿದ್ದ ಇಂಡಿಯನ್ನರು ೧೮೯೦ ರಲ್ಲಿ ಬರಿ ೨೦,೦೦೦ ಕ್ಕೆ ಇಳಿದರು. ಅವರಲ್ಲಿ ಇಂದಾದರೂ ಬದುಕಿ ಬಾಳುವ ಇಚ್ಛೆ ಉಳಿದಿಲ್ಲ. ಜನನಸಂಖ್ಯೆ ಇಳಿದಿದೆ. ಮರಣಸಂಖ್ಯೆ ಏರುತ್ತಿದೆ. ಜನಾಂಗವೇ ಕ್ಷಯಿಸುತ್ತದೆ.

ಸರಕಾರವೇ ಸ್ವಲ್ಪ ಕಾಲದ ಹಿಂದೆ ಇಂಡಿಯನ್ನರನ್ನು "ಕೀಟಲೆ ಪ್ರಾಣಿಗಳು" ಎಂದೂ, "ಇವರನ್ನು ಅಡಗಿಸುವುದು ದೇಶದ ಕೃಷಿ ಮತ್ತು ಅಭಿವೃದ್ಧಿಗೆ ಅವಶ್ಯಕ"ವೆಂದೂ ತತ್ತ್ವವನ್ನು ಪ್ರಕಟಿಸಿತ್ತು. ಸೈನ್ಯ ಮತ್ತು ಗೃಹ ಶಾಖೆಗಳು ಈ ನೀತಿಯನ್ನು ಚೊಕ್ಕಟವಾಗಿ ಪರಿಪಾಲಿಸಿದವು.

—೧೫ನೆಯ ಪುಟಕ್ಕೆ

೧೯೪೯ನೇ ವರ್ಷದಲ್ಲಿ ಏನಾಗುವುದಿದೆ?

೧೯೪೯ ನೆ ವರ್ಷದ ನಿಮ್ಮ ಸುಖ ದುಃಖ ಮುಂಚೆಯೇ ತಿಳಿಯುವದಿದ್ದರೆ ಪೋಸ್ಟ ಕಾರ್ಡಿನ ಮೇಲೆ ನಿಮ್ಮ ವಿಳಾಸ ಬರೆದು, ಯಾವದೇ ಹಣ್ಣಿನ ಹೆಸರು ಬರೆದು ಕಳಿಸಿರಿ. ಅಷ್ಟರಿಂದಲೇ ಜ್ಯೋತಿಷ್ಯದ ಬಲದಿಂದ ನಿಮಗೆ ಬರುವ ೧೨ ತಿಂಗಳಲ್ಲಿಯ ಲಾಭಾಲಾಭ, ವ್ಯಾಪಾರದಲ್ಲಿ ಹಾನಿ, ದ್ರವ್ಯಲಾಭ, ನೌಕರಿ ಬಡತಿ ಹಿಂಬಡತಿ ವರ್ಗಾವರ್ಗಿ, ಹೆಂಡಿರು ಮಕ್ಕಳ ಸುಖ, ಆರೋಗ್ಯ, ಆಜಾರಿ, ದೂರಿನ ಪ್ರವಾಸ, ಖಟ್ಲೆ, ಪರೀಕ್ಷೆಗಳಲ್ಲಿ ಯಶ, ಲಗ್ನ, ಹೊಲ ಮನೆಗಳ ಸುರಕ್ಷಿತೆ, ಹೊಸ ಸಂಬಂಧ ಅಥವಾ ಲಾಭ, ಸಟ್ಟಾ ಇಲ್ಲವೆ ಇತರ ಅನಿರೀಕ್ಷಿತ ದ್ರವ್ಯ ಲಾಭ ಮುಂತಾದ್ದನ್ನು ನಿಮ್ಮ ಪತ್ರದ ತಾರೀಖಿನಿಂದ ಒಂದು ವರ್ಷದ ಎಲ್ಲ ಘಟನೆ ಸವಿಸ್ತರ ಬರೆದು, ನಿಮಗೆ ೧೨ ತಿಂಗಳ ಪೂರ್ಣ ಭವಿಷ್ಯ ತಯಾರಿಸಿ ಕೇವಲ ಒಂದು ರೂಪಾಯಿ ನಾಲ್ಕಾಣೆಗೆ ವ್ಹಿ. ಪಿ. ಕಳಿಸಲಾಗುವದು. ಪೋಸ್ಟ ವೆಚ್ಚ ಬೇರೆ. ಜೊತೆಗೆ ನಿಮ್ಮ ಮುಂದ ಭಾಗ್ಯವನ್ನು ಉಜ್ವಲಗೊಳಿಸುವ ಉಪಾಯ ತಿಳಿಸುವೆವು. ಅದರಿಂದ ಮುಂಬರುವ ಸಂಕಟಗಳಿಂದ ಪಾರಾಗಲು ಹಗುರಾಗುವದು. ಇದೊಂದೇ ಅನುಭವದಿಂದ ನಮ್ಮ ಜ್ಯೋತಿಷ್ಯ ಜ್ಞಾನದ ಖಾತ್ರಿಯಾಗುವದು. ಸುಳ್ಳೆಂದು ಸಿದ್ಧವಾದರೆ ಹಣ ವಾಪಸ ಕೊಡುವೆವು.

Shri Swami Sat Narain Jotish Ashram (K. V. H.)
JULLUNDUR CITY

ವಿಚಾರದ್ವಂದ್ವ

ಈ ಸದರಿಯಲ್ಲಿ ಕೆಳಗೆ ಜನಾಭಿಪ್ರಾಯವನ್ನು ಪ್ರಾಮಾಣಿಕವಾಗಿ ಪ್ರಕಟಿಸಬೇಕೆಂದಿದ್ದೇವೆ. ಕೇವಲ [illegible] ಬೆಳಕಿಗೆ ತರುವದು ಇದರ ಉದ್ದೇಶವಾಗಿದೆ. [illegible] ವಿಷಯಗಳ ಮೇಲೆ [illegible] ಜನಾಭಿಪ್ರಾಯವನ್ನು ರೂಪಿಸುವದೇ [illegible] ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

★

ನಾಟಕದಲ್ಲಿ ಸ್ತ್ರೀಯರು

ನಾನು ೨೯ ಮೇ ೪೯ರ 'ಕರ್ಮವೀರ'ವನ್ನು ತೆಗೆದುಕೊಂಡ ಕೂಡಲೇ, ಪದ್ಧತಿಯಂತೆ 'ರೂಪರಂಗ'ದ ವಿಭಾಗವನ್ನು ತೆರೆದೆ. ಆದರೆ ಅಲ್ಲಿ 'ಸ್ತ್ರೀ ಭ್ರಮೆ'ಗಾಗಿ ಭಯಕೊಂಡ ರಸಗಂಗಾಧರರ ಸ್ವರ.ಕೇಳಿ ಬಂದಿತು. ನಾಟಕ-ಸಿನೇಮಗಳಲ್ಲಿ ಸ್ತ್ರೀಯರೂ ಪಾತ್ರವಹಿಸುತ್ತಿರುವದು ಇವರ ವಿಹ್ವಲತೆಗೆ ಕಾರಣವಾಗಿದೆ. ಇವರ ಲೇಖನವನ್ನು ಓದಿದ ಮೇಲೆ, ಮಹಾರಾಷ್ಟ್ರದಲ್ಲಿ ಕಂಡು ಬರುವ 'ಬಹುರೂಪಿ' ಮತ್ತು 'ನಟಿ ಅಥವಾ ನಟಿ' ಈ ಶಬ್ದಗಳು ಲೇಖಕರ ತಲೆಯಲ್ಲಿ ಗೊಂದಲವೆಬ್ಬಿಸಿವೆ ಎಂಬುದು ತಿಳಿದು ಬರುತ್ತದೆ. 'ಬಹುರೂಪಿ'ಯೇ "ನಟ" ಎಂಬ ತಪ್ಪು ಕಲ್ಪನೆ ಇವರಲ್ಲಿ ದೃಢವಿದೆ. ಒಬ್ಬ ಮನುಷ್ಯ ಸೀರೆಯನ್ನುಟ್ಟುಕೊಂಡು, ಹೆಂಗಸಿನಂತೆ ನಡವಳಿಕೆಗಳನ್ನು ಪ್ರದರ್ಶಿಸಿದರೆ ಅವನಿಗೆ "ಬಹುರೂಪಿ" ಎಂದು ಕರೆಯಬಹುದು. ಆದರೆ "ನಟ"ನೆಂದಲ್ಲ! ಅವನ ಕುಶಲತೆಯನ್ನು ಹೊಗಳಬಹುದಾದರೂ ಅವನಲ್ಲಿಯ ಕಲೆಯ ಅಭಾವಕ್ಕಾಗಿ ಮರುಗಬೇಕಾಗುತ್ತದೆ. **ಕುಶಲತೆಯೇ ಕಲೆಯಲ್ಲ!** ಆದರೆ ಅಭಿನಯದಲ್ಲಿ ಮಹತ್ವದ ಮತ್ತು ಹೆಚ್ಚಿನ ಭಾಗ ಕಲೆಯದು. ಕುಶಲತೆ ಅದಕ್ಕೊಂದು ಪೋಷಕ ಮಾತ್ರ! ಹೀಗಿಲ್ಲದಿದ್ದರೆ ಮಹಾರಾಷ್ಟ್ರದಲ್ಲಿಯ ಪ್ರತಿಯೊಬ್ಬ **ಬಹುರೂಪಿಯೂ ಪ್ರಸಿದ್ಧ ಅಭಿನಯಕಾರನಾಗಬಹುದಿತ್ತು!** ಪ್ರಸಿದ್ಧ ಸ್ತ್ರೀ ಪಾತ್ರಧಾರಿ ಗಂಧರ್ವನ "ಮೀರಾಬಾಯಿ" ಚಿತ್ರಪಟಕ್ಕಿಂತ ಎಂ. ಎಸ್. ಸುಬ್ಬುಲಕ್ಷ್ಮಿಯವರ "ಮೀರಾ" ಚಿತ್ರಪಟದ ಮೀರಾಳ ಅಭಿನಯ ಮತ್ತು ಹಾಡುಗಾರಿಕೆಗಳ ದೃಷ್ಟಿಯಿಂದ ಎಷ್ಟೋ ಮೇಲ್ಮಟ್ಟದ್ದಿದೆ. ರಸಗಂಗಾಧರರು ಹೊಗಳುವ **'ನಿಜಾಭಾಸ' ಪ್ರೇಕ್ಷಕನು ತಿಳಿದೂ ತಿಳಿದೂ ತಂದುಕೊಳ್ಳುವ ಭ್ರಮೆ.** ಈ ರೀತಿಯ ಭ್ರಮೆಯ ಜಾಲದಲ್ಲಿ ಸಿಲುಕುವದು ಉಚಿತವಾಗಿದ್ದರೆ, **ಬ್ರಾಂಡಿ ಭ್ರಮೆಯಲ್ಲಿ ಮುಳುಗುವದು ಅನಾಚಾರವೇಕೆ?** ಇನ್ನೂ ವರೆಗೂ ಯಾವ ಗಂಡಸಿಗೂ ಹೆಂಗಸಿನ ಭಾವನೆಗಳನ್ನು ಅಭಿನಯದಲ್ಲಿ ಉತ್ತಮ **ರೀತಿಯಿಂದ ವ್ಯಕ್ತಪಡಿಸುವುದು ಸಾಧ್ಯವಾಗಿಲ್ಲ!** ಅಷ್ಟಲ್ಲದೆ **ಅಭಿನಯ ಕಲೆಯನ್ನು ವೇಶ್ಯೆ ಅಥವಾ ಕುಲೀನ ಸ್ತ್ರೀ ಎಂಬ ಸಂಕುಚಿತ ಚೌಕಟ್ಟಿನಲ್ಲಿ ಇಡಲು ಹವಣಿಸಬಹುದೆ?** ಎಷ್ಟೋ ವೇಶ್ಯೆಯರು ಎಷ್ಟೋ ಕುಲೀನ ಸ್ತ್ರೀಯರಿಗಿಂತ ಚೆನ್ನಾಗಿ ಅಭಿನಯಿಸುವದಿಲ್ಲ? **ಅಭಿನಯಿಸಬಲ್ಲ ಸ್ತ್ರೀಯರೆಲ್ಲ ವೇಶ್ಯೆಯರೆಂದು ರಸಗಂಗಾಧರರ ಅಭಿಪ್ರಾಯವಿದ್ದಂತೆ ತೋರುತ್ತದೆ.** ವೇಶ್ಯೆಯರಿದ್ದ ಕೆಂಪನಿಗಳಲ್ಲಿ ಕುಲಪುರುಷರು ಸೇರುತ್ತಿದ್ದಿಲ್ಲವಂತೆ. ಅಭಿನಯಕಾರನಲ್ಲದಿದ್ದರೂ ಉದಾತ್ತ ಚರಿತನಾದ ಕುಲಪುರುಷ ಚಾರುದತ್ತನ 'ವಸಂತಸೇನೆ' ಯಾರು? ವೇಶ್ಯೆ. ಅಷ್ಟಲ್ಲದೆ ನೀತಿ ಎಂದರೆ ಏನು? ನೀತಿ ಎಂದರೆ ದೇಶಾಂತರಗಳಿಂದ ಮತ್ತು ಕಾಲಾಂತರಗಳಿಗೆ ಹೊಂದಿಕೊಂಡು ಮನುಷ್ಯನ ಮನಸ್ಸಿನಲ್ಲಿ ಬದಲುಗೊಳ್ಳುವ **ಒಂದು ಭ್ರಮೆ!**

ಈಗಿನವರು ಸ್ತ್ರೀಯರನ್ನು ರಂಗಕ್ಕೆ ತಂದು "ಕುಣಿಸುತ್ತಲಿದ್ದಾರೆಂದು" ರಸಗಂಗಾಧರರು ಹೇಳಿದ್ದಾರೆ. ಹಿಂದಿನವರು ಸ್ತ್ರೀಯನ್ನು ಅಡಿಗೆ ಮನೆಯ **'ಕತ್ತಲು ಕೋಣೆ'**ಗೆ ಎಳೆದೊಯ್ದಂತೆ ಈಗಿನವರಾರೂ ಸ್ತ್ರೀಯನ್ನು ರಂಗಕ್ಕೆ ಎಳೆದು ತಂದಿಲ್ಲ. ಅವಳೆ ತಾನಾಗಿ ತನ್ನ ಕಳೆದುಕೊಂಡ ಸ್ವಾತಂತ್ರ್ಯ, ನ್ಯಾಯ್ಯವಾದ ಮತ್ತು **ಉದಾತ್ತವಾದ ಹಕ್ಕನ್ನು** ಮತ್ತೆ ಸ್ಥಾಪಿಸಿಕೊಂಡಿದ್ದಾಳೆ! ಈ ಕೃತಿ ಸ್ತ್ರೀಯಲ್ಲಿ ಕಲೆಗಾಗಿರುವ ಆಸ್ಥೆ ಮತ್ತು ಜಾಗೃತವನ್ನು ತೋರಿಸುತ್ತದೆ. ಸ್ತ್ರೀಯರನ್ನು ರಂಗದಿಂದ ದೂರವಿಟ್ಟರೆ ಈಗಿರುವ ಕಾಮಪ್ರವೃತ್ತಿಯ ಓಘವನ್ನು ತಡೆಯಬಹುದು ಎಂದು ರಸಗಂಗಾಧರರು ಬಗೆದಂತಿದೆ. ಕಾಮಪ್ರವೃತ್ತಿ ಮನುಷ್ಯ ಸೃಷ್ಟಿಯ ಆದಿಯಿಂದಲೇ ಇದೆ. ಆದರೆ ಪ್ರತಿ ವ್ಯಕ್ತಿಯ ತೀರ ಬಾಲ್ಯದಿಂದಲೂ ಬೆಳೆದುಕೊಂಡು ಬರುವ ನೈಸರ್ಗಿಕ ಪ್ರವೃತ್ತಿ ಎಂದು ಮಾನಸಶಾಸ್ತ್ರಜ್ಞ "ಫ್ರಾಯ್ಡ್"ರು ಹೇಳುತ್ತಾರೆ. ಅದನ್ನು ಒತ್ತಿ **ಹಿಡಿದಷ್ಟು ಜೋರಿನಿಂದಲೇ ಅದು ಪುಟಿದು ಎದ್ದು ನಿಲ್ಲುತ್ತದೆ.** ಈ ಪ್ರವೃತ್ತಿಯ ಪ್ರವಾಹಕ್ಕೆ ಒಂದು ಕಡೆಯಿಂದ ಆತಂಕ ಬಂದರೆ, ಅದು ಬೇರೊಂದೆಡೆಗೆ ಹೊರಳಿ ತನ್ನ ದಾರಿ ಮಾಡಿಕೊಳ್ಳುತ್ತದೆ. ಹೆಣ್ಣೇ ಕಾಮಪ್ರವೃತ್ತಿಯ ಮೂಲ ಮತ್ತು ಅಂಗಪ್ರದರ್ಶನದಿಂದ ಮೋಹಿಸುವವಳೂ ಹೆಣ್ಣೇ ಎಂಬವೂ ರಸಗಂಗಾಧರರ ಇನ್ನೂ ಕೆಲ ಸಿದ್ಧಾಂತಗಳು. ಪುರುಷನು ಸ್ತ್ರೀಯಲ್ಲಿ ಕಾಮಪ್ರವೃತ್ತಿಯನ್ನು ಪ್ರಚೋದಿಸುವನು ಎಂಬ ಮಾತು ಸ್ತ್ರೀಯ ದಿನಂಪ್ರತಿಯ ಕೃತಿಗಳನ್ನು ಸೂಕ್ಷ್ಮವಾಗಿ ನೋಡಿದರೆ ತಿಳಿದು ಬರುತ್ತದೆ. ಹಾಗೆಯೇ ಷಂಢನಲ್ಲದ ಪ್ರತಿ ಗಂಡಸನ್ನೂ ಸ್ತ್ರೀಯನ್ನು ಮೋಹಿಸಲು **ಆಡಂಬರಗಳನ್ನು ಮಾಡದೇ ಇರಲಾರನು.** ಎಂಬುದು ಪ್ರತಿಯೊಬ್ಬರ ಅನುಭವಕ್ಕೆ ಬಂದ ಮಾತಾಗಿದೆ. ಹಾಗಿರದಿದ್ದರೆ ಹಿಂದಿನ ದಿನಗಳಲ್ಲಿ ಜರದ ಮುಂಡಾಸಗಳು ಮತ್ತು ಈಗಿನ ದಿನಗಳಲ್ಲಿ ಸ್ನೋ-ಪಾವಡರ-ಫ್ಲ್ಯಾನೆಲ ಸೂಟುಗಳು ಒಪ್ಪಾಗುತ್ತಿದ್ದಿಲ್ಲ! ಕಾಮಪ್ರವೃತ್ತಿ ಹೆಣ್ಣು-ಗಂಡಿನಲ್ಲಿಯ ಪರಸ್ಪರ ಕೊಡುಕೊಳ್ಳುವ ನ್ಯಾಯವಾದ ಸಂಗತಿ!

ಹೆಣ್ಣುಗಂಡಿನಲ್ಲಿ ವಿಶೇಷ ಹೋಲಿಕೆ ಇದೆ ಎಂದು ಮಾನಸಶಾಸ್ತ್ರ ಹೇಳುವದೇನುಸಹ ಸುಳ್ಳಲ್ಲ. ಆದರೆ ಮಾವೂ ಹಣ್ಣೇ, ಪೇರಲವೂ ಹಣ್ಣೇ ಎಂದರೆ ಎರಡರ ರುಚಿಯೂ ಒಂದೇ ಎಂದ ಹಾಗಲ್ಲ!

(ಶ್ರೀ- ಶ್ರೀನಿವಾಸ ನರಗುಂದಕರರ ಅಭಿಪ್ರಾಯ ಸಾರ)

× × ×

ಗವರ್ನರರ ನೇಮಕ

ಪ್ರಾಂತಗಳ ಗವರ್ನರರು ಒಕ್ಕೂಟದ ಅಧ್ಯಕ್ಷರಿಂದ ನೇಮಕಹೊಂದಬೇಕೆಂದೂ ಅವರ ಅಧಿಕಾರಾವಧಿಯು ಸಾಮಾನ್ಯವಾಗಿ ೫ ವರುಷಗಳ ವರೆಗೆ ಅಥವಾ ಅಧ್ಯಕ್ಷರ ಅನುಗ್ರಹವಿರುವವರೆಗೆ ಇರಬೇಕೆಂದೂ ಘಟನಾ ಸಭೆಯಲ್ಲಿ ಪಾಸಾಗಿದೆ.

ಗವರ್ನರ ನೇಮಕದ ಬಗ್ಗೆ ಸಾಕಷ್ಟು ಚರ್ವಿತ ಚರ್ವಣ ಚರ್ಚೆ ನಡೆದಿದೆ. ಆದರೆ ಗವರ್ನರನು ಅಧ್ಯಕ್ಷರ ಅನುಗ್ರಹವಿರುವ ವರೆಗೆ ಅಧಿಕಾರದಲ್ಲಿರಬೇಕೆಂಬುದು ಮಾತ್ರ ಪ್ರಜಾಸತ್ತೆಯ ತತ್ವಕ್ಕೆ ಅಷ್ಟೊಂದು ಸಮಂಜಸ ತೋರುವದಿಲ್ಲ. ಮತ್ತು ಈ ಬಗ್ಗೆ ಎತ್ತಲಾದ ಆಕ್ಷೇಪಕ್ಕೆ ಘಟನಾ ಸಭೆಯಲ್ಲಿ ಸಮಂಜಸ ಉತ್ತರವೂ ದೊರೆತಿಲ್ಲ.

ಅಧ್ಯಕ್ಷರು ಏನಾದರೂ ಕುಂಟ ನೆವ ತೆಗೆದು ಗವರ್ನರನನ್ನು ತೆಗೆದು ಹಾಕಿದರೆ ಹೇಗೆ? ಗವರ್ನರಿಗೆ ತಮಗಾದ ಅನ್ಯಾಯವನ್ನು ಪ್ರತಿಭಟಿಸುವ ಹಕ್ಕೇ ಇಲ್ಲವೇ? ಕೆಳಗಿನಿಂದ ಮೇಲ್ಮಟ್ಟದ ವರೆಗೂ ಕಾಂಗ್ರೆಸ್ಸೇ ಅಧಿಕಾರದಲ್ಲಿರುವವರೆಗೆ ಯಾವ ತೊಂದರೆಯೂ ಉದ್ಭವಿಸಲಿಕ್ಕಿಲ್ಲ. ಆದರೆ ಕೇಂದ್ರ ಮತ್ತು ಪ್ರಾಂತಗಳಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರಾರೂಢವಾದವೆಂದು ಭಾವಿಸುವಾ. ಅಂತಹ ಪ್ರಸಂಗದಲ್ಲಿ ಕೇಂದ್ರದ ಅಧ್ಯಕ್ಷ ಮತ್ತು ಮುಖ್ಯ ಮಂತ್ರಿಗಳು ಕೂಡಿ ಪ್ರಾಂತದಲ್ಲಿ ಅಧಿಕಾರ ವಹಿಸಿರುವ ಬೇರೊಂದು ಪಕ್ಷವನ್ನು ಹತ್ತಿಕ್ಕಲು ಗವರ್ನರನನ್ನು ಒಂದು ಸಾಧನವನ್ನಾಗಿಸಿಕೊಂಡರೆ ಹೇಗೆ? ಅದ್ದರಿಂದ ಕನಿಷ್ಠ ಅಧ್ಯಕ್ಷರು ಗವರ್ನರರನ್ನು ತೆಗೆಯಬೇಕಾದರೆ ವಿಶಿಷ್ಟ ಕಾರಣಗಳನ್ನು ತೋರಿಸಬೇಕೆಂದೂ ಕಾಯದೆಬದ್ಧವಿಲ್ಲದಿದ್ದರೆ ಗವರ್ನರರು ನ್ಯಾಯ ದೊರಕಿಸಲು ವರಿಷ್ಠ ನ್ಯಾಯಾಲಯಕ್ಕೆ ಹೋಗಬಹುದೆಂದೂ ಹೇಳಿದರೆ ಪ್ರಜಾಸತ್ತೆಯ ತತ್ವಕ್ಕೆ ಹೆಚ್ಚು ಸುಸಂಗತವಾಗಲಿಕ್ಕಿಲ್ಲವೇ? ಇಲ್ಲದೆ ಹೋದರೆ ಗವರ್ನರರಿಗೆ ಪ್ರಾಂತದ ಅಧಿಪತಿಯೆಂಬ ಸ್ಥಾನ ಕೊಡುವದಕ್ಕಿಂತಲೂ ಹಿಂದಕ್ಕೆ ಬ್ರಿಟಿಶರು ಸಂಸ್ಥಾನದಲ್ಲಿ ತಮ್ಮ ಏಜಂಟ ಜನರಲ್ಲರನ್ನು ನೇಮಿಸುತ್ತಿರುವಂತೆ ಇವನೂ ಪ್ರಾಂತದಲ್ಲಿ ಅಧ್ಯಕ್ಷರ ಏಜಂಟ ಜನರಲ್ಲನೆಂದು ಏಕೆ ಹೇಳಬಾರದು?

—ಓರ್ವ ಪ್ರಜಾ ಸತ್ತಾವಾದಿ

ಆಕಾಶಗಂಗೆಗೆ

ಕವಿಗಳ ಹಿಂದೇ ಕರೆದಿರೆ ನಿನ್ನನು
ಭೂಮಿಗೆ ಓ ಗಂಗೆ;
ಇಳಿಗಿಳಿಯುವ ಹುಲುಯೋಚನೆಗಳ ಬಿಡು
ಮಾಡಿದರೂ ದಂಗೆ.
ದ್ರೋಹಿಯು ಎಂದೇ ಹೇಳಲಿ ನನಗೆ
ಸತ್ಯವ ಸಾರುವೆನು—
ಗುಟ್ಟನು ಹೇಳುವೆ ಯೋಚಿಸು ನಿನ್ನದೆ
ಹಿತವನು ಕೋರುವೆನು.
ಭೂಮಿಗೆ ಬಂದರೆ ನಿನಗೇ ತೊಂದರೆ
ಅಗುವೆ ನೀ ರಾಡಿ;
ನಿಟ್ಟುಸಿರಿನ ಹೊಗೆ ಕೋರಿಕೆಗಳ ನಗೆ
ಗಟಾರಗಳ ಕೋಡಿ—
ಭಂಗಿಯ ಕೆಲಸಕೆ ನಿನ್ನನು ಹಚ್ಚದೆ
ಬಿಟ್ಟರೆ ನನ್ನಾಣೆ!
ಅರ್ಥಾತೊಲೆ ನಿನಗಿದ್ದರೆ ಬುದ್ಧಿಯು
ಬಳಸಿಕೊ ಅದ ಜಾಣೆ.
ಭೂಮಿಯ ಒಳಿತನು ಮಾನವ ಬಗೆದರೆ
ಅತಗೆ ನೀನ್ ಹಂಗೇ?
ಸುಲಭದಿ ನಿನ್ನನು "ಭಂಗಿ" ಸಲೇ ಈ
ಭಕ್ತಿಯ ಬಲೆ ಗಂಗೆ!
ನಾಶದಿ ಪಳಗಿದ ಕೈಗಳ ಮಾನವ
ಲೇಸಿಗೆ ತಂತಾನೇ
ದುಡುಕಲಿ ಯುಕ್ತಿಯ ಹುಡುಕಲಿ ನೆಲದಲಿ
ಬಂದುದು ನಿನಗೇನೇ?
ಅನುಭವದೆಲ್ಲಾ ಕೆರೆಗಳಸೀಸಲು
ತಪ್ಪದು ಆ ತೀರ;
ಕಹಿಕಹಿ ಸವಿಸವಿದಾಸವಿಕಾಣಲಿ
ಮಣ್ಣಿನ ಮಗುಧೀರ.
ಕೆಲಸಕೆ ಬಾರದ ಕವಿಗಳು ಕೆಲವರು
ಕರೆಯುತ್ತಿಹರೆಂದು
ಭೂಮಿಗೆ ಬಹುಮತವಿಲ್ಲದೆ ಇಳಿದರೆ
ನಿನಗೇ ಅದು ಕುಂದು!
ಭೂಮಿಯ ತೊಳೆಯುವ ಭಂಗಿನಿಯಾಗುವೆ
ನೀ ಇಳಿದರೆ ನೆಲಕೆ;
ತರುವೆ ತೊಂದರೆಯ ಪ್ರಯೋಗ ನಡಿಸಿದ
ನರಬುದ್ಧಿಯ ಬಳಕೆ.
ಭೂಮಿಗೆ ಇಳಿದೇ ಬಿಡಬೇಕೆಂದರೆ
ಅದಕೊಂದಿದೆ ವೇಳೆ
ಮುಗಿಯಲಿ ಭೂಮಿಯ ವ್ಯಾಮೋಲೆಲ್ಲಾ
ಯಮರಾಯನ ಲೀಲೆ.
ಒಂದೂ ಹದ್ದೂ ಕಾಗೆಯು ಹಾರದೆ
ಭೂಮಿಯೆ ಬಿದ್ದಾಗ
ಕವಿಗಳು ಯಾರೂ ಕರೆಯುವದಿಲ್ಲ
ಬಾ ನೀ ಎದ್ದಾಗ.
ಅಲ್ಲಿಯವರೆಗೂ ಕವಿಗಳ ಕರೆಯನು
ಕೇಳಿದರೆನ್ನಾಣೆ;
ಅರ್ಥಾತೊಲೆ ನಿನಗಿದ್ದರೆ ಬುದ್ಧಿಯು
ಬಳಸಿಕೊ ಅದ ಜಾಣೆ.

—ವಿ. ಜಿ. ಭಟ್ಟ

× × ×

ನಿರೀಕ್ಷಣೆ

೧
ಪತಿಯು ಪೋಲೆ ಬರುವುದೆಂದು
ಕಳೆದವು ದಿನವೊಂದೊಂದೂ;
ಓಲೆಕಾರ ಪತ್ರತಂದ
ನಾಡಿದ್ದೇ ಬರುವನೆಂದ!

೨
ನನ್ನ ನಾಥ ಬರುವನಿಂದು
ಎಂದು ನೆನೆದು ಕನಸಿನೊಂದು
ಹಾರಯಿಕೆಯ ಹಾರಿಸಿದೆನು
ಆಸೆಯಿಂದ ನಿರುಕಿಸಿದೆನು!

೩
ಗಾಡಿಯನ್ನು ನೋಡಿದೆನು,
ಗಂಟೆಯನಾಲೈಸಿದೆನು;
ನಿಟ್ಟುಸಿರುಗಳೊಂದೊಂದೂ
ಉಸಿರಿದವವನಿಲ್ಲೆಂದು!

೪
ಪತಿಯು ಸತಿಗೆ ದೊರೆತ ಹಣ್ಣು,
ಹೆಣ್ಣು ಬಾಳಿಗಾದ ಕಣ್ಣು!
ಎದೆಯೊಳವನ ಚಿತ್ರಿಸುತ್ತ,
ಒರಗಿದೆನಾ ಚುಂಬಿಸುತ್ತ!

೫
ಕಾತರಿಸಿತು ನನ್ನ ಜೀವ
ಸೋತುದೆನ್ನ ಮಧುರಭಾವ;
ಮಿಡುಕುತಿತ್ತು ನಾಡಿಯಲ್ಲ—
ಬರಲೆ ಇಲ್ಲ ನನ್ನ ನಲ್ಲ!

೬
ಹಗಲುಗನಸಿನಲ್ಲೆ ಕೊರಗಿ
ಹಲಬುತಿದ್ದೆ ಕರಗಿ ಕರಗಿ;
ಯಾರೊ ಕಣ್ಣು ಚುಂಬಿಸಿದರು—
ನೋಡಲಾರು? ಎದೆದೇವರು!

—ಲೀಲಾ ವೈದ್ಯ,
ಕೊಲ್ಹಾಪುರ

ಅತ್ಯಲ್ಪ ವಯಸ್ಕ ತಾಯ್ತಂದೆಗಳು



೧೯೫೦ ರ ಜನವರಿ ೮ ನೆಯ ತಾರೀಕಿನಲ್ಲಿ ಒಂದು ಆರೋಗ್ಯವಂತ ಗಂಡುಮಗು ಇಬ್ಬರು ಚೀನೀ ಮಕ್ಕಳಿಗೆ ಹುಟ್ಟಿತು. ತಾಯಿಗೆ ೮ ವರ್ಷ ವಯಸ್ಸು, ತಂದೆಗೆ ೯. ಆ ಕುಟುಂಬದ ಹೆಸರು ಹ್ಸಿ ಎಂದು. ಅವರು ಅಮಾಯಿಯ ಒಕ್ಕಲಿಗ ವರ್ಗಕ್ಕೆ ಸೇರಿದವರು.


ಕೃತ್ರಿಮ ಮಳೆ

ಕೃತ್ರಿಮ ರೀತಿಯಿಂದ ಮಳೆ ಬರಮಾಡಿಕೊಳ್ಳಬೇಕೆಂಬ ವಿಚಿತ್ರ ಯೋಜನೆಗಳ ಸುದ್ದಿಗಳು ಆಗಾಗ ಪತ್ರಿಕೆಗಳಲ್ಲಿ ಪ್ರಸಿದ್ಧವಾಗುತಿವೆ. ಈ ಯೋಜನೆಗಳಿಗಾಗಿ ಸರಕಾರದವರು ಈಗಾಗಲೆ ಬಹಳಷ್ಟು ಹಣವನ್ನು ವೆಚ್ಚ ಮಾಡಿದ್ದು, ತಜ್ಞರಸಲಹೆ ಸೂಚನೆಗಳ ಮೇರೆಗೆ ಇನ್ನೂ ಹೆಚ್ಚು ಹಣವನ್ನು ವೆಚ್ಚ ಮಾಡಲಿರುವರೆಂದೂ ತಿಳಯುತ್ತದೆ. ಪ್ರಸಿದ್ಧ ತಜ್ಞರಾದ ಡಾ. ಎಂ. ಎಸ್, ಪಟೇಲರು ಈ ಸಂಬಂಧದಲ್ಲಿ ಅಭಿಪ್ರಾಯಪಡುತ್ತ ಇವೆಲ್ಲ ನಿಷ್ಪ್ರಯೋಜಕವಾದವುಗಳೆಂದೂ ನಂಬಲು ಬಾರದಂಥವುಗಳೆಂದೂ ನನಗೆ ತಿಳಿಸಿದ್ದಾರೆ. ಈವರೆಗೆ ಎಲ್ಲಿಯೂ ಇಂಥ ಯೋಜನೆಯ ಶಸ್ವಿಯಾಗಿಲ್ಲ ಮತ್ತು ಮಂತ್ರಿಗಳ "ಭೋಳೇ" ಸ್ವಭಾವದ ದುರುಪಯೋಗವನ್ನು ಕೆಲವು ಸ್ವಾರ್ಥಸಾಧಕರು ತೆಗೆದುಕೊಳ್ಳುವುದುಂಟು ಎಂದೂ ಅವರ ಅಭಿಪ್ರಾಯ. ಇಂಥವರ ಬಲೆಗೆ ಬೀಳಬಾರದೆಂದು ಮಂತ್ರಿಗಳಿಗೆ ಬಿನ್ನವಿಸಿಕೊಳ್ಳಬೇಕೆಂದು ಅವರು ನನಗೆ ಅಗ್ರಹದಿಂದ ಬರೆಯುತ್ತಾರೆ. (ಹರಿಜನ)

ವರ್ಧಾ ೨೧-೫-೪೯ — ಕಿ. ಘ. ಮ.

ಸುಸಂಧಿ ಲಾಭಪಡೆಯಿರಿ

ನಿರುದ್ಯೋಗ ದೂರ ಕೊಳ್ಳಿರಿ



ಪೋಸ್ಟ ದ್ವಾರ ಕಟಿಂಗ್ಸ ಕಲಿಯಬೇಕಾಗಿದ್ದರೆ:— ೪ ಆಣೆ ಅಂಚೇ ತಿಕೀಟು ಸಹಿತ ಬರೆಯಿರಿ:—
ರಾವ ಟೇಲರ್ಸ ಸ್ಕೂಲ
ಟಿಳಕ ರೋಡ, ಪುಣೆ

ದಿ ನೂತನ ಆಯುರ್ವೇದ ಕಾರ್ಯಾಲಯ, ಲಿ. ವಿಜಾಪುರ
ಪೋಷಕ-ಔಷಧಿ-ಆಹಾರ
ಚ್ಯವನಪ್ರಾಶ
ರಸ-ರಕ್ತಾದಿಧಾತುಗಳನ್ನು ಪೋಷಿಸಿ, ಬುದ್ಧಿ, ಸ್ಮರಣ ಶಕ್ತಿಗಳನ್ನು ಬೆಳೆಸಿ, ಕಾರ್ಯಕ್ಷಮತೆ, ಉತ್ಸಾಹಗಳನ್ನು ಹೆಚ್ಚಿಸಿ ಶರೀರವನ್ನು ಪರಿಪುಷ್ಟವಾಗಿ ಮಾಡುವ ಉತ್ತಮ ಧಾತುಪೌಷ್ಟಿಕ ಔಷಧ.
ಹುಬ್ಬಳ್ಳಿ ಶಾಖೆ:- ಕೊಪ್ಪೀಕರರೋಡ, ಹುಬ್ಬಳ್ಳಿ

ಲೇಖಕರು :
ಕೆ. ಗೋಪಾಲಕೃಷ್ಣ
ಹೆಗಡೆ, ಮುಂಬಯಿ

ಹಾಲಿನ ಪೂರೈಕೆ



...ದರು ತೆರೆದ ದುಗ್ಧಾಲಯದ ನೆರೆಯ ದುಗ್ಧಾಲಯ

...ತುಳ್ಳಿ ಮಾತ್ರ. ...ಎಂಬೊಂದು ...ವನ್ನು ನಡೆ ...ಷ್ಟರಾಗಿದ್ದು ... ಆರೋಗ್ಯ ...ರು. ತುಳಸೀ ...ರಡು ಪದಗಳ

ದೃಷ್ಟಿಯಿಂದಇಂತಹದೊಡ್ಡಿಗಳುಪಟ್ಟಣದೊಳಗಿರುವುದು ಅಪಾಯಕರವೆಂದು ನಗರ ಸಭೆಯವರು ನಿರ್ಧರಿಸಿದಂತೆ ಕಾಲಕ್ರಮೇಣಅದು ಸರಕಾರದ ಲಕ್ಷ್ಯವನ್ನೂ ಸೆಳೆಯಿತು. ಮುಂಬಯಿಯಲ್ಲಿಯ ಹಾಲಿನ ಕೊರತೆಯನ್ನು ನಿವಾರಿಸಲು ಸರಕಾರವು ಒಂದು ಯೋಜನೆಯನ್ನು ಸಿದ್ಧಪಡಿಸಿತು. ಅದರನ್ವಯ ಒಂದು ಹಾಲ ಹಳ್ಳಿ

ಮಿತಿಗಳಿಗನುಗುಣವಾಗಿಕಟ್ಟಡಗಳನ್ನು ಕಟ್ಟಿತ್ತಾರೆ. ಅವುಗಳಲ್ಲಿ ಕೆಲವು ಈಗಾಗಲೇ ಮುಗಿದಿವೆ. ಇನ್ನು ಕೆಲವು ಮುಗಿಯಲಿವೆ ಮತ್ತು ಳಿದವುಗಳ ನಿರ್ಮಾಣಕಾರ್ಯವು ಭರದಿಂದ ಸಾಗುತ್ತಿದೆ.

ಪ್ರತಿಯೊಂದು ಕ್ಷೀರಾಗಾರ ಅಥವಾ ದುಗ್ಧಾಲಯವು ಬಾಡಿಗೆಗೆ ಕೊಡಲಾಗುತ್ತಿದೆ. ಪಟ್ಟಣದಲ್ಲಿ ಇದುವರೆಗೆ ಕೊಳೆಯುತಿದ್ದ ಜಾನುವಾರುಗಳನ್ನೆಲ್ಲ ಇನ್ನು ಇಲ್ಲಿಗೆ ತರಲಿದ್ದಾರೆ. ಇದೊಂದು ಪರಸ್ಪರ ಸಹಕಾರ ಸಂಘದ (Co-operative Society) ಮಾದರಿಯಲ್ಲಿ ನಡೆಯಲಿದೆ. ಹಾಲನ್ನು ಮಾತ್ರ ಸರಕಾರಕ್ಕೆ ಕೊಡಬೇಕು. ಬಾಡಿಗೆಯಲ್ಲದೆ ಸರಕಾರವು ಇದರಿಂದುಂಟಾಗುವ ಲಾಭವನ್ನು ಕೇಳುವುದಿಲ್ಲ. ಹಾಲನ್ನಾದರೂ ಸರಿಯೆ. ಯೋಗ್ಯ ಬೆಲೆ ಕೊಟ್ಟೇ ಕೊಳ್ಳುತ್ತಿದೆ. ಈ ದುಗ್ಧಾಲಯದ ಯಜಮಾನ ಮತ್ತು ಅವನ ಸಂಸಾರಕ್ಕೆಂದು ವಸತಿಯ ಬಗ್ಗೆ ಸಣ್ಣ ಸುಸಜ್ಜಿತ ಮನೆಯು ಪ್ರತಿಯೊಂದರಲ್ಲೂ ಅಂದರೆ ಮೂವತ್ತೆರಡು ಕ್ಷೀರಾಗಾರಗಳಲ್ಲೂ ಇದೆ. ದುಗ್ಧ ಮಂದಿರದ ಮೇಲ್ವಿಚಾರಣೆಗೆಂದು ಕಾರ್ಯಭಾರದ ನಿರ್ವಹಣೆಗಾಗಿ ಬೇರೆ ಇಬ್ಬರು ಸಹಕಾರಿ ಕೆಲಸಗಾರರು ಇರುತ್ತಾರೆ. ಅವರಿಗೂ ಉಳಿದುಕೊಳ್ಳಲು ಯೋಗ್ಯ ವಸತಿಯ ಏರ್ಪಾಟಿದೆ. ಅನಂತರ ಅಲ್ಲೇ ಬಳಿಯಲ್ಲಿ ಮೋಟಾರು ಮತ್ತು ಎತ್ತುಗಾಡಿಗಳ ತಂಗುವಿಕೆಗೆಂದು (ದೊಡ್ಡಿ. ಅದರೀಚೆಗೆ ಮೋಟಾರುಚಾಲಕ ಮತ್ತುಅವನಸಹೋದ್ಯೋಗಿ ಯಂತ್ರಜ್ಞ (Mechauic) ಗೆಂದು) ನಿವಾಸಗೃಹಗಳು. ಅದಲ್ಲದೆ ಕೆಲಸಕ್ಕೆಬೇಕಾದ ಇಪ್ಪತ್ತಾರು ಜನ ಗೌಳಿಗಳು ಮತ್ತು ಅವರ ಸಣ್ಣ ಕುಟುಂಬಗಳಿಗೆ ಮನೆಮಾರುಗಳು- ಒಟ್ಟು ಯಜಮಾನನ್ನೊಳಗೊಂಡು ಇಲ್ಲಿಯ ಕೆಲಸ ಕಾರ್ಯಗಳಿಗೆ ಬೇಕಾದ ಎಲ್ಲ



ಗೋರೆಗಾಂವಿನ ಕೆರೆಗಳಲ್ಲಿ ಅರಿಲಾಟವಾಡುತ್ತಿರುವ ಬೀದಿ ಎಮ್ಮೆಗಳು

...ಾಳಿಯೇ ಅವ ...ಟ್ಟಿಗೆಗಳಲ್ಲೇ ... ಅಲ್ಲೇ ...ಸೂಲೆಯಲ್ಲಿ ...ಗ್ಯಯುತ್ತಾರೆ. ...ಳೆಯುತ್ತಾರೆ. ... ಕೆಲಸ ಮುಗಿ ...ೂಡಿ ಕೂಟ ...ಜೀರಿ ನಡೆಸು ...ರಿಸಿ ಕುಣಿಯು ... ವಸತಿಗೃಹಾ ...ೀವನ ನಡೆಸು ...ಯೆ, ಇಂತಹ ... ನಗರದಲ್ಲಿಯ ...ಗೆಗಳು ಪಟ್ಟ ...ನಕ್ಕೆ ಕಾರಣ ...ಂತಾದ ರೋಗ ... ತವರುಮನೆ ...ಲ ಮೂತ್ರಾದಿ ... ಯೋಗ್ಯರೀತಿ ...ತ್ಯವೂ ಹಟ್ಟಿ ...ಾಗಿರಿಸುವದೂ ... ವರ್ಷಕ್ಕೊಮ್ಮೆ ...ಾವು ಮಾಡಿದ ...? ಕಾಲಕ್ಕೆ ... ಸಾರಗಳಿಲ್ಲ. ...ಾದ ಪ್ರಮಾಣ ... ತಿನಸುಗಳನ್ನು ...ೀತು? ಅವೆಲ್ಲ ...ಗಿಲ್ಲ. ಹೀಗಾಗಿ ...ರುಗಳು, ಅವು ...ಅಕಾಲ ಮೃತ್ಯು ...ನಿಕ ಆರೋಗ್ಯ

ಮತ್ತು ಹೊಲವನ್ನು ಆಧುನಿಕ ಮತ್ತು ಶಾಸ್ತ್ರೀಯ ರೀತಿಯ ಸುಧಾರಣೆಗಳಿಂದ ರಚಿಸುವುದೆಂದು ನಿರ್ಣಯವಾಗಿ ಒಂದು ಸ್ಥಳವನ್ನು ಆರಿಸಿದರು.

ಗೋಶಾಲೆಯ ಸ್ಥಾಪನೆ

ಮುಂಬಯಿಯಿಂದ ಸುಮಾರು ಮೂವತ್ತು ಮೈಲು ದೂರದಲ್ಲಿಯ ಗೋರೆಗಾಂವ್ ಎಂಬ ಉಪನಗರದ ಎರ್ರೀ ಎಂಬಲ್ಲಿ "ಹಾಲುಹಳ್ಳಿ" ಯೀಗ ನಿರ್ಮಾಣವಾಗುತ್ತಿದೆ. ಇದಕ್ಕೆ "ಎರ್ರೀ ಹಾಲುಹಳ್ಳಿ" (Aarey Milk Colony) ಎಂದು ಹೆಸರು. ಇದುವರೆಗೆ ತಾಳೆ ಈಚಲ ಮರಗಳಿಂದ ತುಂಬಿದ್ದ ಈ ಗುಡ್ಡಗಾಡು ಪ್ರದೇಶವು ಇನ್ನು ಕೆಲ ಸಮಯದೊಳಗೆ ಒಂದು "ಹಾಲುನಗರ" ವಾಗಲಿದೆ. ಸುಮಾರು ಎಂಟು ಮೈಲು ವಿಸ್ತೀರ್ಣವುಳ್ಳ ಬಂಜರು ಭೂಮಿಯಲ್ಲೀಗ ಬಹಳ ಭರದಿಂದ ಕೆಲಸ ಸಾಗುತ್ತಿದೆ. ಕಾಡು ಮರಗಳನ್ನು ಕಡಿದು, ಗುಡ್ಡ ದಿನ್ನೆಗಳನ್ನು ಸಮತಟ್ಟಾಗಿ ಮಾಡಿರುತ್ತಾರೆ. ಇಲ್ಲಿಯ ಭೂಮಿಯನ್ನು ಯಂತ್ರದ ನೇಗಿಲುಗಳಿಂದ ಉತ್ತು ಹಸನಾದ ಹುಲ್ಲು ಹುರುಳಿ ಪೈರುಗಳನ್ನು ಬೆಳೆಸುವ ಸಲುವಾಗಿ ಹೊಲಗಳನ್ನು ರಚಿಸುತ್ತಾರೆ. ವಾಹನಗಳ ಓಡಾಟಕ್ಕೆಂದು ಸಿಮೆಂಟು ಕಾಂಕ್ರೀಟಿನ ರಾಜಮಾರ್ಗಗಳನ್ನು ನಿರ್ಮಿಸುತ್ತಾರೆ.

ಈ ಚಿಕ್ಕ ಊರನ್ನು ಬರಿಯ ಹಾಲಿನ ಉತ್ಪತ್ತಿಗಾಗಿಯೇ ಮೀಸಲಿಡಲಾಗಿದೆ. ಈ ಸ್ಥಳವನ್ನು ಮೂವತ್ತೆರಡು ಬೇರೆ ಬೇರೆ ಘಟಕಗಳನ್ನಾಗಿ ವಿಭಾಗಿಸಿರುತ್ತಾರೆ. ಪ್ರತಿಯೊಂದು ವಿಂಗಡಿಸಿದ ಭಾಗದ ಭೂಮಿಯಲ್ಲಿ ಒಂದು ಪರಿಪೂರ್ಣ ಕ್ಷೀರಾಗಾರವನ್ನು ವ್ಯವಸ್ಥಿತ ರೀತಿಯಲ್ಲಿ ರಚಿಸಲಾಗುವುದು. ಈ ಎಲ್ಲ ಭಾಗಗಳಲ್ಲಿ ಹೆಚ್ಚು ಕಡಿಮೆ ಒಂದೇ ಪ್ರಮಾಣ ಪರಿ

ಕಾರ್ಮಿಕ ವರ್ಗದವರಿಗೆ ವಸತಿಗಳಿವೆ. ಅವರು ಬೇರೊಂದು ಸ್ಥಳ, ಕೋಣೆಯನ್ನು ಹುಡುಕಬೇಕಾಗಿಲ್ಲ. ಮುಂಬಯಿಲ್ಲಿ ಇದುವರೆಗೂ ಅಸಾಧ್ಯವೆಂದು ಕಂಡು ಬಂದ ವಸತಿ ಸಮಸ್ಯೆಯು ಇವರ ಮಟ್ಟಿಗೆ ತುಸು ದೂರವಾಯಿತೆನ್ನಬಹುದು.

ಎಮ್ಮೆ ದನಗಳಿಗೆ ಕಲ್ಮಣ್ಣು ಹುಲ್ಲು ಮಾಡಿನ ಹಟ್ಟಿಗಳಲ್ಲ. ಇಲ್ಲಿಯ ಹಟ್ಟಿಗಳನ್ನು ಅಚ್ಚುಕಟ್ಟಾಗಿ ವಿಶಿಷ್ಟ ರೀತಿಯಲ್ಲಿ ಕಟ್ಟಿರುತ್ತಾರೆ. ಹಟ್ಟಿಯ ಪಾತಳಿಗೆ ಕಾಂಕ್ರೀಟು. ಮೇಲೆ ಮಾಡಿಗೆ ಸಿಮೆಂಟು ಕಲ್ನಾರು ಮಿಶ್ರಣದಿಂದ ತಯಾರಿಸಿದ ಹಲಿಗೆಗಳನ್ನು ಹಾಸಿರುತ್ತಾರೆ

(Asbestos Sheets). ವಿಶಾಲವಾದ ಅನೇಕ ಕಿಟಕಿಗಳು ಇರುವುದರಿಂದ ಶುದ್ಧಗಾಳಿಗೆ ಅವಕಾಶ ಮಾಡಿಕೊಟ್ಟಂತಾಗುವುದು.

ದನಗಳ ದೌಲತ್ತು

ಒಂದೊಂದು ಹಟ್ಟಿಯಲ್ಲಿ ಎಪ್ಪತ್ತು ನಾಲ್ಕು ದನ ಅಥವಾ ಎಮ್ಮೆಗಳನ್ನು ಕಟ್ಟುವ ವ್ಯವಸ್ಥೆಯಿದೆ. ಹೀಗೆ ಒಂದೊಂದುದುಗ್ಧಾಲಯ ವಿಭಾಗಗಳಲ್ಲಿ (Units) ಎಂಟೆಂಟು ಕೊಟ್ಟಿಗೆಗಳಿವೆ. ಅಂದರೆ ಸುಮಾರು ಆರುನೂರು ಆಕಳುಗಳನ್ನು ಸಾಕಿ ಸಲಹುವ ಏರ್ಪಾಡು ಮಾಡಿರುತ್ತಾರೆ. ಅಲ್ಲದೆ ಈ ಹಾಲು ಕರೆದು ಮಾರುವ ವ್ಯವಹಾರಕ್ಕೆ ಬೇಕಾದ ಬೇರೆ ಬೇರೆ ಕೋಣೆ ಕಟ್ಟಡಗಳಿವೆ. ಹಾಲು ಕರೆವಲ್ಲೇ ಹುಲ್ಲು, ತಿಂಡಿ, ಗಂಜಳಗಳ ಚೆಲ್ಲಾಟ ನಡೆಯಬೇಕಾಗಿಲ್ಲ. ಹಾಲು ಹಿಂಡುವ ಸಲುವಾಗಿ ಬೇರೆಯೇ ಕೋಣೆಗಳು. ಮಲಗಲು ಅಥವಾ ವಾಸಿಸಲು ಸ್ಥಳ ಬೇರೆ. ರಾತ್ರಿ ವಿರಮಿಸಲು ಪ್ರತ್ಯೇಕ ಬಯಲು ಜಾಗ. ಹೀಗೆ ಇದು ಬಹಳ ಶಾಸ್ತ್ರೀಯ ಕ್ರಮದಲ್ಲಿ ಕಟ್ಟಲ್ಪಟ್ಟಿದೆ. ಪ್ರಸವವೇದನೆ ಪ್ರಾರಂಭವಾಗುವ ಹತ್ತು ಹದಿನೈದು ದಿನಗಳ ಮುನ್ನವೇ ಅಂತಹ ಜಾನು

-೧೦ನೆಯ ಪುಟಕ್ಕೆ



ಗೋರೆಗಾಂವ್ ಉಪನಗರದ ಉಗಿಬಂಡಿಯ ನಿಲ್ದಾಣದಿಂದ ಒಂದೆರಡು ಮೈಲು ನಡೆಯುವುದರೊಳಗಾಗಿ ಹಾದಿಯಲ್ಲಿ ಕಾಣುವ ಹೆಸರು ಹಲಗೆ. ಇಲ್ಲಿಂದ ಹಾಲುಹಳ್ಳಿ ಪ್ರಾರಂಭಿಸುವದು.

ಮೂಲೆ ಮೂಲೆಗಳಿಂದ

ಸಂ. ರಾ. ಸಂಘದ ಮಾನವ್ಯ ಹಕ್ಕುಗಳ ಸಮಿತಿಯು ಮಾನವ್ಯ ಹಕ್ಕುಗಳಿಗೆ ಬಾಧೆ ತಂದುದರ ವಿರುದ್ಧ ವ್ಯಕ್ತಿಗಳು ತಂದ ದೂರುಗಳನ್ನು ಪರಾಮರ್ಶಿಸಲು ಯಾವುದಾದರೊಂದು ವ್ಯವಸ್ಥೆ ಮಾಡಬೇಕೆಂದು ಎರಡು ಸರಕಾರೇತರ ಸಂಘಟನೆಗಳು ಮಾಡಿಕೊಂಡ ಅರಿಕೆಯನ್ನು ಕೇಳಿಕೊಂಡಿತು. ಈ ಎರಡು ಸಂಘಟನೆಗಳಲ್ಲಿ ಒಂದು ಯೆಹೂದಿಗಳದು.

ವಾಶಿಂಗ್‌ಟನ್ನಿನಲ್ಲಿರುವ ಸಂಯುಕ್ತ ಸಂಸ್ಥಾನದ ಅಣುಶಕ್ತಿ ಸಂಶೋಧನಕೇಂದ್ರದಲ್ಲಿ ೪ ವಾರಗಳ ತರಬೇತನ್ನು ಪಡೆಯುತ್ತಿರುವ ಪರದೇಶೀಯ ವಿಜ್ಞಾನಿಗಳಲ್ಲಿ ಮದ್ರಾಸಿನಿಂದ ಹೋದ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಲ್ಲಿ ತಜ್ಞರೆನಿಸಿದ ಡಾ. ಪಿ ಕೃಷ್ಣನ್ನರೂ ಒಬ್ಬರು.

ಫ್ರೆಂಚ್ ರಾಷ್ಟ್ರೀಯ ಸಭೆಯ ಅಧ್ಯಕ್ಷರು ಭಾರತದಲ್ಲಿಯ ಫ್ರೆಂಚ್ ಪ್ರದೇಶಗಳ ಭವಿತವ್ಯನಿರ್ಧಾರಕ್ಕಾಗಿ ಮತಗಣನೆ ನಡೆಸಲು ಇಟ್ಟವಾಯದೆಯನ್ನು ಮುಂಬರಿಸಬೇಕೆಂದು ಚಂದ್ರನಗರದ ನಗರಸಭಾಧ್ಯಕ್ಷರಿಗೆ ತಿಳಿಸಿದ್ದಾರೆ. ಈ ತಿಳಿವಳಿಕೆಯನ್ನು ನಗರ ಸಭೆ ಚರ್ಚೆಗೆ ತೆಗೆದುಕೊಳ್ಳಲಿದೆಯೆಂದು ತಿಳಿಯುತ್ತದೆ.

ಭಾರತದಲ್ಲಿಯ ಫ್ರೆಂಚ್ ಪ್ರದೇಶಗಳ ವಿಷಯದಲ್ಲಿ ಫ್ರೆಂಚ್ ಸರಕಾರಕ್ಕೂ ಅಂತಾರಾಷ್ಟ್ರೀಯ ನ್ಯಾಯಾಲಯದ ಉಪಾಧ್ಯಕ್ಷರಾದ ಡಾ. ಜೋಸ್ ಗ್ವಿರೀರೋ ಅವರಿಗೂ ನಡುವೆ ನಡೆಯುತ್ತಿರುವ ಸಂಧಾನದಲ್ಲಿ ಸಂ. ರಾ. ಸಂಘವು ಯಾವ ಭಾಗವನ್ನೂ ವಹಿಸುವ ನಿರೀಕ್ಷೆಯಿಲ್ಲ.

ಪ್ಯಾರಿಸ್ಸಿನಲ್ಲಿ ಕೂಡಿದ ಚತುರಾಷ್ಟ್ರ ಮುಖ್ಯಮಂತ್ರಿ ಸಮ್ಮೇಳನದಲ್ಲಿ ೧೦ ದಿನಗಳ ಅಯಶಸ್ವಿ ಸಭೆಗಳ ಬಳಿಕ ಒಂದುಗುಪ್ತಅಧಿವೇಶನ ನಡೆಸಿ ಬರ್ಲಿನ್ನಿನಲ್ಲಿ ಒಂದೇ ಆಡಳಿತೆ ಇರಬೇಕೆಂಬುದನ್ನು ಎಲ್ಲ ಮಂತ್ರಿಗಳೂ ಒಪ್ಪಿಕೊಂಡಿರುವ ಸಂಗತಿ ಹೊರಬಿದ್ದಿದೆ.

ಸಿಡ್ನಿಯಲ್ಲಿ ರಾತ್ರಿ ಹೊತ್ತು ...
ವೇಗದ ಭಯಂಕರ ಸ್ಫೋಟದ ...
ಬೀಸಿ ಮನೆಗಳ ಮಾಳಿಗೆಗಳನ್ನು ...
ಕೊಂಡುಹೋಗಿರುವುದಲ್ಲದೆ, ವಿದ್ಯುತ್ ...
ಗಳನ್ನು ಕಿತ್ತುಹಾಕಿದೆ. ನ್ಯೂ ಸೌತ್ ...
ತಗ್ಗಿನ ಪ್ರದೇಶಗಳಲ್ಲಿ ನೀರು ಹೆಚ್ಚುತ್ತಿದೆ.

ಹಾಂಕಾಂಗಿನ ಸಂರಕ್ಷಣೆಯು ...
ಅಧಿಕಾರಿಗಳೊಡನೆ ಮಾತುಕತೆ ನಡೆಸಲು ...
ಬರಲಿರುವ ಬ್ರಿಟನ್ನಿನ ಸಂರಕ್ಷಣ ಮಂತ್ರಿ ...
ಶ್ಯಾಂಡರರ ಸ್ವಾಗತಕ್ಕಾಗಿ ನಗರದಲ್ಲಿ ...
ನಡೆದಿದೆ. ಹಾಂಕಾಂಗಿನ ಭವಿತವ್ಯದ ...
ದಲ್ಲಿ ನಿರಾಶರಾಗಿದ್ದ ಬ್ರಿಟಿಶರು ಮತ್ತು ...
ರಲ್ಲಿ ಇವರ ಆಗಮನದಿಂದ ಆತೆಯು ...
ಗಿದೆ. ನಗರದಲ್ಲೀಗ ಶಾಂತಿಯುದ್ದರೂ ...
ಸೈನ್ಯ ಬಾರದಿದ್ದಲ್ಲಿ ಗಲಭೆಯುಂಟಾಗ...
ದೆಂದು ಮಿಲಿಟರಿ ಅಧಿಕಾರಿಗಳ ಅಭಿ...
ವಿದೆ.

ಕಮ್ಯುನಿಸ್ಟರೀಗ ಉತ್ತರ ಚೀನದ ...
ಸಿಂಗಟಾವ್ ಬಂದರನ್ನು ವಶಪಡಿಸಿಕೊಂ...
ರಿಂದ ಮಂಚೂರಿಯದಿಂದ ಪುಕೇನಗ...
ಗಿನ ಕರಾವಳಿಯೆಲ್ಲ ಅವರ ವಶದಲ್ಲಿ ...
ತಾಗಿದೆ. ಸಿಂಗಟಾವಿನಲ್ಲಿ ಗಡಿಬಿಡಿಯು...
ಉಂಟಾಗಿಲ್ಲ. ಎಲ್ಲ ವ್ಯವಹಾರವೂ ...
ನಂತೆಯೇ ಸಾಗಿದೆ.

ಶಾಂಘಾಯಿಯಲ್ಲಿ ಸದ್ಯ ಆರ್ಥಿ...
ಸ್ಥಿತಿ ಹದಗೆಟ್ಟಿದೆ. ಬಂಗಾರ, ಬೆಳ್ಳಿ ...
ಅಮೇರಿಕನ್ ಡಾಲರುಗಳ ಧಾರ...
ನೂರಕ್ಕೆ ೩೦ ರಷ್ಟು ಹೆಚ್ಚಾಗಿವೆ. ಇದರ ...
ವಿನ್ನೂ ತಿಳಿದಿಲ್ಲ. ಈ ವರೆಗೆ ನಗರದ ...
ಬೇರೆ ಭಾಗಗಳಲ್ಲಿ ಒಟ್ಟು ೨೦೦ ಶವಗ...
ಹೊರದೆಗೆಯಲಾಗಿದೆ. ಕುಮಿಂಟಾಂಗಿ...
ಹಿಂಜರಿದು ಹೋಗುವಾಗ ಅನೇಕ...
ಕೊಂದು ಹೋದುದೇ ಇದಕ್ಕೆ ಕಾರಣ...
ತಿಳಿದಿದೆ. ಅವರಲ್ಲಿ ವಿದ್ಯಾರ್ಥಿಗಳು, ಶಿಕ್ಷ...
ಪೋಲೀಸರು, ಬ್ಯಾಂಕರರು ಮೊದಲ...
ರಿದ್ದಾರೆ.

ಜಗತ್ತಿನಲ್ಲಿಯ ನಾಗರಿಕ ಆಡ...
ಕ್ರಮವನ್ನು ಅಭ್ಯಸಿಸುವುದಕ್ಕಾಗಿ ಸಂ...
ತ್ತಿರುವ ಮುಂಬಯಿಯ ಮೇಯರರಾದ ...
ಎಸ್. ಕೆ. ಪಾಟೀಲರು ಅಮೇರಿಕೆಯ ...
ಭಾಗದಲ್ಲಿ ಸಂಚರಿಸಿ ನ್ಯೂಯಾರ್ಕಿಗೆ ಬಂ...
ಅವರು ಅಧ್ಯಕ್ಷ ಟ್ರೂಮನ್ನರನ್ನು ಕಾ...
ವಾಶಿಂಗ್‌ಟನ್ನಿಗೆ ತೆರಳಲಿದ್ದಾರೆ. ...
ಕೊಳ್ಳದ ಅಧಿಕಾರಿಗಳನ್ನೂ ಅವರು ...
ದ್ದಾರೆ.

ಬ್ರಿಟನ್ನಿನಲ್ಲಿ ಮುಂದಿನ ವರ್ಷ ...
ಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ...
ಲಿಸ್ಟರಿಗೆ ವಿಜಯವನ್ನು ಸಂಪಾದಿಸಿಕೊ...
ದಕ್ಕಾಗಿ ಯೋಜನೆಯೊಂದನ್ನು ಸಿದ್ಧಪಡಿ...
ಬ್ಲ್ಯಾಕ್‌ಪೂಲಿನಲ್ಲಿ "ಬ್ರಿಟಿಶ್ ಕೂ...
ಪಕ್ಷದ ಅತಿದೊಡ್ಡ ವಾರ್ಷಿಕ ಪರಿಷತ್ತು ...
ಲಿದೆ. ಈ ಪರಿಷತ್ತಿಗೆ ಮುಖ್ಯಮಂತ್ರಿ ...
ಮತ್ತು ಅವರ ಮಂತ್ರಿಗಳು ತೆರಳಿದ್ದಾರೆ...

ಬ್ರಹ್ಮೀ ಸೈನಿಕರು ಪಾಯಪೋನ್...
ಯ ಇರಾವತೀ ಪ್ರದೇಶದಲ್ಲಿ ಬಂಡು...
ಗಾಡಿಗಳ ಮೇಲೆ ನಸುಕಿನಲ್ಲಿ ದಾಳಿಮಾ...
೨೧ ಕಾರೆನ್ನರನ್ನು ಕೊಂದಿರುವರಲ್ಲದೆ ...
ರನ್ನು ಗಾಯಗೊಳಿಸಿರುವರು, ಇಬ್ಬ...
೫ ಜನ ಸತ್ತಿದ್ದು, ೫ ಜನರು ಗಾಯ...
ದ್ದಾರೆ.

ಬಟೇವಿಯದಲ್ಲಿ ಡಚ್ ಮತ್ತು ...
ರಾಜ್ಯದ ಪ್ರತಿನಿಧಿಗಳ ನಡುವೆ ಅನೌಪ...
ಮಾತುಕತೆಗಳು ಸ್ನೇಹಮಯ ವಾತಾ...
ದಲ್ಲಿ ಸಾಗಿವೆ ಎಂದು ಸಂ. ರಾ. ...
ಸಮಿತಿ ವರದಿ ಮಾಡಿದೆ.

ಗ್ರೀಸಿನ ಆಂತರಿಕ ಯುದ್ಧವನ್ನು ...
ಸಲು ಸೋವಿಯಟ್ ಮಾಡಿದ ಸೂಚನೆ...
ಖಾಸಗಿಯಿಂದ ಚರ್ಚಿಸಲು ಬ್ರಿಟಿಶ್, ...
ಮತ್ತು ಅಮೇರಿಕನ್ ಪ್ರತಿನಿಧಿಗಳು ಪ...
ಸಿದ್ದಾರೆ. ಗ್ರೀಸಿನ ಹಿಂದಿನ ವಿದೇಶ ...
ಶ್ರೀ ಸೊಫೊನೋ ಪೌಲಿಸರು ...
ರೊಡನೆ ಸಂಧಾನ ಮಾಡಲು ಸೂಚಿಸಿ...

ಆರೇಂಜ್ ಫ್ರೀ ಸ್ಟೇಟಿನಲ್ಲಿ ...
ಲ್ಸಿನ ಆಗ್ನೇಯದಲ್ಲಿರುವ ಎರ್ಘ...
ಜಗತ್ತಿನಲ್ಲಿಯೇ ಅತಿದೊಡ್ಡದಾದ ಚಿನ್ನ...
ಯನ್ನು ತೆರೆಯಬಹುದೆಂದು ಕಂಡುಬ...
ಅದರಿಂದ ಆರೇಂಜ್ ಫ್ರೀಸ್ಟೇಟು ...
ಅತಿ ಶ್ರೀಮಂತ ಸ್ವರ್ಣರಾಜ್ಯವೆನಿಸಬ...

ಪರಂಗ

ನಾಟ್ಯವೂ ದೃಷ್ಟಿದೋಷವೂ

೨೧ ರ " ಕರ್ಮವೀರ"ದ ರಂಗಪರಂಗ ...ನು ಬರೆದ "ಪುರುಷರ ಸ್ತ್ರೀವೇಷ" ಲೇಖನದ ವಿರುದ್ಧವಾಗಿ ಶ್ರೀ ...ಸ ನರಗುಂದಕರ ಎಂಬವರು ಪ್ರತಿ ...ಡಿರುವುದು ಈ ಸಂಚಿಕೆಯ 'ವಿಚಾರ ...'ದಲ್ಲಿ ಪ್ರಕಟವಾಗಿದೆ. ಆ ಪ್ರತಿವಾದದಲ್ಲಿ ...ಸಿಯು ನಟನಲ್ಲ ಮತ್ತು ಕುಶಲತೆ ...ಲ್ಲ ಎಂಬೆರಡು ಸಿದ್ಧಾಂತಗಳನ್ನು ಮೊದಲು ಉಲ್ಲೇಖಿಸಿದ್ದಾರೆ. ಅವು ...ವರೆಗೆ ನಿಜ ಎಂಬುದನ್ನು ನೋಡೋಣ. ...ವಸ್ಥಾನುಕೃತಿರ್ನಾಟ್ಯಂ" ಎಂಬ ...ಲಕ್ಷಣದ ಪ್ರಕಾರ ಲೋಕಾನುಕರಣವೇ ...ನೆನಿಸುತ್ತದೆ. ಅಲಂಕಾರಿಕರ ಗುರು ...ಹಮುನ ಅಭಿಪ್ರಾಯದಂತೆ ಸಂಕಲನ ...ರೂಪವಾದಕಲೆಗೆ ಅತಿಶಯವೇ ...ಈ ಅತಿಶಯವನ್ನು ಸಾಧಿಸುವ ...ತೆಗೆ ಕಲೆಗಾರಿಕೆಯೆಂದು ಹೇಳುವ ...ವಾಯವುಂಟು. ಲೌಕಿಕರ ನಡೆನುಡಿ ಸುಕುಮಾರಮತಿಗಳು ನಂಬಲರ್ಹ ...ಷ್ಟು ಅತಿಶಯವನ್ನು ಬೆರಸುವುದೇ ...ಗುಟ್ಟೆಂಬುದನ್ನು ಕಲೆಯ ಮೇಲೆ ...ಟಿಲನು ಬರೆದುದನ್ನು ಓದಿದವರಿಗೆ ...ರಿಕೆಯಾಗಬಹುದು. "ಕಲ್" ಎಂಬು ...ಸಂಕಲನಮಾಡು, ಸಂಗ್ರಹಿಸು ಎಂಬ ...ಇದೆ. "ಕಲೆಯೆಂದರೆ ಕುಶಲತೆ ...ವಂಚನೆಯೆಂದೂ ಸಂಸ್ಕೃತಶಬ್ದ ಹೇಳುತ್ತದೆ. ಇದೇ ಅರ್ಥದಲ್ಲೇ ...ಕ ಮತ್ತು ಕೃತಕ ಎಂಬ ಅರ್ಥಗಳು ...ಕಲೆಗೂ ಕ್ರಮವಾಗಿ ಅನ್ವಿತ ...ತ್ತು. Art lies in Concealing art ವೆಂಬುದನ್ನು ತೋರಗೊಡದಿರುವುದೇ ಕುಶಲತೆ. ರಂಗದಲ್ಲಿ ಬರುವ ಪಾತ್ರವು ...ರಾಮನೇ ಅಲ್ಲದಿದ್ದರೂ ರಾಮನೇ ...ಸುವಂತೆ ನಟಿಸುವುದೇ ಅಭಿನಯ ...ಮರ್ಮ ಎಂಬುದು ಅನುಭವವೇದ್ಯ ... ಆದುದರಿಂದ ಕುಶಲತೆಯಿಂದ ಕಲೆ ...

ಪಾತ್ರ ಮತ್ತು ಅಭಿನಯ

ಬಹುರೂಪಿತ್ವ"ವು ನಟನೆಯಲ್ಲದಿರ ...ದು. ಪುರುಷನು ಸ್ತ್ರೀವೇಷ ಧರಿಸಿ ನಿಂತ ...ಕ್ಕೆ ಅವನ ಅಭಿನಯ ಸ್ತ್ರೀಸಹಜ ಎಂದು ಲೇಖನದಲ್ಲಿ ಹೇಳಿಲ್ಲ. ಅವನು ಸ್ತ್ರೀ ...ತೆ ನಟಿಸಿದಾಗ ಅದು ಲಕ್ಷಣಬದ್ಧ ನಟನೆ ...ಗುತ್ತದೆ. ನಟನೆಯೆಂದರೂ ವಂಚನೆಯೇ, ...ರಿಕೆಯೇ. ಸೀತೆಯ ಪಾತ್ರ ವಹಿಸಿದ ...ಸು ಎಂದೆಂದೂ ಸೀತೆಯೇ ಆಗಲಾ... ಸೀತೆಯ ಉದಾತ್ತ ಗುಣಗಳು ಅವಳಲ್ಲಿ ...ರವು; ಸೀತೆಯ ಮೊಗದ ಕಳೆ ಅವಳ ...ದಲ್ಲಿ ಸಾಕ್ಷಾತ್ತಾಗಿ ಮೂಡಲಾರದು. ...ಸೀ ಹೆಂಗಸಿನ ಪಾತ್ರ ವಹಿಸಿದರೂ ...ಮಾಡುವುದು ನಟನೆಯೇ; ಅವಳ ...ನ, ಮನೋಧರ್ಮ, ಹೃದ್ವೃತ್ತಿಗಳ ಪ್ರವೃತ್ತಿ, ರೂಪ, ಲಕ್ಷಣಗಳು ವಾಸ್ತ...ವಾಗಿ ಸೀತೆಯವನ್ನು ಹೋಲುತ್ತಿರು... ದುಷ್ಕಲ್ಪನೀಯ. ಮಹಾಕವಿಗಳಂತೆ ...ನಟರು ಕೂಡ Myriad-minded–ಬಹುಮುಖ ಪ್ರತಿಭಾಸಂಪನ್ನರಿರುತ್ತಾರೆ. ...ಕವಿ ಶಬ್ದಾರ್ಥಗಳಿಂದ ಸ್ತ್ರೀಪಾತ್ರ...ವನ್ನು ವರ್ಣಿಸಿ ಚಿತ್ರಿಸಿದರೆ ಮಹಾನಟರು ...ಕ, ವಾಚಿಕ ಮತ್ತು ಆಹಾರ್ಯರೂಪದ ...ನಯದ ಮೂಲಕ ಪ್ರತಿಬಿಂಬಿಸಬಲ್ಲರು. ...ನಟನೊಬ್ಬನಿಗೆ ಸ್ತ್ರೀಪಾತ್ರವನ್ನು ವಹಿ... ಎಂದೂ ಬರಲಾರದೆನ್ನುವುದಾದರೆ ...ಕವಿಗಳು ಅಥವಾ ಮಹಾನಾಟಕ ...ರು ಎಂದೂ ಸ್ತ್ರೀಪಾತ್ರದ ಹಾವ, ಭಾವ, ...ಸ ವಿಭ್ರಮ, ಕೋಪ, ತಾಪ, ಕರುಣೆ ...ದಿಗಳನ್ನು ಸ್ತ್ರೀಸಹಜವಾಗಿ ಚಿತ್ರಿಸ...ರರು, ಒಂದು ಚಿತ್ರಿಸಿದ್ದರೆ ಅವು ಸ್ತ್ರೀಸಹಜ ಎಂದು ಹೇಳಬೇಕಾಗುತ್ತದೆ. ಇದು ಜಗ...ದ ಸ್ತ್ರೀಪುರುಷ ರಸಿಕರ ಅನುಭವಕ್ಕೆ ...ದ್ಧವಾದುದು. ಆದುದರಿಂದ ಶ್ರೀ ನರ...ಗುಂದಕರರು ಅಸಾಧ್ಯವೆಂದು ಶಪಥಮಾಡಿ ...ದ್ದೆಲ್ಲ ಅಸಾಧ್ಯ ಎಂದು ನಂಬಿದರೆ ನರನ ...ಶಕ್ತಿಗೆ ಅಪಮಾನ ಮಾಡಿದಂತೆ, ಕುಂದು... ...ದಂತೆ ಎನ್ನಬೇಕಾಗುತ್ತದೆ.

ರಸಾಸ್ವಾದದ ಸೂತ್ರ

ಬಾಲಗಂಧರ್ವನ "ಮೀರಾಬಾಯಿ"ಗಿಂತ ...ಬ್ಬುಲಕ್ಷ್ಮಿಯ "ಮೀರಾಬಾಯಿ" ಚೆನ್ನಾಗಿರಬಹುದು. ಆದರಿಂದ ತಿಳಿದು ಬರುವುದೆಂದರೆ, ನಟನೆಯಲ್ಲಿ ಬಾಲಗಂಧರ್ವನಿಗಿಂತ ಆಗ ಸುಬ್ಬಲಕ್ಷ್ಮಿ ಹೆಚ್ಚಿನ ಕುಶಲತೆ ತೋರಿರಬೇಕು; ಅಥವಾ ಶ್ರೀ ನರಗುಂದಕರರಿಗೆ ೨ ನೆಯ "ಮೀರಾಬಾಯಿ" ಸಾಕ್ಷಾತ್ ಸ್ತ್ರೀ ಎಂದು ಪೂರ್ವಗ್ರಹ ಇದ್ದುದರಿಂದ ಅದು ಚೆನ್ನಾಗಿ ಕಂಡಿರಬೇಕು. ಇಷ್ಟೆ. ಕಲೆಯೆಂದರೆ ಮಾಯೆ, ಅಭಾಸ, ಭ್ರಮೆ. ಪ್ರೇಕ್ಷಕರು ಸುಕುಮಾರಮತಿಗಳಿರುವುದರಿಂದ, ಮಕ್ಕಳು ಚಿತ್ರದ ಆನೆಯನ್ನು ನೋಡಿ ನಿಜವೆಂದು ತಮ್ಮ ಕಲ್ಪನಾಶಕ್ತಿಯ ಮೂಲಕ ನಂಬಿ ನಡೆದುಕೊಳ್ಳುವಂತೆ ರಂಗದ ಮೇಲಿನ ರಾಮಾದಿ ಪಾತ್ರಗಳಲ್ಲಿ ನಿಜತ್ವದ ಆರೋಪವನ್ನು ತಾತ್ಕಾಲಿಕವಾಗಿ ಮಾಡುವುದು ಸರ್ವಾನುಭವಸಿದ್ಧವಾದುದು. ಹಾಗಲ್ಲದೆ ರಂಗದ ಮೇಲೆ ಬರುವ ಪಾತ್ರಗಳು ಸಾಕ್ಷಾತ್ತಾಗಿ ನಿರೂಪಿತ ವ್ಯಕ್ತಿಗಳಲ್ಲ; ಅವು ಕೃತಕ, ಸುಳ್ಳು ಎಂಬ ಭಾವ ಪ್ರೇಕ್ಷಕರ ಮನವನ್ನು ಪ್ರತಿಕ್ಷಣದಲ್ಲೂ ಕೆಣಕುತ್ತಿದ್ದರೆ ಅವರಿಗೆ ರಸಾಸ್ವಾದ ಮಾಡಲು ಸಾಧ್ಯವಾಗದು. ರಸಾಸ್ವಾದದ ಸೂತ್ರವಾದರೂ "ಪರಸ್ಯನ ಪರಸ್ಯೇತಿ ಮಮೇತಿ ನಮಮೇತಿಚ" ಎಂದರೆ ಅಭಿನೀತ ಭಾವಗಳು ತನ್ನವು ಪರರವು ಎಂಬ ಭೇದ ಮರೆತಾಗಲೇ ಪ್ರೇಕ್ಷಕರಿಗೆ ರಸಾನುಭೂತಿಯಾಗುತ್ತದೆ ಎಂದು ಹೇಳಿದೆ. ಅದಕ್ಕೆ ಮನಃಶಾಸ್ತ್ರದಲ್ಲಿ Sympathetic contagion– ಸಹಾನುಭೂತಿ, ಸಹೃದಯಭಾವ ಎಂದು ಹೇಳಿದೆ. ರಾಮಾದಿ ಪಾತ್ರಗಳಲ್ಲಿ ಈ ಸಹಾನುಭೂತಿ ರಸಿಕರಿಗೆ ಹುಟ್ಟಬೇಕಾದರೆ, ವಾಸ್ತವ ಪ್ರಪಂಚದ ಮಾತಿನಲ್ಲಿ "ತಿಳಿದೂ ತಿಳಿದೂ" ಎಂದಿರುವುದನ್ನು ಕಲಾ ಪ್ರಪಂಚದಲ್ಲಿ "ತಿಳಿದೂ ತಿಳಿಯದಂತೆ" ಎಂದು ಮಾಡಿಕೊಂಡೇ ನಾಟ್ಯದ ಅಲೋಕನ ಮಾಡಬೇಕಾಗುತ್ತದೆ. ಕಲೆಯ ಅಮಲಿಗೂ ಬ್ರಾಂಡಿಯ ಅಮಲಿಗೂ ಬಹಳ ವ್ಯತ್ಯಾಸವಿಲ್ಲ. ಕಲೆಯ ಅಮಲು ಬಹಳವಾದರೆ ರಸಾಸ್ವಾದವಾಗದೆ ರಸವಿಕಾರವುಂಟಾಗುತ್ತದೆ. ಸ್ವಾನಂ ನರಸಿಂಹಾಚಾರ್ಯರು ಸತ್ಯಭಾಮೆಯ ಪಾತ್ರವಹಿಸಿ ಕೃಷ್ಣನ ಪಾತ್ರವಹಿಸಿದವನೊಡನೆ ಪ್ರೇಮಕಲಹವನ್ನು ನಟಿಸುತ್ತಿದ್ದಾಗ ಪ್ರೇಕ್ಷಕರಲ್ಲಿಯ ದಂಪತಿಗಳಿಬ್ಬರು ಆರೆಗತ್ತಲಿದ್ದ ಸನ್ನಿವೇಶದಲ್ಲಿ ಪರಸ್ಪರ ಚುಂಬನವಿನಿಮಯ ಮಾಡಿಕೊಂಡದ್ದು ರಸವಿಕಾರಕ್ಕೊಂದು ಉದಾಹರಣೆ. ಅದೇ ವೇಳೆಗೆ ಬ್ರ್ಯಾಂಡಿಯ ಕುಡಿತ ಮಿತವಿರುವುದನ್ನು ಜಗತ್ತಿನ ಬಹುಸಂಖ್ಯಾರಾಷ್ಟ್ರಗಳು ಅನಾಚಾರವೆನ್ನುವುದಿಲ್ಲ. ಅದು ಅತಿಯಾದಾಗ ಚಿತ್ತವಿಕಾರವುಂಟಾಗಿ ಅನಾಚಾರವೆನಿಸಿಕೊಳ್ಳುತ್ತದೆ. ಮೇಲಿನ ಕಾರಣಗಳಿಂದಲೇ ಬಹಳ ಕಾಲದಿಂದ ಕಲೆ ಪರಾವಲಂಬಿ, ವೈಲಾಸಿಕ, ಶಾಸ್ತ್ರಜ್ಞಾನಗಮ್ಯವಲ್ಲದ ಅಸೂಕ್ಷ್ಮಮತಿಗಳಿಗೆ ಕೃತ್ಯಾಕೃತ್ಯವನ್ನು ಬೋಧಿಸುವ ಸಾಧನ ಎನಿಸಿಕೊಂಡದ್ದು, ಅಶ್ಲೀಲತೆಯ ಆರೋಪಕ್ಕೆ ಆಗಾಗ ಗುರಿಯಾದದ್ದು.

ನೀತಿಯ ಪ್ರಾಧಾನ್ಯ

ಆದರೆ ಎಲ್ಲ ಕಾಲದಲ್ಲಿಯೂ ಎಲ್ಲ ಸನ್ನಿವೇಶದಲ್ಲೂ ಎಲ್ಲ ಸಮಾಜದಲ್ಲೂ ಕಲೆ ಕೀಳೆಂದೂ ಸ್ತ್ರೀ ಅದರಲ್ಲಿ ಪ್ರವೇಶಿಸಬಾರದೆಂದೂ ನನ್ನ ಹಿಂದಿನ ಲೇಖನದಲ್ಲಿ ಎಲ್ಲಿಯೂ ಹೇಳಿಲ್ಲ. ಆ ಆರೋಪ ನಿರಾಧಾರವಾದುದು. ಆ ಲೇಖನ ಸದ್ಯದ ಪರಿಸ್ಥಿತಿಗೆ ಸಂಬಂಧಿಸಿದ್ದು. ಸದ್ಯ: ಬಹುಸಂಖ್ಯ ಸಾಮಾನ್ಯ ಸಿನೆಮತಾರೆಯರ ನಾಗರಿಕತೆ, ಸಂಸ್ಕೃತಿ, ಸಭ್ಯತೆ ಮತ್ತು ಕಲೆಗಾರಿಕೆ ಸುಶಿಕ್ಷಿತವೂ ಸುನೀತವೂ ಆದ ಶಿಷ್ಟ, ಸಭ್ಯ ಸಮಾಜಕ್ಕೆ ಯೋಗ್ಯ, ರಸಾವಹ ಎನಿಸುವಂತಿಲ್ಲ. ಅವರ ವೈಯಕ್ತಿಕ ಜೀವನದ ನೀತಿ ನಡತೆಗಳನ್ನು ಬಿಟ್ಟರೂ ಅಭಿನಯಾದಿಕಲೆಗಳ ಮಟ್ಟವಾದರೂ ಉನ್ನತವಾಗಿಲ್ಲವೆಂಬುದನ್ನು ನ್ಯೂ ಥಿಯೇಟರ್ಸಿನ ಕೆಲ ಉತ್ತಮ ಅಭಿನೇತ್ರಿಗಳ ಅಭಿನಯದೊಡನೆ ಹೋಲಿಸಿದರೆ ಗೊತ್ತಾಗದಿರದು. ಶ್ರೀ ನರಗುಂದಕರರಿಗೆ ಕಲೆ ಭ್ರಮೆಯಲ್ಲವೆನಿಸಿತು, ಆದರೆ ನೀತಿ ಭ್ರಮೆಯೆನಿಸಿತು. ಈ ವಿಪರೀತಕ್ಕೆ ಏನು ಹೇಳೋಣ? ಇಂಥವರು ಪರೋಪದೇಶಪಂಡಿತರಲ್ಲದೆ, ಅನುಭವದಲ್ಲಿ ತಾವು ಸಾರುವ ತತ್ವವನ್ನು ಆಚರಿಸುವ ಧೈರ್ಯ ಇವರಿಗಿಲ್ಲ. ನೀತಿಯೆಂಬುದು ಭ್ರಮೆಯೆಂದು ನಾಳೆಯಿಂದ ಇವರು ನಾಗರಿಕವೆನಿಸಿದ ನೀತಿ ನಡತೆಗಳನ್ನು ಬಿಟ್ಟು ಆಡ್ಡಾಡಬಲ್ಲರೇನು? ಈ ಹುಚ್ಚು ಮಾತಿಗೆ ಏನೆನ್ನಬೇಕು! ಇಂಥವರನ್ನೇ Sentimental ಭಾವಾವೇಶಪರರೆಂದು ಶಾಸ್ತ್ರಜ್ಞರೆನ್ನುವುದು. ಹಿಂದೆ ಎಂದರೆ ಪ್ರತಿವಾದಿಗಳೆನ್ನುವಂತೆ ಕೆಲ ಕಾಲದ ಹಿಂದೆ ಎಂದು ನನ್ನ ಲೇಖನದಲ್ಲಿ ಹೇಳಿದ್ದಲ್ಲದೆ ಹಿಂದುನಾಗರಿಕತೆಯ ಆರಂಭದಿಂದ ಎಂದಲ್ಲ. ಆ ಅರ್ಥದಲ್ಲೇ ಪುರುಷರು ಸ್ತ್ರೀಪಾತ್ರಗಳನ್ನು ವಹಿಸುತ್ತಿದ್ದುದನ್ನು ಉಲ್ಲೇಖಿಸಲಾಗಿದೆ. ಅದೂ ಸಾರ್ವಪ್ರದೇಶಿಕವೆಂದು ಹೇಳಿಲ್ಲ; ನಮ್ಮಲ್ಲಿ ನಾನು ಕಂಡ ಸಾಮಾನ್ಯ ಸಾಮಾಜಿಕ ವಾತಾವರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ್ದು. ಈ ವಿವರಣೆಯಿಂದ ಪ್ರತಿವಾದಿಗಳ ಸಂಶಯ ಪರಿಚ್ಛೇದಿಸಲ್ಪಡಬಹುದೆಂದು ನಂಬುತ್ತೇನೆ.

ಸ್ತ್ರೀ ಪುರುಷರ ಅನುಭವ ಸಾಮ್ಯ

ಮುಂದೆ, ಸ್ತ್ರೀಪುರುಷರನ್ನು ಮಾವಿಗೂ ಪೇರಲಿಗೂ ಹೋಲಿಸಿದ್ದು ಅಸಂಬದ್ಧ. ಆ ಮರಗಳ ಕುಲವೇ ಬೇರೆ. ವಾತ್ಸ್ಯಾಯನನ ಕಾಮಶಾಸ್ತ್ರವನ್ನು ಲೇಖಕರು ಓದಿದ್ದರೆ ಫ್ರಾಯ್ಡರ ತತ್ವವನ್ನು ಅಪ್ರಾಸಂಗಿಕವಾಗಿ ತಂದು ಅಸಂಬದ್ಧ ತೀರ್ಮಾನವನ್ನು ಮಾಡುವ ಗೋಜಿಗೆ ಹೋಗುತ್ತಿರಲಿಲ್ಲ. ಪಂಚೇಂದ್ರಿಯಗಳಿಗಾಗುವ ಸುಖದುಃಖ ಸಂವೇದನೆಯಲ್ಲಿ ಸ್ತ್ರೀಪುರುಷರಲ್ಲಿ ಸಾಮಾನ್ಯವಾಗಿ ಭೇದವಿಲ್ಲ ಎಂಬುದು ಅನುಭವಸಿದ್ಧವಾದುದು; ಅವುಗಳ ರೂಪ ಅಥವಾ ವಾಹಕಗಳು ಮತ್ತು ಉತ್ತೇಜಕಗಳು ಕೆಲವುಟ್ಟಿಗೆ ಬೇರಾಗಿರಬಹುದು. ಆದರೆ ಅರ್ಥ, ಸಾರ ಒಂದೇ ಸಮವಾದವು. ಕಾಮಕ್ರೋಧಾದಿ, ರತಿಹಾಸಾದಿ ಭಾವಗಳು ಸ್ತ್ರೀ ಪುರುಷರಲ್ಲಿ ಮನುಷ್ಯಸಹಜವಾದ ಮಾದರಿಯಲ್ಲಿರುವುವಲ್ಲದೆ ವಿಜಾತೀಯವಾಗಿ ಅಥವಾ ವಿಶಿಷ್ಟಲಿಂಗಾವಚ್ಛಿನ್ನವಾಗಿ ಇರುವುದಿಲ್ಲ. ಅಪ್ರಾಸಂಗಿಕವಾಗಿ ಲೇಖಕರು ಹೇಳುವಂತೆ ಕಾಮಪ್ರವೃತ್ತಿಯನ್ನು ತಡೆಯುವುದು ಹಾನಿಕರ ಎಂದು ಒಪ್ಪಿಕೊಂಡರೆ, ಮನುಷ್ಯರು ಪಶುಗಳಂತೆ ಸ್ವಚ್ಛಂದವಾಗಿ ವರ್ತಿಸಬೇಕಾದೀತು. ಅವರು ಹೇಳಿದ್ದು ಪಾಕ್ಷಿಕ ಸತ್ಯ. ದುರ್ಬಲ ಮನಸ್ಕರ ಕಾಮಪ್ರವೃತ್ತಿಯನ್ನು ಬಲಾತ್ಕಾರವಾಗಿ ನಿಃಶೇಷವಾಗಿ ಹತ್ತಿಕ್ಕಲು ಪ್ರಯತ್ನಿಸಿದರೆ ಅನಾಹುತ ಉಂಟಾಗಬಹುದು, ಅಷ್ಟೆ. ಪಾಶ್ಚಾತ್ಯರ ಒಂದೆರಡು ಬರಹಗಳನ್ನು ಓದಿ ಕುಕಲ್ಪನೆ ಮಾಡಿಕೊಳ್ಳುವ ಪ್ರವೃತ್ತಿ ನಮ್ಮ ಇಂದಿನ ಕೆಲ ತರುಣರಲ್ಲಿ ಉಂಟಾದುದಕ್ಕೆ ಈ ಪ್ರತಿವಾದಿಗಳು ಒಂದು ನಿದರ್ಶನವಾಗಿ ನಿಂತಿದ್ದಾರೆ. ನಾಗರಿಕತೆಯ ಇತಿಹಾಸವನ್ನು ಮತ್ತು ಜಗತ್ತಿನ ಸಾಹಿತ್ಯವನ್ನು ಕೆಲವುಟ್ಟಿಗಾದರೂ ಪರಿಶೀಲಿಸಿದರೆ ಸ್ತ್ರೀ ಪುರುಷನನ್ನು ರಂಜಿಸಲು ವೇಷಭೂಷಣಾದಿಗಳಿಂದ ಪ್ರಯತ್ನಿಸಿದ್ದು ಹೆಚ್ಚೆಂಬುದು ಶ್ರೀ ನರಗುಂದಕರರಿಗೆ ತಿಳಿದು ಬರದಿರದು. ಅಲ್ಲದೆ ಇಂದಿನ ನಿತ್ಯಜೀವನದಲ್ಲಾದರೂ ನಗರಸ್ಥ ತರುಣ ತರುಣಿಯರ ರೂಢಿ ಮತ್ತು ಸಂಪ್ರದಾಯಗಳನ್ನು ವ್ಯಕ್ತಿಶಃ ಅವಲೋಕಿಸಿದರೆ ಸಾಮಾನ್ಯವಾಗಿ ಪುರುಷರಿಗಿಂತ ಸ್ತ್ರೀಯರ ಅಲಂಕರಣ ಅಧಿಕ ಬೆಲೆಯದೂ ಅಧಿಕ ಪರಿಮಾಣದ್ದೂ ಎದ್ದು ಕಾಣುವಂಥದೂ ಆಗಿದೆ ಎಂಬುದು ಕಂಡು ಬರದಿರದು. ದೇಶಾಟನ ಮಾಡದೆ, ಇದಿರಿದ್ದುದನ್ನು ಕಣ್ಣುಬಿಟ್ಟು ನೋಡದೆ, ಗ್ರಂಥಾವಲೋಕನ ಮಾಡದೆ ಗಳಹುವ ಲೇಖಕರ ಇಂಥ ಮಾತಿಗೆ ಪ್ರತ್ಯುತ್ತರವನ್ನು ಕೊಡುವುದೇ ಅನವಶ್ಯಕ. ಇನ್ನು ಸ್ವತಃ ಲೇಖಕರೇ ಸ್ತ್ರೈಣರಂತೆ ಅಲಂಕಾರ ಕರಂಡಕವಾಗಿದ್ದರೆ ಅಂಥವರನ್ನು ಅಪವಾದದ ಪಟ್ಟಿಯಲ್ಲಿ ಸೇರಿಸಬೇಕಾಗುತ್ತದೆ.

ಸ್ತ್ರೀವಾದಿಗಳ ಅನುಭವರಾಹಿತ್ಯ

ಅಡಿಗೆಯಮನೆಯ ಕತ್ತಲುಕೋಣೆಗೆ ಹೆಂಗಸನ್ನೆಳೆಯಲಾಗಿತ್ತೆಂಬ ಲೇಖಕರಮಾತಾದರೂ ಇಂದಿನ ಸುಧಾರಕಂಮನ್ಯರ ಪರೋಪದೇಶಪಾಂಡಿತ್ಯದ ಗಿಳಿಪಾಠವೇ ಆಗಿದೆ. ಸ್ವತಃ ತಮ್ಮ ಹೆಂಡತಿ ಅಡಿಗೆ ಮಾಡಿ ಹಾಕಲೊಲ್ಲೆನೆಂದಾಗ ಇವರ ಕೈಯಲ್ಲಿ ಆಳು ಕಾಳುಗಳನ್ನು ಇಟ್ಟುಕೊಳ್ಳಲು ಹಣವಿಲ್ಲದಾದಾಗ ಇವರಸಿದ್ಧಾಂತದ ನ್ಯಾಯ್ಯತೆಯು, ಸತ್ಯತೆಯ ಅನುಭವ ಇವರಿಗಾಗದಿರದು. ರೂಢಿದಾಸವೆನಿಸಿದ ಲೋಕ ಕೆಲಕಾಲ ಹೆಂಗಸರಿಗೆ ಕೆಲ ಸಾಮಾಜಿಕ ನಿರ್ಬಂಧಗಳನ್ನು ಹಾಕಿದ್ದು ನಿಜವಿದೆ. ಅದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅಡಿಗೆಯ ಕೆಲಸ ಹೆಂಗಸಿಗೆ ಕಠಿನ ಕಾರಾವಾಸ ಎಂದು ವರ್ಣಿಸುವ ಪ್ರಸ್ತುತ ಲೇಖಕರಂಥ Chivalrous Knights ಸ್ತ್ರೀ ದಾಕ್ಷಿಣ್ಯಸಂಪನ್ನ ಸರದಾರರು ಸ್ವತಃ ಆ ಕೆಲಸವನ್ನು ವಹಿಸಿಕೊಂಡು ಇತರ ಗಂಡಂದಿರಿಗೂ ಹಾಗೆ ಮಾಡಲು ಉಪದೇಶ ಮಾಡುತ್ತ ತಿರುಗುವರೋ ಎಂಬುದನ್ನು ನಾಳೆ

— ಗಣನೆಯ ಪುಟಕ್ಕೆ

ವಿಶೇಷ ಲೇಖ

ಮುಂಬಯಿ ನಗ...

ಮುಂಬಯಿ ಮಹಾನಗರದಲ್ಲೀಗ ಮೂವತ್ತು ಲಕ್ಷಕ್ಕೂ ಮೀರಿದ ಜನರು ವಾಸಿಸುತ್ತಾರೆ. ಹಿಂದುಸ್ತಾನ ವಿಭಜನೆಯಿಂದಾಗಿ ಲಕ್ಷಗಟ್ಟಲೆ ನಿರ್ವಾಸಿತರು (refugees) ಸಿಂಧ ಮತ್ತು ಪಂಜಾಬು ಪ್ರಾಂತಗಳಿಂದ ಇಲ್ಲಿ ಬಂದು ನೆಲೆನಿಂತಿದ್ದಾರೆ. ಮಿತಿ ಮೀರಿದ ಜನಸಮುದಾಯಕ್ಕೆ ಹಾಲು ಎಲ್ಲಿಂದ ಸಿಗಬೇಕು? ನಿಜವಾಗಿಯೂ ಬೇಕಾದ ಪ್ರಮಾಣದಲ್ಲಿ ಇಂದಿಗೂ ಸಿಗುತ್ತಿಲ್ಲ. ಹಾಲಿನ ಬೆಲೆಯೀಗ ಇಮ್ಮಡಿಯಲ್ಲ; ಮುಮ್ಮಡಿ, ನಾಲ್ಮಡಿಯಾಗಿದೆ. ಒಂದು ಸೇರು ಎಮ್ಮೆಯ ಹಾಲಿಗೆ ಒಂದು ರೂಪಾಯಿಯಿಂದ ಒಂದುವರೆ ರೂಪಾಯಿ ವರೆಗೆ ಧಾರಣೆಯಿದೆ. ದನದ ಹಾಲಿಗೆ ಒಂದುವರೆ ರೂ.ಯಿಂದ ಎರಡು ರೂಪಾಯಿಗಳ ವರೆಗೆ ಹಣ ಕೊಟ್ಟು ಕೊಳ್ಳಬೇಕು. ಮುಂಬಯಿಯಲ್ಲಿ ಹಾಲಿಗಿರುವಷ್ಟು ಬೆಲೆಯು ಇಡಿ ಜಗತ್ತಿನಲ್ಲೇ ಇಲ್ಲವಂತೆ! ಅಪರಿಮಿತ ಜನಸಂಖ್ಯೆ ಇರುವ ಈ ಶಹರಕ್ಕೆ ಸಾವಿರಾರು ಸೇರು ಹಾಲು ನಿತ್ಯವೂ ಬೇಕು. ನಗರದ ಹಾಲಿನ ಪೂರೈಕೆಯು ಜನತೆಯ ಬೇಡಿಕೆಯನ್ನು ಮುಟ್ಟುವಂತಿಲ್ಲ. ಎಷ್ಟು ಹಾಲು ಬಂದರೂ ಅದು ಕಣ್ಮರೆಯಾಗುವುದು.

ಎರಡನೆಯ ಮಹಾಯುದ್ಧದ ದೆಸೆಯಿಂದಾಗಿ ಅದೆಷ್ಟೋ ಲಕ್ಷ ಜನರು ಊರೂರುಗಳಿಂದ ನೌಕರಿ, ಕೆಲಸ, ಕಸುಬುಗಳಿಗೆಂದು ಎಲ್ಲ ಭಾಗಗಳಿಂದ ಬಂದು ಮುಂಬಯಿಯನ್ನು ಮುತ್ತಿದರು. ಆ ದಿನಗಳಲ್ಲಿ ಹಾಲಿನ ಕೊರತೆಯು ಉನ್ನತಾವಸ್ಥೆಯನ್ನೇರಿತು. ಕೇಳಿದಷ್ಟು ಬೆಲೆ ಕೊಟ್ಟರೂ ಹಾಲು ಸಿಗುತ್ತಿರಲಿಲ್ಲ. ಕಳ್ಳಪೇಟೆಯ ಮೂಲಕ ಅದೆಲ್ಲ ವಿಶ್ರಾಂತಿಗೃಹಗಳನ್ನು ಸೇರುತ್ತಿತ್ತು. ಆಸ್ಪತ್ರೆಗಳಲ್ಲಿ ವಿವಿಧ ಬೇನೆಗಳಿಂದ ನರಳುವ ರೋಗಿಗಳಿಗೆ, ಗರ್ಭಿಣಿ, ಬಾಣಂತಿಯರಿಗೆ ಕುಡಿಯಲು ಒಂದು ಗುಟುಕು ಹಾಲು ಕೂಡ ಇರದಾಯಿತು. ಹಾಲಿನ ಅಭಾವದಿಂದುಂಟಾದ ಹಲವು ಭಯಂಕರ ರೋಗಗಳಿಗೆ ಬಲಿ ಬಿದ್ದು ಜನರು ತುಂಬ ಗೋಳಿಡುವಂತಾಯಿತು. ನಗರದಲ್ಲಿ ಶಿಶುಮರಣ ಸಂಖ್ಯೆಯೂ ಹೆಚ್ಚಿತು. ಇವೆಲ್ಲವುಗಳ ಕಾರಣವನ್ನು ಕಂಡು ಹಿಡಿದು ಸರಕಾರವು ಹೊಟೇಲುಗಳಲ್ಲಿ ಕಾಫಿ ಚಹಪಾನೀಯಗಳಿಗೆ ಹಾಲು ಉಪಯೋಗಿಸಬಾರದೆಂದು ಕಟ್ಟಾಜ್ಞೆ ಮಾಡಿತು. ಅದರ ಬದಲು ಅಮೇರಿಕ, ಆಸ್ಟ್ರೇಲಿಯ ದೇಶಗಳಿಂದ ದಂಡಾಳುಗಳ (Military) ಉಪಯೋಗಕ್ಕೆಂದು ಆಯಾತ ಮಾಡಿದ ಒಣ ಹಾಲುಪುಡಿ (Dry Milk Powder) ಅಥವಾ ಡಬ್ಬಿಯ ಹಾಲನ್ನೇ (Canned Milk) ಉಪಯೋಗಿಸತಕ್ಕದೆಂದು ನಿರ್ಬಂಧ ಮಾಡಲಾಯಿತು. ಸರಕಾರವೀಗ ಸೀದಾ ಮೂಲಕ ಮಕ್ಕಳು ಮರಿಗಳಿಗೆ, ರೋಗಿಗಳಿಗೆ, ಬಾಣಂತಿಯರಿಗೆ ತಾಜಾ ಹಾಲನ್ನು ಒದಗಿಸುತ್ತದೆ.



ಕ್ಷೀರಾಗಾರದಲ್ಲಿ ಕರು ಮೊಲೆ ಕುಡಿಯು...

ಭಯ್ಯಾಜನರ ಹೊಲೆಗೆಲಸ

ನಗರದಲ್ಲಿ ಹಾಲಿಗೆಂದು ಹದಿನೈದು ಸಾವಿರಕ್ಕೂ ಮಿಕ್ಕಿದ ಜಾನುವಾರುಗಳಿವೆ. ಇವೆಲ್ಲನ್ನು ಪಟ್ಟಣದ ನಡುವೆ ಇನ್ನೂರು ಮುನ್ನೂರರ ಗುಂಪಾಗಿ ಸಾಕುತ್ತಾರೆ. ಮುಂಬಯಿಯ ಈ

ಹೊಸ ಪುಸ್ತಕಗಳು

ಮುಂಬಯಿ ಆಧಿಪತ್ಯದಲ್ಲಿ ಕರ್ನಾಟಕ ಸಂಶೋಧನದ ಮುನ್ನಡೆ

ವಿಮರ್ಶಕರು: ಶ್ರೀ ಎಂ. ಗೋವಿಂದ ಪೈ, ಮಂಜೇಶ್ವರ

ಮುಂಬಯಿ ಅಧಿಪತ್ಯದಲ್ಲಿಯ ಕರ್ನಾಟಕ ಸಂಶೋಧನದ ಪ್ರಗತಿಯು ೧೯೪೧ ರಿಂದ ೧೯೪೬ರ ವರೆಗೇನೂ ಎರಡು ಭಾಗಗಳಿಂದ ಒಡಗೂಡಿರುವ, ಈ ವರದಿಯಿಂದ ತೋರುವ ಮೇರೆಗೆ ವಿದ್ಯಾರತ್ನ ಶ್ರೀ ಪಂಚಮುಖಿಯವರು ನಡೆಸಿದ ಕೆಲಸವಾದರೂ ವಿಸ್ಮಯನೀಯವಾಗಿದೆ, ಶ್ಲಾಘನೀಯವಾಗಿದೆ. ಆ ವರ್ಷಗಳಲ್ಲಿ ವಡಗಾಂವ ಮಾಧವಪುರ, ಇಟ್ಟಗಿ, ಬೆಳ್ವಟ್ಟಿ, (ಕೊಲ್ಹಾಪುರದ) ಬ್ರಹ್ಮಪುರಿ, ಪಟ್ಟದಕಲ್ಲು, ಚಿಮ್ಮಲಗಿ, ಮಂಗಲವೇಢೆ, ಮಳಖೇಡ, ಘೋಗಾಂವ, ತೇರ್ದಾಳ, ಹನಗಂಡಿ, ಅಸಂಗಿ, ಸಪ್ತಸಾಗರ, ಹಾಂಗಲ, ಸೋಮಪುರ ಮೊದಲಾದ ಊರುಗಳ ಹಳಮೆಗಳನ್ನು ಬೆಳಕಿಗೆ ತಂದದೆ, ವಡಗಾಂವ-ಮಾಧವಪುರ, ಬೆಳ್ವಟ್ಟಿ, ಕೆಕ್ಕಾರ, ತಮ್ಮಡಿ-ಕಲ್ಯಾಳ, ಧಾರವಾಡ, ತೇರ್ದಾಳ ಮುಂತಾದ ಊರುಗಳ ಶಾಸನಗಳನ್ನು ಓದಿ ಅರ್ಥವಿಸಿದೆ, ಪೇಶ್ವೆಗಳಿಗೂ ಹೈದರ್ ಅಲಿ-ಟೀಪು ಸುಲ್ತಾನರಿಗೂ ಆದ ಕದನಗಳನ್ನು ಕುರಿತು ದಫ್ತರಗಳನ್ನು ಪರಿಶೀಲಿಸಿದೆ. ಈವರೆಗೆ ಇತಿಹಾಸಕ್ಕೆ ದೊರಕಿಲ್ಲದ ಚಂದಾವರದ ಕದಂಬರ ವಂಶವನ್ನೂ, ಪುಂಗವವರ್ಮನೆಂಬ ಪ್ರಾಯಶಃ ಚಾಳುಕ್ಯ ಅರಸು ಕುಮಾರನನ್ನೂ, ರುದ್ರಾಭಟ್ಟ ವಾಸುದೇವರೆಂಬ ಕನ್ನಡ ಕವಿಗಳನ್ನೂ, ಹೂವಿನ ಬಾಗೆ (ಅಂದರೆ ಕೊಲ್ಹಾಪುರದಲ್ಲಿಯ ಬಾಯಿ ಭಾಗ, ಎಂಬಲ್ಲಿದ್ದ ಮಹಾ ಘಟಿಕಾಸ್ಥಾನ (ಅಂದರೆ ವಿಶ್ವವಿದ್ಯಾಲಯ)ವನ್ನೂ ಹೊಸದಾಗಿ ಕಂಡು ಹಿಡಿದದೆ, ಎಷ್ಟೋ ಹಳೆಯ ವಿಗ್ರಹಗಳನ್ನೂ ಎಷ್ಟೋ ಹಳೆಯ ಗ್ರಂಥಗಳ ಹಸ್ತಪ್ರತಿಗಳನ್ನೂ ಸಂಗ್ರಹಿಸಿಯದೆ. ಈ ಬಗೆಯ ಹಲವೊಗವಾದ ಕಾರ್ಯನಿರ್ವಾಹದ ಬಗ್ಗೆ ಶ್ರೀ ಪಂಚಮುಖಿಯವರು ಸರ್ವಥಾ ಅಭಿನಂದನೀಯರು.

ವಿಶಿಷ್ಟ ವಿಷಯಗಳು

ಈ ವರದಿಯಲ್ಲಿಯ ಪ್ರತ್ಯೇಕಸಂಗತಿಯನ್ನು ಕುರಿತು ಹೇಳಲಳವಲ್ಲವಾದರೂ ಕೆಲವು ವಿಶಿಷ್ಟ ವಿಷಯಗಳನ್ನು ಎತ್ತಿಕೊಳ್ಳುವಲ್ಲಿ—

(೧) ಪುಟ ೫,೩೭ ಮತ್ತು ೫೦: ಕ್ರಿ. ಪೂ. ಅಥವಾ ಕ್ರಿ. ಶ. ೧ ನೆಯ ಶತಕದ ಬ್ರಾಹ್ಮೀ ಅಕ್ಷರಗಳಲ್ಲಿ ಕೆತ್ತಲ್ಪಟ್ಟಿರುವ, ವಾಜಪೇಯ-ಅಶ್ವಮೇಧ-ಸರ್ವಕ್ರತು ಮೊದಲಾದ ಮಹಾಯಾಗಗಳನ್ನು ಮಾಡಿರುವ ಕಾಶ್ಯಪಗೋತ್ರದವನೊಬ್ಬನನ್ನು ಹೊಗಳಿರುವ ಪ್ರಾಕೃತ ಭಾಷೆಯ ವಡಗಾಂವ-ಮಾಧವಪುರದ ಶಾಸನ; ಅಶ್ವಮೇಧವನ್ನೂ ಮಾಡಿರುವನೆಂಬುದರಿಂದ ಆತನು ಪ್ರಾಯಶಃ ಶ್ರೇಷ್ಠವಾದ ಒಬ್ಬ ಅರಸನಾಗಿರಬೇಕೆನಿಸುತ್ತದೆ. (೨) ಪು. ೧೪ ರಲ್ಲಿ ಹೇಳಿರುವ ಭಾಮಿನೀ ಷಟ್ಪದಿಬದ್ಧವಾದ ಉತ್ತರರಾಮಾಯಣ ಎಂಬ ಕಾವ್ಯವು ಸೂಚನೆ॥

ಲೀಲೆ ಮಿಗೆ ಸಭೆಯೊಳಗೆ ಮುನಿಗಳ
ಮೇಳದಲಿ ಕುಳ್ಳಿರ್ದು ಕಳಶಜ
ಹೇಳಿದನು ರಾವಣನ ವಂಶಕ್ರಮವ ರಘುಪತಿಗೆ॥

ಶ್ರೀಮದಮಿತ ಗುಣಾಭಿರಾಮಳ
ಮಾಮನೋಹರ ಮೂರ್ತಿ ಕಮಲಜ
ಕಾಮಹರ ಮುಖದೇವ ಹೃದಯಾಂಭೋಜ ದಿನರಾಜ। ॥೧॥

ಎಂಬ ಪದ್ಯಗಳಿಂದ ಮೊದಲಾಗಿ

ಹವಣಿಸದ ಭಕ್ತಿಯಲಿ ಪಡದೊಂ
ದವಿರಳದ ಫಲವಹುದು ರಘುಪುಂ
ಗವನ ಸತ್ಕಾವ್ಯದೊಳಗೊಂದಕ್ಷರವ ಕೇಳ್ದರಿಗೆ ॥೩೭॥

ಎಂಬ ಪದ್ಯದಿಂದ ಕೊನೆಯಾಗಿ ೪೪ ಸಂಧಿಗಳಿಂದ ಕೂಡಿರುವ ಗ್ರಂಥವೆಂದಾದರೆ, ಅದೊಂದು ಸಾಕಷ್ಟು ದುರ್ಲಭವೆನಿಸತಕ್ಕ ಕಾವ್ಯ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಯ ವರೆಗೆ ಮಂಜೇಶ್ವರದಲ್ಲಿ ಮಾತ್ರ ಅದರ ಕೆಲವೇ ಓಲೆಯ ಪ್ರತಿಗಳು ದೊರಕಿ (ಇತ್ತೀಚೆಗೆ ಪಾಣೆಮಂಗಳೂರಲ್ಲೇನೋ ಒಂದು ಪ್ರತಿ ಇದೆಯಂತೆ), ಅನ್ಯತ್ರ ಅದು ದೊರಕಿಲ್ಲದು ನನಗೆ ತೀರ ವಿಸ್ಮಾಪನವಾಗಿತ್ತು. (೩) ಪು. ೧೯: ಕದಂಬ ೩ ನೆಯ ಜಯಕೇಶಿಯ (ಕ್ರಿ. ಶ. ೧೧೮೭-೧೨೧೦) ಆಳಿಕೆಯ ೧೩ ನೆಯ ವರ್ಷದ ತಾಮ್ರಪಟ್ಟದಲ್ಲಿ ಶ್ರೀ ನರಸಿಂಹ ಹಾಗೂ ಶ್ರೀ ವರಾಹದೇವರ ಮಂದಿರಗಳಿಗೆ ಸಂಬಂಧಿಸಿದ ರಂಗಭೂಮಿಯ ಪ್ರಸ್ತಾವವಿದೆ. ಅದರಲ್ಲಿ ಆಯಾ ದೇವರ ಉತ್ಸವಕಾಲದಲ್ಲಿ ನಾಟಕಗಳನ್ನು ಆಡುತ್ತಿದ್ದರೆಂದು ಮಾತ್ರವಲ್ಲ, ಆ ನಾಟಕಗಳೂ ಖಂಡಿತವಾಗಿ ಕನ್ನಡ ನಾಟಕಗಳೇ ಎಂದೂ ಬೇರೆ ಹೇಳಬೇಕೆಂದಿಲ್ಲ. ಆದ ಕಾರಣ ಅದಕ್ಕೂ ಹಿಂದಿನಿಂದಲೇ ಕನ್ನಡದಲ್ಲಿ ನಾಟಕಗಳು ಇದ್ದಿರಬೇಕು. (೪) ಪು. ೧೯-೨೦: ಒಂಟೆಯನ್ನು ಏರಿರುವ ದುರ್ಗೆಯ ಅಪೂರ್ವ ಮೂರ್ತಿ. (೫) ಪು. ೨೩: ಕಾರವಾರ ತಾಲೂಕಿನ ಮಾಜಾಳಿಯ ಬಂಡೆಯ ಮೇಲಣ ಉದ್ದ ಕತ್ತಿನ ಜಿರಾಫದ ಚಿತ್ರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಮೂಡಬಿದರೆಯ ತ್ರಿಭುವನ ಚೂಡಾಮಣಿ ಎಂಬ ಸಾವಿರ ಕಂಬದ ಬಸದಿಯ (ಕ್ರಿ. ಶ. ೧೪೩೧) ಯಾವೊಂದು ಅಡಿಗಲ್ಲಿನಲ್ಲಿ ಜಿರಾಫದ ಚಿತ್ರವಿದೆ. (೬) ಪು. ೪೭ ಮತ್ತು ೫೨: ಪ್ಟೊಲೆಮಿಯ ಗ್ರಂಥದಲ್ಲಿ ಪೆತಿರ್ಗಲ ಎಂದಿರುವ ಊರನ್ನು ಇಲ್ಲಿ ಪಟ್ಟದ ಕಲ್ಲು ಎಂದು ಸಮೀಕರಿಸಿದುದನ್ನು ಒಪ್ಪಲಾಗುವದಿಲ್ಲ. ಏಕೆಂದರೆ ಪ್ರಾಗಾರಭ್ಯ ಕಿಸುವೊಳಲು ಎಂದು ಹೆಸರಾಗಿದ್ದ ಆ ಊರಲ್ಲಿ ಬಾದಾಮಿಯ ಚಾಳುಕ್ಯ ಅರಸರು ಪಟ್ಟಾಭಿಷಿಕ್ತರಾಗುತ್ತಿದ್ದ ಕಾರಣದಿಂದ (ಪು. ೫೩) ಅತಏವ ಬಹಳ ಹೆಚ್ಚಾದರೆ ಅವರಲ್ಲಿ ಮೊದಲನೆಯಾತನು ಅಲ್ಲಿ ಪಟ್ಟಾಭಿಷಿಕ್ತನಾದಂದಿನಿಂದ ತಾನೆ, ಅದಕ್ಕೆ ಪಟ್ಟದ ಕಲ್ಲು ಎಂದು ಹೆಸರಾಗಿರಬೇಕೆಂದು ಬೇಕಾದಷ್ಟು ಪ್ರತ್ಯಕ್ಷವಿರುವುದರಿಂದ, ಆ ಕಾಲಕ್ಕೂ ಎಷ್ಟೋ ಹಿಂದೆ ಪ್ಟೊಲೆಮಿ ಇದ್ದ ಕ್ರಿ. ಶ. ೨ ನೆಯ ಶತಕದಲ್ಲಿ ಆ ಊರಿಗೆ ಪಟ್ಟದ ಕಲ್ಲು ಎಂಬ ಹೆಸರು ಸರ್ವಥಾ ಇದ್ದಿರಲಾರದು. ನನಗಾದರೂ ಪ್ಟೊಲೆಮಿಯ ಪೆತಿರ್ಗಲ ಎಂದರೆ ಬಿಜಾಪುರ ಜಿಲ್ಹೆಯ ಬಾಗೇವಾಡಿ ತಾಲೂಕಿನಲ್ಲಿರುವ ಈಗಣ ಹತ್ತಿಕರ್ಹಾಳ ಎಂಬ ಊರು ಎಂದೇ ತೋರುತ್ತದೆ. ಪ್ರಬುದ್ಧ ಕರ್ನಾಟಕ, XXIII, ವಿನಾಯಕನ ಸಂಚಿಕೆ: "ಪ್ಟೊಲೆಮಿಯ ಹಿಪ್ಪೊಕೂರ", (ಪು. ೬೨-೬೩) (೭) ಪು. ೫೨: ಶಾಲಿವಾಹನ ಶಕ ೮೦೮೪ ಸುಭಾನು ಸಂ। ಜ್ಯೇಷ್ಠ ಶು। ೧೫ ಸೋಮವಾರ ಚಂದ್ರಗ್ರಹಣ=ಕ್ರಿ. ಶ. ೧೧೬೩ ನೆಯ ಜೂನ ೧೭ ನೆಯ ತಾರೀಕು ಸೋಮವಾರದಂದಿನ ಚಂದ್ರಗ್ರಹಣ, ಇಲ್ಲಿ ಶಕವರ್ಷವನ್ನು ಹೇಳುವಲ್ಲಿ ವರ್ತಮಾನ ಸಂವತ್ಸರದ ವರ್ಷಸಂಖ್ಯೆಯನ್ನು ಹೇಳದೆ, ಗತವರ್ಷಗಳ ಸಂಖ್ಯೆಯನ್ನು ಹೇಳಿದೆ. ಈ ಬಗೆಯ ಕ್ರಮವು ಅನೇಕ ಶಾಸನಗಳಲ್ಲಿ ತೋರಬರುತ್ತದೆ. (೮) ಪು. ೫೩: ಪಟ್ಟದಕಲ್ಲಿನಲ್ಲಿಯ ಬಹಳ ಹಳೆಯದೊಂದು ಶಾಸನದಲ್ಲಿ ಒಬ್ಬ ನಟನ ಉಲ್ಲೇಖವಿದೆ. ಆತನು ಕನ್ನಡ ನಾಟಕಗಳಲ್ಲೇ ಪಾತ್ರವಾಡುತ್ತಿದ್ದ ನಟನೆಂದು ನಿಸ್ಸಂಶಯವಾಗಿ ಹೇಳಬಹುದು. ಅತಏವ ಆ ಕಾಲಕ್ಕೂ ಹಿಂದಿನಿಂದ ಕನ್ನಡದಲ್ಲಿ ನಾಟಕಗಳು ಇದ್ದಿರಬೇಕು. (೯) ಪು. ೬೩-೬೫ ರಲ್ಲಿ ವಿವರಿಸಿದ ಮಣ್ಣಿನ ಉಖಾಪಾತ್ರವಾದರೂ ಒಂದು ಅಪೂರ್ವ ದೊರೆತು, ಅದನ್ನು ಕುರಿತು ವಿವರಣವಾದರೆ ಮನಸ್ಸಿಗೆ ಒಂದು ಹಬ್ಬ. ಅದರ ವೇದೋಕ್ತ ಆಕಾರದಿಂದ ಅದು ಗರುಡ ಚಯನ ಎಂಬ ಯಜ್ಞಕ್ಕೆ ಅಗ್ನಿಯನ್ನು ಒಯ್ಯುವ ಉಖಾಪಾತ್ರವೆಂದೂ (ಸಂ. ಉಖಾ=ಮಡಕೆ), ಅದರ ವೇದೋಕ್ತ ನಿರ್ದೇಶಕ್ಕೆ ಒಪ್ಪುವ ರಚನೆಯನ್ನೂ ಅದರ ಜತೆಯಲ್ಲಿದ್ದ ಇತರ ಮಣ್ಣಿನ ಪಾತ್ರಗಳು, ಇಟ್ಟಿಗೆಗಳು ಮೊದಲಾದವನ್ನೂ ಪರಿಭಾವಿಸಿ ಅದು ಕ್ರಿಸ್ತಶಕದ ಆದಿಮ ಕಾಲದಲ್ಲಿ ನಿರ್ಮಿಸಲ್ಪಟ್ಟಿರಬೇಕೆಂದೂ ನಿಶ್ಚಯಿಸಿದೆ. (೧೦) ಪು. ೬೮ರಲ್ಲಿ ಹೇಳಿರುವ ಭೃಗವನ ಪಿಚಂಡಿ ಎಂಬ ಲೋಕೋಕ್ತಿಯ ಹೆಸರಿಗೂ ದಕ್ಷಿಣ ಕನ್ನಡದ ತುಳು ಜನರು ಆರಾಧಿಸುತ್ತಿರುವ ಭೂತಗಳಲ್ಲಿ ಒಂದರ ಪಿಲಿಚಾವುಂಡಿ ಎಂಬ ಹೆಸರಿಗೂ ಪಾಪಿ ಇರಬಹುದೇ?

ಚಿತ್ರಗಳು

ಈ ವರದಿಯಲ್ಲಿ ಅನೇಕ ಚಿತ್ರಗಳೂ ಇವೆ, ಕೆಲವು ಶಾಸನಪಟಗಳೂ ಕೆಲವು ಭೂಪಟಗಳೂ ಇವೆ. ಎಲ್ಲವೂ ಬಹಳ ಸೊಗಸಾಗಿವೆ ಯಾದರೂ ಅವಲ್ಲಿಯ '[೧] ದೋಲಾಯದಲ್ಲಿ ಹೆಂಗಸೂ ತೀಲಾಯದಲ್ಲಿ ಗಂಡಸೂ ಅದ ಕಿನ್ನರಿ [ಚಿತ್ರ ೩], [೨] ಕಾಪಾಡಿದ ಮೂವರು ಕಾಲುಗಳು ತಾಲ್ಲು [ಚಿತ್ರ ೧೧], [೩] ರಾವಣನು ಸೀತೆಯನ್ನು ಕದ್ದೊಯ್ಯುವಾಗ ಕಿವಿಕಿಯಿಂದ ಇಣಿಕಿ ನೋಡುತ್ತಿರುವ ಚಿಕ್ಕ ಹುಡುಗ [ಚಿತ್ರ ೧೩], [೪] ಕಾಡಿನಲ್ಲಿ ಮುನಿಗಳ ಜೀವನ [ಚಿತ್ರ ೧೫], [೫] ಅರಿಸಿಗಿದ ಮರದ ಕೊರಡಿನಲ್ಲಿ ಒಗ್ಗಲಿಸಿ ಕುಳಿತು ಕೊಂಡು ಅವರಲ್ಲಿ ಜಡಿದಿಟ್ಟ ಕೀಲನ್ನು ಕೀಳುತ್ತಿರುವ ಕೋತಿ [ಚಿತ್ರ ೧೫], ಈ ಶಿಲ್ಪಗಳಾದರೆ ರಸಜ್ಞರವೇ ಅಲ್ಲ, ಬೀದಿಹೋಕರ ಕೂಡ ಕಣ್ಣನ್ನು ಸೆಳೆಯಲಾಪವು.

ಹೀಗೆ ತುಂಬ ತಾಳ್ಮೆಯಿಂದಲೂ ಅದಕ್ಕೆ ಮಿಕ್ಕ ಉದ್ಯಮೆಯಿಂದಲೂ ಅಷ್ಟೆಲ್ಲವನ್ನು ಸಂಗ್ರಹಿಸಿದ ಓದಿದ, ಅರ್ಥವಿಸಿದ ಹಾಗೂ ಅವುಗಳಿಂದ ಹೊಸ ಐತಿಹಾಸಿಕ ವಿಷಯಗಳನ್ನು ಕಂಡು ಹಿಡಿದ ಶ್ರೀ ಪಂಚಮುಖಿಯವರನ್ನು ಮತ್ತೊಮ್ಮೆಯೂ ಅಭಿನಂದಿಸುತ್ತೇನೆ.

ನಂದಾದೀಪದ ನಂದಿನಿ

ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯ ಮಾಲೆಯಲ್ಲಿ ಶ್ರೀ ಎಂ. ಹರಿದಾಸರಾಯರ ಸಂಪಾದಕತ್ವ ಮತ್ತು ಪ್ರಕಾಶಕತ್ವಗಳ ಮೂಲಕ ಹೊರಬಿದ್ದ ಈ "ನಂದಾದೀಪದ ನಂದಿನಿ" ಯನ್ನು ಸ್ವಾಗತಿಸಲು ಸಂತೋಷವಾಗುತ್ತದೆ. ಸಾಹಿತ್ಯಮಾಲೆಯ ೪ ನೆಯ ಪುಸ್ತಕವಿದು. ಬರಹಗಾರರು ಶ್ರೀ ಕೆ. ಶ್ರೀಧರರು. ಪುಟ೬೪, ಬೆಲೆ ೧॥ ರೂ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಜೀವನೇತಿಹಾಸದ ಅಂಶಗಳು ಪ್ರಸ್ತುತ ಪುಸ್ತಕದಲ್ಲಿ ಬೆಳಕನ್ನು ಕಂಡಿವೆ. ಸುಮಾರು ೫೦. ಪುಟಗಳ ವರೆಗೆ ಬರೆದದ್ದು ಕಥಾನಾಯಿಕೆಯ ವಿಶಿಷ್ಟ ಜೀವನೇತಿಹಾಸವಲ್ಲ; ಒಟ್ಟಿನಲ್ಲಿ ನೆಹರು ಕುಟುಂಬದವರ ಬಾಲ್ಯ, ಯೌವನ, ವಾರ್ಧಕ್ಯ, ರಾಜಕೀಯ ಚಟುವಟಿಕೆ, ಕಷ್ಟನಷ್ಟ ಇವೇ ಮೊದಲಾದವು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮಂತ್ರಿಗಳಾದಂದಿನಿಂದ ಬರೆದ ಸಂಗತಿಗಳು ಅನುಕ್ರಮಿಕವಾಗಿ ವಿಶೇಷತಃ ಅವರ ಜೀವನಕ್ಕೆ ಹೆಚ್ಚಾಗಿ ಸಂಬಂಧಿಸಿದವು ಎಂದು ಹೇಳಬಹುದು. ಅವರ ಕೀರ್ತಿ ಬೆಳೆದದ್ದು ಅವರು ಮೊದಲ ಬಾರಿಗೆ ಸಾನ್ ಫ್ರಾನ್ಸಿಸ್‌ಕೋದ ಪರಿಷತ್ತಿಗೆ ಹೋಗಿ ಭಾರತೀಯರ ಬಗ್ಗೆ ಅಮೇರಿಕನ್ನರಿಗೆ ಸತ್ಯ ಸಂಗತಿಯನ್ನು ತಿಳಿಸಿದ ವೀರವಾಣಿಯಿಂದ. ಈ ಸನ್ನಿವೇಶ ರಸಮಯವಾಗಿದೆ. ಅವರ ಬಾಲ್ಯದ ಶಿಕ್ಷಣ ಮತ್ತು ಶಿಸ್ತುಗಳು ಇಂದಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಠ ಕಲಿಸುವಂಥವಾಗಿವೆ. ವಿಶೇಷತಃ ಸ್ತ್ರೀಯರಿಗೆ ಒಳ್ಳೇ ಮಾದರಿಯವಾಗಿವೆ.

ನಡುವೆ ಬರುವ ಪತ್ರಿಕೋದ್ಯೋಗಿಗಳ ಅತಿಹಾಸ್ಯಕರ ವರ್ತನೆ ಅವರಲ್ಲಿಯ ಹಲವರ ನಿಜವರ್ತನೆಗೆ ಕನ್ನಡಿ ಹಿಡಿಯುವಂತಿದೆ.

ಬರಹದ ಓಟ ನೆಟ್ಟಗಿದೆ. ಶೈಲಿಯಲ್ಲಿ ವೈಶಿಷ್ಟ್ಯ ಉಂಟೆಂಬುದು ಕಷ್ಟ; ಆದರೆ ಸರಳತೆಯಿದೆ. ಹಲವಾರು ಮುದ್ರಣ ದೋಷಗಳ ಜೊತೆಗೆ ಕೆಲ ತಪ್ಪಾದ ಪದಪ್ರಯೋಗಗಳೂ ಇವೆ. ಒಟ್ಟಿನಲ್ಲಿ ಇಂದಿನ ಸಾಮಾನ್ಯ ಪತ್ರಿಕೋದ್ಯಮಿಯ "ಶೈಲಿ" ಈ ಬರಹದಲ್ಲಿ ಕಾಣುವುದೆನ್ನಬಹುದು. "ನಂದಾದೀಪದ ನಂದಿನಿ" ಎಂಬ ಪುಸ್ತಕನಾಮದ ಅರ್ಥಸ್ಪಷ್ಟತೆ, ಔಚಿತ್ಯಗಳೇನೆಂಬುದು ದುರೂಹ್ಯವಾಗಿದೆ. ಆದರೆ ಸ್ವತಂತ್ರ ಭಾರತದ ಕೀರ್ತಿಯನ್ನು ಉಜ್ವಲಗೊಳಿಸಿದ ಒಂದು ದೊಡ್ಡ ವ್ಯಕ್ತಿ ಕಥಾನಾಯಿಕೆಯಾಗಿರುವ ಈ ಪುಸ್ತಕ ದೇಶಪ್ರೇಮಭರರಾದ ಕನ್ನಡಿಗ ಕನ್ನಡಿತಿಯರ ಪ್ರೋತ್ಸಾಹಕ್ಕೆ ತಕ್ಕದ್ದೆಂಬುದರಲ್ಲಿ ಮಾತ್ರ ಎಳ್ಳಷ್ಟು ಅತಿಶಯೋಕ್ತಿಯಿಲ್ಲ.

ಶಿವನ ಬುಟ್ಟಿ

ಲೇಖಕರು— ಹಿರೇಮಲ್ಲೂರ ಈಶ್ವರನ್
ಪ್ರಕಾಶಕರು— ಕಲ್ಪನಾ ಗ್ರಂಥಪ್ರಕಾಶನ ಸಮಿತಿ ಹುಬ್ಬಳ್ಳಿ.

ಪುಟಗಳು- ೧೦ ೩೨೬ ಬೆಲೆ ರೂ. ೧-೮-೦.

"ಶಿವನ ಬುಟ್ಟಿ" ಗ್ರಂಥವು ೨೬ ಪ್ರಬಂಧಗಳ ಸಂಗ್ರಹ. ಈ ಗ್ರಂಥದಲ್ಲಿಯ ಪ್ರಬಂಧಗಳ ಲೇಖಕರು ವಿಷಯದ ಬಗ್ಗೆ ಪರಿಪೂರ್ಣ ನಿರೂಪಣೆ ಕೊಡದೆ ಆ ಬಗ್ಗೆ ತಮ್ಮ ಅನುಭವಗಳನ್ನು ನಿರೂಪಿಸುತ್ತ ವಿಷಯಮುಂಡನೆ ಮಾಡಿದ್ದಾರೆ. ಹೀಗಾಗಿ ಪ್ರಬಂಧಗಳಲ್ಲಿ ಒಂದು ಹೊಸತನ ಕಂಡುಬರುತ್ತದೆ. ಪ್ರಬಂಧಗಳು೨೬. ಅವುವಿವಿಧ ವಿಷಯಗಳ ಬಗ್ಗೆ ಸಂಬಂಧಿಸಿದ್ದು, ನಮಗೆ ಚಿರಪರಿಚಿತವಾದ ಗೆಳೆತನ, ಹಣ, ಸಾವು, ದುಃಖ, ಶಾಂತಿ, ನಿರಪರಾಧಿ, ಪ್ರವಾಸ, ಸ್ಮೃತಿ, ಮಾತೃಭಕ್ತಿ, ಉಪವಾಸ, ಮೌನ, ಸೌಂದರ್ಯ, ಪುಸ್ತಕಗಳು, ಅನುಭವ, ಮಾತು, ಅಧಿಕಾರ, ಯೌವನ, ತಾಳ್ಮೆ, ಕೀರ್ತಿ, ಮಿಥ್ಯಾಚಾರ, ಹಣ, ಪ್ರೇಮ, ಕರ್ತವ್ಯ, ಭವಿಷ್ಯತ್ತು, ಆಕಾಶ, ಪ್ರಾರ್ಥನೆ, ಸಿಟ್ಟು ಇವುಗಳಿಗೆ ಸಂಬಂಧಿಸಿರುತ್ತವೆ. ವಿಷಯವಿವೇಚನೆಯಿಂತೆಯೇ ಲೇಖಕರ ಶೈಲಿಯಾದರೂ ಪರಿಪೂರ್ಣವಲ್ಲದಿದ್ದರೂ, ಸರಳವಾಗಿದೆ. ಭಾಷೆಯು ಬೆಳೆಯುತ್ತಿರುವಂತೆ ಕಂಡು ಬರುತ್ತದೆ. ಆದರೆ ಲೇಖಕರು "ಅವಳ" ಯಲ್ಲಿ ಶ್ರೀ. ಕುಂದಣಗಾರರ ಪರಿಚಯದ ಸಂದರ್ಭದಲ್ಲಿ "ಧಾರವಾಡ ಕರ್ನಾಟಕ" ವೆಂದು ಉಲ್ಲೇಖಿಸಿದ್ದಾರೆ. ಇದರ ಔಚಿತ್ಯ ವೇನೋ ತಿಳಿಯದು. ಉತ್ತರಕರ್ನಾಟಕವೆಂದು ಲೇಖಕರು ಹೇಳಬೇಕಾಗಿತ್ತು. ಗ್ರಂಥದ ಕೆಲ ಕುಂದು ಕೊರತೆಗಳಿದ್ದರೂ ಶ್ರೀ ಹಿರೇಮಲ್ಲೂರ ಈಶ್ವರನ್ನರ ಪ್ರತಿಭೆಗೆ ಭೂಷಣವಾಗಿದೆ. ಅವರಿಂದ ಇಂತಹ ಗ್ರಂಥಗಳು ಹಲವಾರು ಬರಲಿ.

ನಿಯತಕಾಲಿಕಾವಲೋಕನ

Bulletin of Physical Education

ಇದು ವ್ಯಾಯಾಮದ ಚಟುವಟಿಕೆಗಳನ್ನು ವಿವರಿಸುವ ಒಂದು ಪತ್ರಿಕೆ. ಇದರಲ್ಲಿ ೫೬ ಪುಟಗಳ ಫ್ರೆಂಚ್ ಬರಹವೂ ೧೭ ಪುಟಗಳ ಇಂಗ್ಲಿಷ ಬರಹವೂ ೨೦ ಪುಟಗಳ ವ್ಯಾಯಾಮ ಪ್ರದರ್ಶಕವಾದ ಸುಂದರ ಚಿತ್ರಗಳೂ ೨೮ ಪುಟಗಳ ಹಿಂದೀ ಬರಹವೂ ಇವೆ. ಇದು ಮೊದಲ ಸಂಪುಟದ ೨ ನೆಯ ಸಂಚಿಕೆ; ಅಮರಾವತಿಯಲ್ಲಿರುವ ಆರಮಂಡಳ ವ್ಯಾಯಾಮ ಪ್ರಸಾರಕ ಮಂಡಳ ಬಹಳ ಮುದ್ದಾಗಿ ಮುದ್ರಿತವಾಗಿದೆ.

Annual Report of the Department of Industries Bombay Province 1945-46

ಇದು ಮುಂಬಯಿ ಸರಕಾರದ ಉದ್ಯಮಗಳ ನಿರ್ದೇಶಕರಾದ ಶ್ರೀ ಎಂ. ಬಿ. ಕಾಂಗಾ ಅವರು ಸರಕಾರಕ್ಕೆ ಒಪ್ಪಿಸಿದ ಉದ್ಯಮಗಳ ವಾರ್ಷಿಕ ವರದಿ; ೭೫ ಪುಟಗಳ ಈ ಹೊತ್ತಿಗೆಯಲ್ಲಿ ಪ್ರಕರಣಗಳ ಮೂಲಕ ಅವರು ಪ್ರಾಂತದ ನಾನಾಭಾಗದಲ್ಲಿ ನಡೆಯುತ್ತಿರುವ ಉದ್ಯಮಗಳಿಗೆ ಸಂಬಂಧಿಸಿದ ವಿವರಗಳನ್ನು ಕೊಟ್ಟಿದ್ದಾರೆ. ಉದ್ಯಮಿಗಳು, ವಾಣಿಜ್ಯ ವಿದ್ಯಾರ್ಥಿಗಳು ಮುಂತಾದ ಜಿಜ್ಞಾಸುಗಳಿಗೆ ಮತ್ತು ಅರ್ಥಶಾಸ್ತ್ರೀಯ ಪ್ರಬಂಧಗಳನ್ನು ಬರೆಯತಕ್ಕವರಿಗೆ ಇದರಲ್ಲಿ ಹಲವಾರು ಉಪಯುಕ್ತ ಅಂಕೆ, ಸಂಖ್ಯೆ, ವಿಷಯ, ವಿವರಗಳು ಸುಲಭವಾಗಿ ದೊರಕುತ್ತವೆ. ಮುಂಬಯಿಯಲ್ಲಿರುವ ಸರಕಾರೀ ಮುದ್ರಣಾಲಯದ ಸೂಪರಿಂಟೆಂಡೆಂಟರಿಂದ ೭ ಆಣೆಗಳಿಗೆ ಇದನ್ನು ಪಡೆಯಬಹುದು.

Karnatak Collage Miscellany

ಧಾರವಾಡದ ಕರ್ನಾಟಕ ಕಾಲೇಜಿನ ಈ ಪತ್ರಿಕೆ ಇಂಗ್ಲೀಷ್, ಕನ್ನಡ, ಮರಾಠಿ, ಹಿಂದಿ, ಸಂಸ್ಕೃತ ಮತ್ತು ಉರ್ದು ಭಾಷೆಗಳ ವಿವಿಧ ಬರಹಗಳಿಂದ ಅಲಂಕೃತವಾಗಿದೆ. ಅಂಗ್ಲ ಲೇಖನಗಳು ೪೦ ಪುಟಗಳನ್ನೂ ಕನ್ನಡವು ೩೬ ಪುಟಗಳನ್ನೂ ಹಿಂದಿಯವು ೧೦ ಪುಟಗಳನ್ನೂ ಸಂಸ್ಕೃತವು ೨ ಪುಟಗಳನ್ನೂ ಉರ್ದುವಿನವು ೧೨ ಪುಟಗಳನ್ನೂ ವ್ಯಾಪಿಸಿವೆ. ಸುಂದರ ಭಾವಚಿತ್ರಗಳು ಅಲ್ಲಲ್ಲಿ ಕಂಡುಬರುತ್ತವೆ. ಹಲವಾರು ಹೃದ್ಯಲೇಖನಗಳು ಇದರಲ್ಲಿವೆ.

ಆಯುರ್ವೇದ (ಮಾಸಿಕ)

ಉಡುಪಿಯಿಂದ ಹೊರಡುವ ಈ ಆಯುರ್ವೇದಿಕ ಮಾಸಪತ್ರಿಕೆ ೩೧ ಪುಟಗಳುಳ್ಳ, ಎಂಟಾಣೆ ಬೆಲೆಯ ಚಿಕ್ಕ ಪುಸ್ತಕರೂಪದಲ್ಲಿದೆ. ವಾರ್ಷಿಕ ಚಂದಾ ೩ ರೂ. ಗಳು. ಶ್ರೀ ಕಾ. ರಾ. ಪುರಾಣಿಕ, ಆಯುರ್ವೇದ ಅಧೀಕ್ಷ, ಉಡುಪಿ ಇವರು ಇದರ ಪ್ರಕಾಶಕರು. ಆರೋಗ್ಯಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳಿಗೆ ಸಂಬಂಧಿಸಿದ ಹಲವಾರು ಉತ್ತಮ ಬರಹಗಳು ಸರ್ವಸಾಮಾನ್ಯರಿಗೆ ತಿಳಿಯುವಂತೆ ಇದರಲ್ಲಿ ಪ್ರಕಟವಾಗುತ್ತದೆ. ವಿಷಯಜ್ಞಾನ ಪಡೆಯಲೆಳಸುವವರಿಗೆ ಅಗ್ಗದಲ್ಲಿ ದೊರೆಯುವ ಈ ಪತ್ರಿಕೆ ಬಹಳ ಉಪಯುಕ್ತವಾದುದು.

ಜೂನ ೧೩ ರಿಂದ ೧೯ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ಸ್ವತಃ ನಿಮಗೆ ಹಲ್ಲು, ಕಿವಿ ಇಲ್ಲವೆ ಕಣ್ಣಿನ ವಿಕಾರದಿಂದ ಸ್ವಲ್ಪ ತೊಂದರೆ ಆದರೆ ಹೆಂಡತಿಯ ಆರೋಗ್ಯ ಮಾತ್ರ ಉತ್ತಮ. ಉಭಯತರಲ್ಲಿ ಕ್ಷುಲ್ಲಕ ಕಾರಣದಿಂದ ಮೇಲಿಂದಮೇಲೆ ಶಿಕ್ಷ್ಯಾಜನೇಳುವ ಸಂಭವ. ಮಕ್ಕಳಲ್ಲಿ ಒಬ್ಬನ ವರ್ತನದಿಂದ ಎಲ್ಲರ ಮನಸ್ಸು ಸಂತಾಪಗೊಳ್ಳುವದು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಕಿರಕೊಳ ವೆಚ್ಚ ಮಾತ್ರ ವಿಪರೀತ. ಹಳೆಯ ಮಿತ್ರರ ಸಹವಾಸವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ದೂರಿನಕಿಂತ ಸಮೀಪದ ಪ್ರವಾಸ ಸುಖಕರ. ಭೆಟ್ಟಿ ಮತ್ತು ಪತ್ರವ್ಯವಹಾರ ಸಾಮಾನ್ಯ. ಅಶ್ವಿನಿಯ ೪ ನೆ ಮತ್ತು ಭರಣಿಯ ೩ ನೆ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೬, ೧೭ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲವಿದ್ದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಸ್ಥಾವರದಲ್ಲಿ ಅನುಕೂಲ ಘಟನೆಗಳು. ಪ್ರಿಯ ಜನರ ಭೆಟ್ಟಿ ಸಹವಾಸಯೋಗ ಮೇಲಿಂದ ಮೇಲೆ ಉಂಟಾಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಗುಪ್ತರೀತಿಯಿಂದ ಶತ್ರುಗಳ ಲಾಡಬುಡ ನಡೆದೇ ಇದೆ. ಪೂಜ್ಯ ವ್ಯಕ್ತಿಯ ದರ್ಶನ. ಬಂಧುವರ್ಗದವರಿಂದ ತಿರಸ್ಕರಣೀಯ ಮಾತುಗಳು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೮, ೧೯ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಕೆಟ್ಟರೆ ಮಕ್ಕಳದು ಬಹಳ ಚೆನ್ನಾಗಿ ಉಳಿಯುವದು. ಅವರಲ್ಲಿ ಒಬ್ಬರ ಉನ್ನತಿ ಬಹಳಾಗುವದು. ಹೌಸೀಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ವೆಚ್ಚವೂ ವಿಪರೀತ. ಕುಟುಂಬದಲ್ಲಿಯ ಕೆಲ ಜನರ ವಿಪರೀತ ವೆಚ್ಚವನ್ನು ಸಹಿಸುವ ಹೇತು. ನೆರೆಯವರ ಗೂಡ ವಿರೋಧ. ಸ್ಥಾವರದಲ್ಲಿ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಸೋಲುಂಟಾಗುವ ಸಂಭವ. ಪ್ರವಾಸ ಸ್ವಲ್ಪ ಅನುಕೂಲವಿದ್ದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಬಹಳ ತೊಂದರೆಯದು. ಮೃಗದ ೪ ನೆ ಮತ್ತು ಆರ್ದ್ರದ ಮೊದಲಿನ ೩ ಚರಣಗಳಿಗೆ ತೊಂದರೆ ಕಟಿಮೆ. ತಾ. ೧೩, ೧೬, ೧೭ ಅನುಕೂಲ.

ಕರ್ಕ

ಪ್ರಕೃತಿ ಅಷ್ಟಕ್ಕಷ್ಟೇ. ಹೆಂಡತಿಯದೂ ಹಾಗೆಯೇ. ಬಹುತರ ವಿಷಯಗಳಲ್ಲಿ ವಿಪರೀತ ಪ್ರಾಪಂಚಿಕ ತೊಂದರೆಯೆನಿಸುವದು. ಆಪ್ತರು ಮತ್ತು ನೆರೆಹೊರೆಯವರಲ್ಲಿ ಕ್ಷುಲ್ಲಕ ಕಾರಣಗಳ ಸಲುವಾಗಿ ವಿಪರೀತ ತುರಸು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭವೆನಿಸಿದರೂ ಅದ್ದ ಖರ್ಚು ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಮಿತ್ರರು ಮಹತ್ವದ ವಿಷಯಗಳಲ್ಲಿ ಮೋಸ ಮಾಡುವ ಪ್ರಸಂಗ. ಪರಸ್ತ್ರೀ ಬಗ್ಗೆ ಕುಬುದ್ಧಿ. ಬಂಧುವರ್ಗದವರ ಗೂಡ ವಿರೋಧ. ಪ್ರವಾಸಾದಿ ಕೆಲಸ ಅನುಕೂಲ. ಪುಷ್ಯದ ೪ ನೆ ಮತ್ತು ಆಶ್ಲೇಷದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೪, ೧೫, ೧೯ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲವಿದ್ದರೆ ಹೆಂಡತಿಯದು ಮತ್ತು ಮಕ್ಕಳದು ಬಹಳ ಕೆಡುವದು. ಅಲ್ಲದೆ ನಿಮ್ಮಲ್ಲಿ ಬಹಳ ಜಗಳವೇಳುವದು. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ತುಂಬ ಪ್ರತಿಷ್ಠೆ ಮತ್ತು ಲಾಭವೆನಿಸಿದರೂ ಪ್ರತಿಯೊಂದು ಕೆಲಸವು ಸಾಧ್ಯವಾಗಬೇಕಾದರೆ ಸಾಕುಬೇಕಾಗಿ ಹೋಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಅನುಕೂಲ. ಮಘಾದ ೪ ನೆ ಮತ್ತು ಪೂರ್ವದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೩, ೧೬, ೧೭ ಅನುಕೂಲ.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲವಿದ್ದರೂ ಮಕ್ಕಳಿಗೆ ಕ್ಲೇಶವುಂಟಾಗುವದಲ್ಲದೆ ಬಹುತರ ಎಲ್ಲ ಜನರ ವರ್ತನವು ಮನಸ್ಸಿನ ವಿರುದ್ಧ ನಡೆಯುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲವಿದ್ದರೂ ವೆಚ್ಚ ವಿಪರೀತವಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರರಲ್ಲಿ ವಿರೋಧ. ಉಪಕಾರಕ್ಕಿಂತ ಅಪಕಾರದ ಅಂಜಿಕೆ. ಪ್ರವಾಸಾದಿ ಕೆಲಸ ಹಿತಕರ. ಉತ್ತರದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೯ ಅನುಕೂಲ.

ತುಲಾ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಅನುಕೂಲವಿದ್ದರೂ ಹೆಂಡತಿಗೆ ಕಾಯಿಲೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆಯೆನಿಸಿದರೂ ಲಾಭ ಮಾತ್ರ ಅನುಕೂಲ. ಬಂಧುವರ್ಗದವರಿಂದ ಸ್ವಲ್ಪ ಹೊಸ ಉಪದ್ರವವುಂಟಾಗುವಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರ ವ್ಯವಹಾರ ತೊಂದರೆಯದು. ಭೆಟ್ಟಿಯ ಕೆಲಸ ಅನುಕೂಲ. ಚಿತ್ರದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೩, ೧೫, ೧೬ ಅನುಕೂಲ.

ವೃಶ್ಚಿಕ

ನಿಮ್ಮ ಪ್ರಕೃತಿ ಅನುಕೂಲವಿದ್ದರೆ ಹೆಂಡತಿಯದು ಮತ್ತು ಮಕ್ಕಳದು ಅಸ್ವಸ್ಥ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ತುಂಬ ಲಾಭ ಯಥಾ ಯೋಗ್ಯ ಪ್ರತಿಷ್ಠೆ ಆದರೆ ನೋಕರ ವರ್ಗದವರಿಂದ ಬಹಳ ತೊಂದರೆ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ– ಪಾಪ ವಿಚಾರಗಳು ಮತ್ತು ವಾಸನೆಗಳು ಹೆಚ್ಚುವವು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅನುರಾಧೆಯ ೪ ನೆ ಮತ್ತು ಜೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೩, ೧೪, ೧೫, ೧೯ ಅನುಕೂಲ.

ಧನು

ಪ್ರಕೃತಿ ನಿಮ್ಮದು ಅನುಕೂಲವಿದ್ದರೆ ಹೆಂಡತಿ ಮತ್ತು ಮಕ್ಕಳದು ಬಹಳ ಕೆಡುವ ಸಂಭವ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕೆಲ ಮಟ್ಟಿಗೆ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣ ಆದರೆ ದ್ರವ್ಯಲಾಭ ಅನುಕೂಲ ಮಿತ್ರಸುಖ ಉತ್ತಮ. ದೊಡ್ಡ ಕೆಲಸ ಕಾರ್ಯಗಳು ಸುಲಭವಾಗಿ ಸಾಧ್ಯವಾಗುತ್ತಿದ್ದರೆ ಸಣ್ಣ ಸಣ್ಣ ಕೆಲಸಗಳು ಮಾತ್ರ ಧೀರ್ಘ ಪ್ರಯತ್ನಗಳಿಂದಲೂ ಸಾಧ್ಯವಾಗದಿದ್ದ ಚಮತ್ಕಾರಿಕ ಯೋಗವು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು ಆದರೆ ಶತ್ರುಗಳಿಗೆ ಪರಭಾರೆ ವಿಪರೀತ ಹಾನಿಯಾಗುವ ಸಂಭವ. ಪ್ರವಾಸಾದಿ ಕೆಲಸ ತೊಂದರೆಯದು. ಮೂಲದ ೪ ನೇ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೨–೧೩–೧೪–೧೫ ಅನುಕೂಲ.

ಮಕರ

ನಿಮ್ಮ ಮತ್ತು ನಿಮ್ಮ ಹೆಂಡತಿಯ ಪ್ರಕೃತಿಯ ಸಂಬಂಧದಲ್ಲಿ ಒಂದಿಲ್ಲೊಂದು ಬಗೆಯಿಂದ ತಕರಾರು ಇದ್ದುದೆ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ ಆದರೆ ಪ್ರತಿಷ್ಠೆ ಕುಂದುತ್ತ ನಡೆಯುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಮಕ್ಕಳು ಲೋಕಾಪವಾದ ಬರುವಂಥ ಕೆಲ ದುರ್ವರ್ತನೆಗಳನ್ನು ಮಾಡುವರು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ.

ತಾ. ೧೪.೧೫.೧೯. ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಅನುಕೂಲವಿದ್ದರೆ ಹೆಂಡತಿಯ ಪ್ರಕೃತಿಯಲ್ಲಿ ಕುರಕುರಿ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ತೊಂದರೆಯದು. ಉದ್ಯೋಗದಲ್ಲಿ ಪ್ರಗತಿ ಉತ್ತಮ, ಪ್ರತಿಷ್ಠೆ ಅನುಕೂಲ ಆದರೆ ದ್ರವ್ಯ ಲಾಭ ಮಾತ್ರ ಅಷ್ಟಕ್ಕಷ್ಟೇ. ಮಿತ್ರರಲ್ಲಿ ವಿರೋಧ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಸ್ಥಾವರದಲ್ಲಿ ಮಾತ್ರ ಯಾವದೊಂದು ಅನುಕೂಲ ಸಂಗತಿಯು ಸಂಭವಿಸುವ ಯೋಗ. ಪ್ರವಾಸಾದಿ ಕೆಲಸ ಹಿತಕರ ಧನಿಷ್ಠಾದ ೪ ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ ತಾ. ೧೩, ೧೬, ೧೭ ಅನುಕೂಲ.

ಮೀನ

ಪ್ರಕೃತಿ ಉತ್ತಮವಿದ್ದರೂ ಹೆಂಡತಿಯ ಕೂಡ ಸ್ವಲ್ಪ ಮತಭೇದ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ದೊಡ್ಡವರ ಮರ್ಜಿ ಸಂಪಾದಿಸುವ ಸಲುವಾಗಿ ಬೇಡಾದ ಕೆಲಸಗಳಿಗಾಗಿ ಬಹಳ ವೆಚ್ಚ ಮಾಡಬೇಕಾದ ಪ್ರಸಂಗ ಬರುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಮಿತ್ರರಲ್ಲಿಯ ಕೆಲ ಜನರು ಪ್ರತಿಪಕ್ಷಿಗಳಿಗೆ ಫಿತುರ ಅಗುವ ಸಂಭವ. ಆಪ್ತರಲ್ಲಿ ಮಂಗಲ ಕಾರ್ಯಗಳು ಸಂಭವಿಸುವವು. ಪ್ರವಾಸಾದಿ ಕೆಲಸ ಹಿತಕರ. ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೧೩, ೧೪, ೧೯ ಅನುಕೂಲ.

ಮುಂಬಯಿ ನಗರದ ಹಾಲಿನ ಪೂರೈಕೆ

(೯ನೆಯ ಪುಟದಿಂದ)

ವಾರುಗಳನ್ನು ಬೇರೊಂದು ಕೋಣೆಗೆ ಸಾಗಿಸಲಾಗುವುದು. ಇವೆಲ್ಲವುಗಳ ಸಂತಾನಾಭಿವೃದ್ಧಿಗೆಂದು, ಪ್ರತಿಯೊಂದು "ದುಗ್ಧಮಂದಿರ"ದಲ್ಲಿ ನಾಲ್ಕು ಉತ್ಕೃಷ್ಟ ಹೋರಿಗಳಿವೆ. ಅವುಗಳ ಕೂಡುವಿಕೆಗೆಂದು (Breeding) ಪ್ರತ್ಯೇಕ ಕೋಣೆಗಳಿವೆ. ಅದಲ್ಲದೆ ಆಕಳುಗಳು ನೀರಲ್ಲಿ ನಲಿದಾಡಲು ಊರ ಕೆರೆಯನ್ನು ಹುಡುಕಿಕೊಂಡು ಓಡಾಡಿ ಸುತ್ತಾಡಬೇಕೆಂದಿಲ್ಲ. ಅವುಗಳ ಸಲುವಾಗಿ ಸ್ನಾನಕ್ಕೆಂದು ಅಲ್ಲೇ ಎರಡು ಕೃತಕ ಕೆರೆಗಳಂತಹ ನೀರ ಕುಂಡಗಳಿವೆ. ಹುಲ್ಲು, ಹಿಂಡಿ, ಹತ್ತಿಕಾಳು, ಹುರುಳಿ ಮುಂತಾದ ಆಹಾರ ಪದಾರ್ಥಗಳ ಶೇಖರಣೆಗೆಂದು ನೆಲಮನೆಗಳಿವೆ. (Underground Godowns). ಜಾನುವಾರುಗಳ ಲಾಲನೆ ಪಾಲನೆಗೆಂದು ಇಪ್ಪತ್ತಾರು ಮಂದಿ ಗೋಪಾಲರು ಇದ್ದಾರೆ. ಹೈನದ ಆಕಳುಗಳಿಗೆ ಸಕಾಲದಲ್ಲಿ ಆಹಾರ, ವಿರಾಮ, ನಿದ್ರೆ ಮುಂತಾದವುಗಳನ್ನು ಕಲ್ಪಿಸಿ ಕೊಡಲಾಗಿದೆ. ಅಂದರೆ ನಮ್ಮ ಆಸ್ಪತ್ರೆಯಲ್ಲಿಯ ರೋಗಿಗಳಿಗಿಂತಲೂ ಹೆಚ್ಚಿನ ಸೌಲಭ್ಯಗಳನ್ನು ಇವುಗಳಿಗೆ ಒದಗಿಸಿಕೊಡಲಾಗುತ್ತದೆ!

ಎಮ್ಮೆ ದನಗಳ ಹಾಲನ್ನೀಗ ಕೈಯಿಂದಲೇ ಹಿಂಡುತ್ತಾರೆ. ಅದಲ್ಲದೆ ಬೇರೆ ಇನ್ನಿತರ ಕೆಲಸಗಳೂ ರೂಢಿಯಂತೆಯೇ ಜರುಗುತ್ತಿವೆ. ಆದರೆ ಇನ್ನು ಮುಂದೆ ಹಾಗಲ್ಲ. ಹಾಲು ಹಿಂಡಲು ಅಥವಾ ಕರೆಯಲು ಯಂತ್ರ, ಅದನ್ನು ಶುದ್ಧಗೊಳಿಸಲು ಯಂತ್ರ. ಕೆಲವು ದಿನಗಳ ವರೆಗೆ ಹಾಳಾಗದಂತೆ ಜೋಪಾನದಲ್ಲಿರಿಸಲುಯಂತ್ರ, ಬಾಟಲಿಗಳಲ್ಲಿ ತುಂಬಲು ಯಂತ್ರ–ಮುಂತಾಗಿ ಲಕ್ಷಗಟ್ಟಲೆ ರೂಪಾಯಿಯಷ್ಟು ಬೆಲೆ ಬಾಳುವ ಯಂತ್ರಸಾಮಗ್ರಿಗಳನ್ನು ಇಂಗ್ಲೆಂಡಿನಿಂದ ತರಿಸಲಾಗುತ್ತಿದೆ. ಅನಂತರ ಈ "ಕ್ಷೀರಪಲ್ಲಿ" ಬರಿಯ ಹಿಂದುಸ್ಥಾನದಲ್ಲಿ ಮಾತ್ರವಲ್ಲ. ಭೂಮಧ್ಯ ಸಾಗರದ ಪೂರ್ವ ಭಾಗವನ್ನೊಳಗೊಂಡು ಇಡಿಯ ಆಸ್ಯಾ ಖಂಡದ ವಲಯದಲ್ಲೇ ಅತಿ ದೊಡ್ಡ ಮತ್ತು ಉತ್ತಮ ರೀತಿಯ "ಹಾಲು ಹಳ್ಳಿ"ಯೆಂದು ಪ್ರಸಿದ್ಧವಾಗಲಿರುವದು.

ಹಸು, ಹಾಲುಗಳ ಪರೀಕ್ಷೆ

ಈ ಕ್ಷೀರಸಾಗರದಲ್ಲಿ ಪಶುಗಳ ಆರೋಗ್ಯವನ್ನು ಕಾಪಾಡಲು ಒಬ್ಬ ವೈದ್ಯನಿರುತ್ತಾನೆ. ಇವನು ಪಾಶ್ಚಾತ್ಯ ದೇಶಗಳಲ್ಲಿ ಜಾನುವಾರುಗಳ ರಕ್ಷಣೆಯನ್ನು ಯಾವ ರೀತಿಯಲ್ಲಿ ಮಾಡುವರೆಂದೆಲ್ಲ ಕಲಿತವನು; ಜಾನುವಾರುಗಳ ಬೆಳವಣಿಗೆ, ಅನಾರೋಗ್ಯ, ಕುಂದುಕೊರತೆಗಳ ವಿಷಯದಲ್ಲಿ ಸೂಕ್ತ ಸಲಹೆಗಳನ್ನು ಕೊಡುತ್ತಾನೆ. ಜಾನುವಾರುಗಳು ಏನಾದರೊಂದು ಬೇನೆಯಿಂದ ನರಳುವುವೆಂದಾದ ಕೂಡಲೇ ಆ ಜಾನುವಾರುಗಳನ್ನು ಬೇರೆಯೇ ಇಟ್ಟು, ಇತರಜಾನುವಾರುಗಳಿಗೆ ಆ ರೋಗಪ್ರಸಂಗಲುವ ಸಂಭವನಿದ್ದಲ್ಲಿ ಅವುಗಳನ್ನು ಅಪಾಯದಿಂದ ತಪ್ಪಿಸಲು ಮೈಲಿ (ದಾಳು) ಚುಚ್ಚುವ (Innoculation) ವ್ಯವಸ್ಥೆಯಿದೆ.

ಇಲ್ಲಿ ಉತ್ಪನ್ನವಾದ ಹಾಲಿನ ಗುಣದೋಷಗಳನ್ನು ಕಂಡು ಹಿಡಿಯಲು ಮತ್ತು ಹೆಚ್ಚಿನ ಪರಿಶೋಧನೆಗಳನ್ನು ಕೈಕೊಳ್ಳಲು ಸರಕಾರ ತೆರೆದ ಕೇಂದ್ರ ದುಗ್ಧ ಪರಿಶೋಧನಾಲಯವಿದೆ(Centray Dairy and Laboratore) ಅದಲ್ಲದೆ ಆಕಳುಗಳ ಸಾಕಣೆಗೆ ಬೇಕಾದ ಹುಲ್ಲು ಇತ್ಯಾದಿಗಳನ್ನು ಇಲ್ಲೇ ಬೆಳೆಸಲಿದ್ದಾರೆ. ಇಲ್ಲಿಯ ಮೂವತ್ತೆರಡು ಕ್ಷೀರಾಗಾರಗಳೂ ಕಾರ್ಯಾಚರಣೆಯನ್ನು ಪ್ರಾರಂಭಿಸಿದಾಗ ಈ ಹಳ್ಳಿಯಲ್ಲಿ ಸುಮಾರು ಎರಡು ಮೂರು ಸಾವಿರ ಜನಸಂಖ್ಯೆಯಾಗುವುದು. ಇವರೆಲ್ಲರ ಸುಖಮಯ ಬಾಳು ವ್ಯವಹಾರಗಳಿಗೆಂದು ಅಂಗಡಿ, ವಿಶ್ರಾಂತಿಗೃಹಗಳು, ಔಷಧಾಲಯ, ಆಟದ ರಂಗ ಅಥವಾ ಅಂಗಣಗಳು, ಉದ್ಯಾನವನಗಳು ಆಗಲಿವೆ ಮತ್ತು ಮನೋರಂಜನೆಗೆಂದೂ, ಶೈಕ್ಷಣಿಕವೆಂದೂ, ಹಾಲುಕೊಡುವಜಾನುವಾರುಗಳಆರೈಕೆಪೂರೈಕೆಗಳಿಗೆ ಸಂಬಂಧಿಸಿದಚಲಚ್ಚಿತ್ರಗಳನ್ನು ಒಂದು ಚಿಕ್ಕ ರಂಗಭೂಮಿಯಿಂದ ತೋರಿಸುವರು. ಆಗ ಇದನ್ನು "ನಗರ"ವೆಂದು ಕರೆಯುವಂತಾದೀತಲ್ಲವೆ?

ಕ್ಷೀರಸಾಗರಯೋಜನೆ

ಈ ನವೀನ "ಹಾಲುಹಳ್ಳಿ"ಯ ಒಂದು ವಿಭಾಗದ (Unit) ಮೊದಲನೆಯ ಉದ್ಘಾಟನಾ ಸಮಾರಂಭವನ್ನು ಘಟನಾಸಮಿತಿಯ ಅಧ್ಯಕ್ಷ ಡಾ. ರಾಜೇಂದ್ರಪ್ರಸಾದರು ಮುಂಬಯಿಗೆ ಬಂದಾಗ ನೆರವೇರಿಸಿದರು. ಸರಕಾರದ ಯೋಜನೆಯಂತೆ ಈ ಹಾಲುಹಳ್ಳಿ ಮತ್ತು ಹೊಲಗಳಲ್ಲದೆ ಇನ್ನು ಮುಂದೆ ತಳೇಗಾಂವ್ (Talegaon) ಮತ್ತು ಪಾಲ್ಘಾರ್ (Phalghar) ಎಂಬ ಸ್ಥಳಗಳಲ್ಲಿ ಸರಕಾರವು ಬೇರೆ ಹಾಲುಹಳ್ಳಿಗಳನ್ನು ನಡೆಸುವ ಆಲೋಚನೆಯಲ್ಲಿದೆ. ನಗರದಲ್ಲೀಗ ಎಷ್ಟು ಹಾಲು ಬಂದರೂ ಸಾಕಾಗುವುದಿಲ್ಲ. ಮುಂಬಯಿಯ ಸಮೀಪದ ಉಪನಗರ, ಹಳ್ಳಿಪಳ್ಳಿಗಳಿಂದಲ್ಲದೆ ರೈಲಿನಿಂದಲೂ ಗುಜರಾತಿನ ಆನಂದ ಮುಂತಾದಸ್ಥಳಗಳಿಂದಲೂ ಹಾಲುಬರುತ್ತದೆ. ಸರಕಾರದ ಯೋಜನೆಯಂತೆ ಮುಂದೊಂದು ದಿನ ಮನೆಮನೆಗಳಿಗೆ ಮುದ್ರೆಯೊತ್ತಿದ ಬಾಟಲಿಗಳಲ್ಲಿ ಹಾಲು ತುಂಬಿ ಪೂರೈಸಲಾಗುವುದು. ಅದಲ್ಲದೆ ಸರಕಾರದ ವಿತರಣಕೇಂದ್ರಗಳಿಂದ ಎಲ್ಲರಿಗೂ ಹಂಚಲಾಗುವುದು. ಗೋರೆಗಾಂವ್ ಅಥವಾ ಈ ಹಾಲುಹಳ್ಳಿಯಿಂದ ಮೋಟಾರು ಮತ್ತು ರೈಲು ಬಂಡಿಗಳಲ್ಲಿ ನಗರಕ್ಕೆ ಹಾಲು ಸಾಗಿಸುತ್ತಾರೆ. ಕ್ಷೀರಾಗಾರದಲ್ಲಿ ಹಾಲು ತೆಗೆದು (ಕರೆದು ಅಥವಾ ಹಿಂಡಿ) ಒಂದು ತಾಸಿನೊಳಗಾಗಿ ಪಟ್ಟಣದಲ್ಲಿ ತಾಜಾ ಹಾಲು ಸಿಗುವಂತಾಗುವುದು. ಅದಲ್ಲದೆ ಬೆಣ್ಣೆ, ತುಪ್ಪ, ಗಿಣ್ಣ ಮುಂತಾದ ಹೈನಪದಾರ್ಥಗಳನ್ನು ತಯಾರಿಸುವವರಿದ್ದಾರೆ. ಈ ಯೋಜನೆಯನ್ವಯ ಸರಕಾರವು ನಿಸ್ಸಂಶಯವಾಗಿ ಯಶಸ್ವಿಯಾಗಲಿದೆ. ಗುಜರಾತಿನಲ್ಲಿಯ ಗಿರನಾರಎಂಬ ಪ್ರದೇಶದಲ್ಲಿಯ ಎಮ್ಮೆ ದಿನವೊಂದಕ್ಕೆ ಒಂದುಮಣ ಹಾಲು ಕೊಡುವುದಂತೆ. ಪ್ರತಿಯೊಂದು ದುಗ್ಧಾಲಯಕ್ಕೆ ನಾಲ್ಕು ಲಕ್ಷ ರೂಪಾಯಿ ಖರ್ಚು ತಗಲುವುದಂತೆ. ಸರಕಾರವು ಸುರಿಸಿದ ಹಣ ವ್ಯರ್ಥವಾಗಲಿಕ್ಕಿಲ್ಲ: ಮುಂಬಯಿಯ ಜನತೆಯಿನ್ನು ಕಲಬೆರಕೆ ಹಾಲೆಂದು ಕಳವಳ ಪಡಬೇಕಾಗಿಲ್ಲ; ಬೇಕಷ್ಟು ಶುದ್ಧ ಮತ್ತು ಶುಚಿಯಾದ ಹಾಲಿನ ಪೂರೈಕೆಯಾಗುವುದು.

ಜಾತೀಯ ಚುನಾವಣೆಗಳ ನಿರ್ನಾಮ

ಶಾಸನ ಸಭೆಗಳ ಚುನಾವಣೆಗಳಲ್ಲಿ ಅಲ್ಪಸಂಖ್ಯ ಜಾತಿಯವರಿಗೆ ಸ್ಥಳಗಳನ್ನು ಕಾಯ್ದಿಡುವುದನ್ನು ತಿಲ್ಲಿಸಿಬಿಟ್ಟದ್ದು ಹಿಂದುಸ್ತಾನ ಸ್ವತಂತ್ರವಾದಂದಿನಿಂದ ಸಂಭವಿಸಿದ ಮಹತ್ವದ ಅನೇಕ ಸಂಗತಿಗಳಲ್ಲಿ ಒಂದಾಗಿದೆ. ಅಲ್ಪಸಂಖ್ಯ ಸಲಹೆ ಸಮಿತಿಯವರು ಘಟನಾ ಸಮಿತಿಗೆ ಒಪ್ಪಿಸಿದ ವರದಿಯಲ್ಲಿ ಈ ತತ್ವವನ್ನು ಪೂರ್ಣವಾಗಿ ಬಿಟ್ಟುಗೊಡಲು ಸಮರ್ಥವಾಗಿರಲಿಲ್ಲ. ಈಗ ಹಾಗೆ ಮಾಡುವದು ಸಾಧ್ಯವಾಯಿತೆಂಬುದನ್ನು ನೆನೆದರೆ ಸ್ವಾತಂತ್ರ್ಯ ಸಂಪಾದಿಸಿದ ಎರಡೇ ವರುಷಗಳಲ್ಲಿ ರಾಷ್ಟ್ರವು ಎಷ್ಟೊಂದು ಪ್ರಗತಿಯನ್ನು ಸಾಧಿಸಿದೆ ಎಂಬುದರ ಮನವರಿಕೆಯಾಗುವದು. ಹರಿಜನರಿಗೆ (ಪರಿಶಿಷ್ಟ ವರ್ಗದವರಿಗೆ) ಮಾತ್ರ ಹತ್ತು ವರುಷಗಳ ವರೆಗೆ ಸ್ಥಳಗಳನ್ನು ಕಾದಿಡಲಾಗಿದೆ.

ಗೊತ್ತುವಳಿಯು ಬಹ್ವಂಶದಿಂದ ಸರ್ವಾನುಮತದಿಂದ ಸ್ವೀಕೃತವಾದುದನ್ನು ಮತ್ತು ಅಲ್ಪಸಂಖ್ಯವರ್ಗದ ಅನೇಕ ಧುರೀಣರು ತಮ್ಮ ಹಾರ್ದಿಕ ಸಮಾಧಾನ ವ್ಯಕ್ತಪಡಿಸಿದುದನ್ನು ನೋಡಿದರೆ ಸದ್ಯದ ಸರಕಾರಕ್ಕೆ ಬಹಳ ಬೆಂಬಲವಿದೆಂಬುದು ಕಂಡುಬರುವದು. ಈ ಬಗೆಯ ಗೊತ್ತುವಳಿಯಾಗುವದರ ಸಂಪೂರ್ಣ ಶ್ರೇಯಸ್ಸು ಸರದಾರ ಪಟೇಲರ ವಿಧಾಯಕ ಮುತ್ಸದ್ದಿತನಕ್ಕೆ ಸಲ್ಲುವದು. ಹಿರಿಯೋಲಗದಲ್ಲಿಯ ಪ್ರತಿಯೊಂದು ಪಕ್ಷದ ಸದಸ್ಯರು ಸರದಾರರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿದ್ದುಂಟು. ಸಂಸ್ಥಾನಗಳ ವಿಲೀನೀಕರಣದ ಜೊತೆಗೆ ಸರದಾರರು ಜಾತಿಗಳ ವಿಲೀನೀಕರಣವನ್ನೂ ಸಾಧಿಸಿದರು. ಪಂಡಿತ ಜವಾಹರಲಾಲರು ಹೇಳಿದಂತೆ ಈ ಗೊತ್ತುವಳಿಯೆಂದರೆ ನಮ್ಮ ಇತಿಹಾಸದಲ್ಲಿ ಚಿರಸ್ಥಾಯಿಯಾದ ಬದಲಾವಣೆಯೆಂದು ಹೇಳಬಹುದು. ಇನ್ನು ಮುಂದೆ ಆಯಾ ಜಾತಿಯವರು ತಮ್ಮ ಹೊಣೆಗಾರಿಕೆಯನ್ನು ತಿಳಿದುಕೊಂಡು ವರ್ತಿಸಬೇಕೆಂದು ಅವರು ಹೇಳಿದ್ದನ್ನು ಎಲ್ಲರೂ ನೆನೆದುಕೊಳ್ಳಬೇಕಾಗಿದೆ.

"ನಮ್ಮ ಭವಿತವ್ಯದ ಮೇಲೆ ಬಹಳ ಮಟ್ಟಿಗೆ ಪರಿಣಾಮಕಾರಿಯಾಗಬಲ್ಲ ಈ ಮಹತ್ವದ ಗೊತ್ತುವಳಿಯನ್ನು ಶಾಸನ ಸಭೆ ಸ್ವೀಕರಿಸುವ ಈ ಸಮಯದಲ್ಲಿ ನಾವೆಲ್ಲರೂ ಅಲ್ಪಸಂಖ್ಯರು ಬಹುಸಂಖ್ಯರು, ಆಯಾ ಗುಂಪು ಪಕ್ಷಪಂಗಡಗಳು ಮತ್ತು ವ್ಯಕ್ತಿಗಳ ಸ್ನೇಹ ಸಂಪಾದನೆಯನ್ನು ಸಾಧಿಸುವ ರೀತಿಯಲ್ಲಿ ವರ್ತಿಸಿ ಭಾವೀ ಪ್ರಗತಿಯನ್ನು ಸಾಧಿಸುವಾ.

"ಮಹಾತ್ಮಾ ಗಾಂಧಿಯವರು ಪ್ರತಿಯೊಂದು ವ್ಯಕ್ತಿ ಇಲ್ಲವೆ ಗುಂಪಿನಲ್ಲಿ ಸದ್ಭಾವನೆಯನ್ನು ತಾಳಿ ಅವರಿಂದ ಒಳಿತನ್ನು ಪಡೆದು ಶಕ್ತಿಮೀರಿ ಒಳಿತನ್ನು ಮಾಡಲು ಅವರನ್ನು ಪ್ರವರ್ತಿಸಿದ್ದುಂಟು. ಪ್ರಗತಿಯನ್ನು ಸಾಧಿಸುವ ಮಾರ್ಗ ಇದೊಂದೇ ಆಗಿದೆ. ಶಾಸನಸಭೆಯೆದುರಿಗಿರುವ ಈ ಮಸೂದೆಯ್ತೆಂದರೆ ಎಲ್ಲರ ವಿಶೇಷತಃ ಬಹುಸಂಖ್ಯ ಜಾತೀಯ ಜನರ ನಿಷ್ಠೆಯ ಮರೆಗಲ್ಲಾಗಿದೆ ಎಂದು ಅಯ್ಯಂಗಾರರು ನಮಗೆ ಎಚ್ಚರಿಕೆ ಕೊಟ್ಟಿದ್ದಾರೆ. ಏಕೆಂದರೆ ಅವರು ಉಳಿದವರೊಡನೆ ಔದಾರ್ಯದಿಂದ ನ್ಯಾಯ್ಯವಾಗಿ ನಡೆಯಬೇಕಾಗುತ್ತದೆ. ಈ ಬಗೆಯ ನಿಷ್ಠೆಯಿಂದ ನಾವೆಲ್ಲರೂ ಬಾಳೋಣ."

ಸರದಾರ ಪಟೇಲರು ಅಲ್ಪಸಂಖ್ಯರ ಬಗ್ಗೆ ವಿಶೇಷತಃ ಹರಿಜನರ ಬಗ್ಗೆ ಬಹುಸಂಖ್ಯ ಜಾತಿಯವರು ಮಾಡಬೇಕಾದ ಕರ್ತವ್ಯದ ಬಗ್ಗೆ ಎಚ್ಚರಿಕೆ ಕೊಟ್ಟರು. ಹರಿಜನರ ಬಗ್ಗೆ ಮಾಡಬೇಕಾದ ಕರ್ತವ್ಯವನ್ನು ಕುರಿತು ಅವರು ಹೀಗೆ ಹೇಳಿದರು.

"ಮದರಾಸಿನ ಹರಿಜನ ಸದಸ್ಯರಾಗಿರುವ ಶ್ರೀ ನಾಗಪ್ಪಾ ಇವರು ಹಿಂದುಸ್ತಾನವು ತಮ್ಮದೆಂದು ಹೇಳಿದ್ದರೂ ತಮ್ಮ ಮನೆಯೆಂದು ಹೇಳಿಕೊಳ್ಳುವಂಥ ಯಾವುದೊಂದು ಸ್ಥಳವು ಹರಿಜನರಿಗಿದೆಯೆ? ನಾಗಪ್ಪನವರು ಹಾಗೆ ಹೇಳಿದ್ದಕ್ಕೆ ನನಗೊಳ್ಳೆ ಅಭಿಮಾನ. ಆದರೆ ಒಂದೇ ಸವನೆ ಹಸ್ತಿಕ್ಕಲ್ಪಡುತಿರುವ ಆ ಬಡ ಜನರ ಗತಿಯೇನು? ಅವರಿನ್ನೂ ನಮ್ಮ ರಕ್ಷಣೆಯಲ್ಲಿ ಸುರಕ್ಷಿತರಾಗಿರುವದಿಲ್ಲ. ಪುಣೆಯ ಒಡಂಬಡಿಕೆಯನ್ವಯ ನಾವವರಿಗೆ ವಚನಕೊಟ್ಟಿದ್ದೇವೆ. ನಾವು ಆ ವಚನದಂತೆ ನಡೆದುಕೊಂಡಿರುವೆವೋ? ನಾವು ಅಪರಾಧಿಗಳಾಗಿರುವೆವೆಂಬುದನ್ನು ಒಪ್ಪಲಿಕ್ಕಬೇಕು. ದೇಶದ ಇತರ ಭಾಗಗಳಿಂದ (ಪಾಕಿಸ್ತಾನಕ್ಕೆ ಇದು ಅನ್ವಯಿಸುವದೆಂಬುದು ಸುಸ್ಪಷ್ಟ) ಸಾವಿರಾರು ಜನ ಹರಿಜನರು ಇಲ್ಲಿಗೆ ತಿರುಗಿ ಬರಬಯಸುತ್ತಾರೆ. ಆದರೆ ಅವರಿಗೆ ಹಾಗೆ ಮಾಡಗೊಡಲಾಗುವದಿಲ್ಲ. ದುರ್ದೈವದಿಂದ ನಾವವರಿಗೆ ಸಹಾಯಮಾಡಲು ಸಮರ್ಥರಾಗಿಲ್ಲ. ಹರಿಜನ ವರ್ಗದವರ ದುಃಸ್ಥಿತಿ ಹೀಗಿದೆ."

ಈ ಮಹತ್ತ್ವದ ಕಾರ್ಯವನ್ನು ಸಾಧಿಸುವಲ್ಲಿ ಸಹಕರಿಸಿದ್ದಕ್ಕಾಗಿ, ಅಲ್ಪಸಂಖ್ಯ ವರ್ಗದವರನ್ನಭಿನಂದಿಸುತ್ತ ಅವರು ಈ ಇತಿಹಾಸ ಪ್ರಸಿದ್ಧ ಮಾತುಗಳನ್ನಾಡಿದರು.

"ನಿಮಗೆ ಕೊಡಲಾದ ಸೌಕರ್ಯಗಳ ಬಗ್ಗೆ ನೀವು ಉಪಕಾರವನ್ನು ಸ್ಮರಿಸುತ್ತಿದ್ದರೂ ನಾನು ನಿಮಗೆ ಬಹಳ ಉಪಕಾರಿಯಾಗಿದ್ದೇನೆ. ಏಕೆಂದರೆ ಈ ದೇಶದ [illegible] ಆಳಿದು ಶಾಂತಿ ಮತ್ತು ಸಹ್ಯಾದ್ರಿಯ [illegible] ವಾಗಿದೆ.

"ಹಿಂದುಸ್ತಾನವೀಗ ಖಂಡಿಕೃತವಾಗ[illegible] ವಿಹೀನತೆಯಿಂದ ಬಳಲುತಿದೆ. ಮೊದಲು ನಾವು ಅದರ ನಾಳನಾಳಗಳಲ್ಲಿ ರಕ್ತವನ್ನು ಹಾಕಬೇಕಾಗಿದೆ. ದೇಶವನ್ನು ಅಭಿವೃದ್ಧಿಪಡಿಸಿ ಭವಿಷ್ಯತ್ತಿನ ಭವ್ಯ ಕಳಹರಿ[illegible].

"ನಮ್ಮ ಘಟನೆಯಲ್ಲಿದ್ದ ತೊಡಲಿಸಕಲಂಕವನ್ನು ತೆಗೆದುಹಾಕಲು ನಾವಿಂದು ಸಮರ್ಥರಾದುದಕ್ಕಾಗಿ ನನಗೆ ಸಮಾಧಾನವೆನಿಸುತ್ತದೆ ಮತ್ತು ನಾವಿಂದು ಪರಮಾತ್ಮನ ದಯೆಯಿಂದ ಮತ್ತು ಜಗಜ್ಜಾಲಕನ ಅನುಗ್ರಹದಿಂದ ನಿಜವಾದ ಜಾತ್ಯತೀತ ಪ್ರಜಾರಾಜ್ಯದ ಅಡಿಗಲ್ಲನ್ನಿಡುತ್ತೇವೆ. ಈ ರಾಜ್ಯದಲ್ಲಿ ಪ್ರತಿಯೊಬ್ಬನಿಗೆ ಸಮವಾದ ಸ್ಥಾನಮಾನ ಮತ್ತು ಸೌಕರ್ಯಗಳಿವೆ. ನಮ್ಮ ಘಟನೆಯಲ್ಲಿ ಹೇಳಿದಂತೆ ಎಲ್ಲ ಜನರಿಗೆ ನ್ಯಾಯ್ಯವನ್ನು ದಯಪಾಲಿಸುವಂಥ ಜಾಣತನ ಮತ್ತು ಧೈರ್ಯವನ್ನು ಪರಮಾತ್ಮನು ನಮಗೆ ಅನುಗ್ರಹಿಸಲಿ."

ವರ್ಧಾ ೩೦-೫-೪೯ —ಕಿ. ಘ. ಮಶ್ರೂವಾಲಾ

ಮನಭೂಮ

ಅತುಲಚಂದ್ರ ಘೋಷರ ಬಗ್ಗೆ ನಾನು ಒಳ್ಳೇಪ್ರಶಂಸನಾಪರ ಉದ್ಗಾರ ವ್ಯಕ್ತಮಾಡಿದ ಬಗ್ಗೆ ಬಿಹಾರದ ಕೆಲವು ಪತ್ರಿಕೆಗಳಲ್ಲಿ ನನ್ನನ್ನು ಟೀಕಿಸಲಾಗಿದೆ. ಅವರ ಬಗ್ಗೆ ಈ ರೀತಿಯ ಉದ್ಗಾರಗಳು ಕೆಲವು ವರ್ಷಗಳ ಹಿಂದೆ ಸರಿಹೋಗುತ್ತಿದ್ದವೆಂದೂ ಆದರೆ ಈಗ ಅವರು ತೀರ ಅಧೋಗತಿಗೆ ಇಳಿದಿದ್ದು ಇಂಥ ಪ್ರಶಂಸಾಪರ ಉದ್ಗಾರಕ್ಕೆ ಅನರ್ಹರಾಗಿರುವರೆಂದೂ ನನಗೆ ಸೂಚಿಸಲಾಗಿದೆ. ೧೯೪೭-೪೮ ರಲ್ಲಿ ನಾನು ಅವರ ನಿಕಟ ಸಂಬಂಧದಲ್ಲಿದ್ದೆನು. ಆಗ ನಾವಿಬ್ಬರೂ ಪ್ರತಿದಿವಸ ಭೆಟ್ಟಿಯಾಗುತ್ತಿದ್ದೆವು. ಈ ಅವಧಿಯಲ್ಲಿ ಅವರ ಬಗ್ಗೆ ನನ್ನಲ್ಲಿ ಮೊದಲು ಇದ್ದ ಗೌರವಾದರಗಳು ಕಡಿಮೆಯಾಗುವ ಬದಲು ಹೆಚ್ಚು ಧೃಢವಾಗಿ ಬೆಳೆದವು. ೧೫ ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಅವರು ಒಮ್ಮೆಲೆ ಅಧೋಗತಿಗೆ ಇಳಿದಿರುವರೆಂದು ಹೇಳುವದನ್ನು ನಂಬುವದು ಕಷ್ಟ.

ಮನುಭೂಮವನ್ನು ಬಂಗಾಲಕ್ಕೆ ಸೇರಿಸಬೇಕೆಂದು ಚಳವಳಿ ಮಾಡುವ ಬಂಗಾಲಿಗಳ ಒಂದು ಗುಂಪು ಇರುವದನ್ನು ನಾನು ಬಲ್ಲೆ. ಈ ಗುಂಪಿನವರಿಂದಲೂ ಬಿಹಾರಿಗಳಿಂದಲೂ ಈ ಜಿಲ್ಲೆಯಲ್ಲಿ ವಾಸಿಸುವ ಜನರಲ್ಲಿ ಬಂಗಾಲಿ ಭಾಷೆಯ ಜನರೆಷ್ಟು? ಬಿಹಾರಿ ಭಾಷೆಯ ಜನರೆಷ್ಟು? ಇದನ್ನು ವಿವರಿಸುವ ಅಂಕಿಸಂಖ್ಯೆಗಳ ಪ್ರಕಟನೆಗಳು ವೆಗ್ಗಳವಾಗಿ ನನ್ನ ಕಡೆಗೆ ಬಂದಿದ್ದು ಎರಡೂ ಗುಂಪಿನವರೂ ಈ ಪ್ರಕಟನೆಗಳನ್ನು ಕೂಲಂಕಷವಾಗಿ ಓದಿ ತಿಳಿದುಕೊಳ್ಳಲು ನನಗೆ ಸೂಚಿಸಿದ್ದಾರೆ.

ನನ್ನ ಸ್ಪಷ್ಟವಾದ ಅಭಿಪ್ರಾಯವು ಇಂತಿದೆ.

ಮಹಾರಾಷ್ಟ್ರೀಯರಲ್ಲಿ ಮತ್ತು ಗುಜರಾತಿಗಳಲ್ಲಿ ಡಾಂಗ ಮತ್ತು ಠಾಣಾಗಳ ವಿಷಯದಲ್ಲಿ ಇರುವ ವಾದ, ಅಥವಾ ಬೆಳಗಾವಿಯ ಬಗ್ಗೆ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಇರುವ ವಾದ, ಇವುಗಳಂತೆಯೇ ಮನಭೂಮದ ಬಗ್ಗೆ ಬಿಹಾರ ಬಂಗಾಲಗಳಲ್ಲಿ ವಾದವಿದೆ ಎಂದು ನನ್ನ ಅಭಿಪ್ರಾಯ. ಇವೆಲ್ಲವೂ ಸಮ್ಮಿಶ್ರ ಪ್ರದೇಶಗಳು. ಅವು ಯಾವ ಪ್ರಾಂತಕ್ಕೇ ಸೇರಿದರೂ ಅವುಗಳ ಆಡಳಿತೆಯನ್ನು ಸಮ್ಮಿಶ್ರ ಪ್ರದೇಶಗಳೆಂದೇ ನಡೆಸಬೇಕಾಗುವದು.

ಪಂಡಿತರು ಹಿಂದೆನಡೆಸಿದ ಸಂಶೋಧನೆಗಳಿಗೆ ನಾನು ಅಷ್ಟೊಂದು ಬೆಲೆ ಕೊಡುವದಿಲ್ಲ. ಈಗ ಪ್ರಚಲಿತ ವಸ್ತುಸ್ಥಿತಿಯೇ ಮಹತ್ವದ್ದು. ಅದನ್ನು ನಿರ್ಮಾಣ ಮಾಡಿದ ರೀತಿ ಏನೇ ಇರಲಿ. ಹಿಂದಿಯಲ್ಲಿ ಬರೆದ ಲೇಖ ಅಥವಾ ಭಾಷಣಕ್ಕಿಂತ ಬಂಗಾಲಿಯಲ್ಲಿ ಬರೆದ ಲೇಖ, ಅಥವಾ ಭಾಷಣಗಳನ್ನು ಹೆಚ್ಚು ಸುಲಭವಾಗಿ ತಿಳಿದುಕೊಳ್ಳುವ ಜನರಿಲ್ಲ ಬಂಗಾಲಿಗಳು. ಅದರ ವಿರುದ್ಧವಾಗಿ ಬಂಗಾಲಿ ಲೇಖನ ಭಾಷಣಕ್ಕಿಂತ ಹಿಂದಿಯಲ್ಲಿಯ ಲೇಖನ ಭಾಷಣ ಸುಲಭವಾಗಿ ತಿಳಿದುಕೊಳ್ಳುವವರು ಆಡಳಿತೆಯ ದೃಷ್ಟಿಯಿಂದ ಬಿಹಾರಿಗಳೆಂದೇ ಗ್ರಹಿಸಬೇಕು.

ಆದಿವಾಸಿ ಜನರಿಗೆ ಲಿಪಿಯುಳ್ಳದ ತಮ್ಮದೇ ಆದ ಭಾಷೆಇದೆ ಅವರ ಮೇಲೆ ಬಂಗಾಲಿ ಅಥವಾ ಹಿಂದಿ ಭಾಷೆಯನ್ನು ಹೇರಲಾಗಿದೆ. ಅವರು ಬಂಗಾಲಿ ಜನರ ನಿಕಟ ಸಂಪರ್ಕದಲ್ಲಿದ್ದರೆ ಬಂಗಾಲಿಯನ್ನೂ ಬಿಹಾರಿಗಳ ಸಂಪರ್ಕದಲ್ಲಿದ್ದವರಾಗಿದ್ದರೆ ಹಿಂದಿಯನ್ನೂ ತಿಳಿದುಕೊಳ್ಳಬಲ್ಲವರಾಗಿರುವರು. ಈಗ ಇರುವ ನಿಜಸ್ಥಿತಿಯನ್ನು ಒಪ್ಪಿಕೊಳ್ಳಬೇಕಲ್ಲದೆ ಅದರಲ್ಲಿ ವ್ಯತ್ಯಾಸ ಮಾಡುವ ಸಾಹಸ ಮಾಡಬೇಕಿಲ್ಲ. ಆದಿವಾಸಿಗಳಿಗೆ ಹೆಚ್ಚು ಚನ್ನಾಗಿ ತಿಳಿಯುವ ಭಾಷೆಯನ್ನು ತಮ್ಮ ಭಾಷೆಯನ್ನಾಗಿ ಮಾಡಿ ಕೊಳ್ಳಲು ಅವಕಾಶವಿರಬೇಕು. ಅವರಿಗೆ ತಮ್ಮ ಭಾಷೆಯನ್ನು ಬದಲಿಸುವ ಇಚ್ಛೆಯಾದರೆ ಸ್ವೇಚ್ಛೆಯಿಂದಲೇ ಅವರು ಅದನ್ನು ಬದಲಾಯಿಸಬೇಕು. ಹಿಂದೀ ಅಥವಾ ಹಿಂದುಸ್ತಾನಿ ಇದು ಎಲ್ಲರಿಗೂ ಸಾಮಾನ್ಯವಾಗಿ ಇರುವ ಭಾಷೆ. ಬಂಗಾಲದಲ್ಲಿ ಬಂಗಾಲಿಗಳೂ ಇದು ಕಲಿಯಬೇಕಾದ ಭಾಷೆ. ಆದುದರಿಂದ ಈ ಭಾಷೆಯನ್ನು ಕಲಿಸುವ ವ್ಯವಸ್ಥೆ ಇರಲೇಬೇಕಾದುದು ಅವಶ್ಯ. ಆದರೆ ಮನುಭೂಮದಲ್ಲಿರುವವರೆಲ್ಲರೂ ತಮ್ಮ ನೆರೆಹೊರೆಯವರ ಭಾಷೆಯಾದ ಬಂಗಾಲಿಯನ್ನು ಮುಖ್ಯ ಭಾಷೆ ಎಂದಾಗಲೀ ಅಥವಾ ಉಪ ಮುಖ್ಯ ಭಾಷೆ ಎಂದಾಗಲೀ ಕಲಿಯುವದು ಯೋಗ್ಯವಾದುದು.

ಬಂಗಾಲ ಪ್ರಾಂತದಲ್ಲಿ ಮನಭೂಮವನ್ನು ಸೇರಿಸುವ ಪ್ರಶ್ನೆಯನ್ನು ಎತ್ತಕೂಡದು. ಅತುಲಬಾಬುಗಳೂ ಅವರ ಮಿತ್ರರೂ ತಾವು ಮನಭೂಮವನ್ನು ಬಂಗಾಲ ಪ್ರಾಂತದಲ್ಲಿ ಸೇರಿಸುವ ಬಗ್ಗೆ ಆಂದೋಲನ ನಡೆಸಿಲ್ಲವೆಂದು ನನಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಅವರು ಈ ನಿಲುವೆಯನ್ನು ಬದಲಿಸಿದ್ದಾದರೆ ಅವರು ಈ ರಾಷ್ಟ್ರೀಯ ಭಾವನೆಯನ್ನು ತ್ಯಜಿಸಿ ಪ್ರಾಂತೀಯ ಭಾವನೆಗೆ ಒಳಗಾದರೆಂದು ನಾನು ಹೇಳದಿರಲಾರೆ. ಪಾಟಿಣಾ ಅಥವಾ ಚಂಪಾರಣ್ಯದಲ್ಲಿಯ ಬಿಹಾರಿಗಳಷ್ಟೇ ಉಜ್ವಲವಾದ ಬಿಹಾರದ ಪ್ರೇಮವು ಅವರಲ್ಲಿ ಜಾಗೃತವಾಗಿರಬೇಕಾದುದು ಅಗತ್ಯ. ಅವರು ತಮ್ಮಲ್ಲಿ ಬಿಹಾರ ಪ್ರಾಂತದ ಬಗ್ಗೆ ಅಚಲವಾದ ನಿಷ್ಠೆ ಇರುವದಾಗಿ ಹೇಳುತ್ತಿರುವದನ್ನು ನಾವು ನಂಬಲೇಬೇಕು. ಬಿಹಾರ ಪ್ರಾಂತದಲ್ಲಿ ನಿಷ್ಠೆಯುಳ್ಳವರಾಗಿರಬೇಕೆಂಬ ಒಂದು ಶರ್ತಿಗೆ ಒಳಪಟ್ಟು ಉಳಿದ ವಿಷಯಗಳ ಬಗ್ಗೆ ಇರುವ ಬಂಗಾಲಿಗಳಲ್ಲಿರುವ ನ್ಯಾಯವಾದ ಭೀತಿಯನ್ನು ಕಡಿಮೆ ಮಾಡಲೇಬೇಕು.

ಈ ವಿಷಯವನ್ನು ಪರಿಶೀಲಿಸಿ ವರದಿ ಮಾಡಲು ಕಾಂಗ್ರೆಸ ಕಾರ್ಯ ಸಮಿತಿಯವರು ಒಂದು ಸಮಿತಿಯನ್ನು ನೇಮಿಸಿದ್ದಾಗಿ ತಿಳಿಯುತ್ತದೆ. ಈ ಸಮಿತಿಯವರು ಕೊಡುವ ನಿರ್ಣಯವು ಏನೇ ಇರಲಿ; ಅದಕ್ಕೆ ಎರಡೂ ಪಕ್ಷದವರು ಒಪ್ಪಿಕೊಂಡು ಅದರಂತೆ ಮನಃಪೂರ್ವಕವಾಗಿ ವರ್ತಿಸತಕ್ಕದ್ದು. ಡಾ. ಪಿ. ಸಿ. ಘೋಷ. ಶ್ರೀಮತಿ ಸುಚೇತಾ ಕೃಪಲಾನಿ, ಶ್ರೀ ಜಗಜೀವನರಾಮ, ಮತ್ತು ಶ್ರೀ ಪ್ರಜಾಪತಿ ಮಿಶ್ರ ಇವರು ತಮ್ಮ ಸಲಹೆಗಳಿಂದ ಮನಭೂಮ ಜಿಲ್ಲೆಯ ಜನತೆಯ ಹಾಗೂ ರಾಷ್ಟ್ರದ ಹಿತದ ದೃಷ್ಟಿಯಿಂದ ಯಾವುದು ಯೋಗ್ಯವೆಂದು ತೋರುವದೋ ಅದೇ ನಿರ್ಣಯವನ್ನೇ ಕೊಡುವರೆಂಬ ವಿಶ್ವಾಸವು ಪ್ರತಿಯೊಬ್ಬರಲ್ಲಿ ದೃಢವಾಗಿರತಕ್ಕದ್ದು.

ವರ್ಧಾ —ಕಿ. ಘ. ಮಶ್ರೂವಾಲಾ

[illegible]

ರಾಷ್ಟ್ರೀಯ [illegible]

[illegible] ಶಕ್ತಿಯಲ್ಲಿಯೂ [illegible] ತಿಳಿದು ಬರುವ ಸಾಧನಗಳ [illegible]

ಇಂದು ಜಗತ್ತಿನ [illegible] ಪ್ರಥಮ. [illegible] ಕೊಡಬೇಕಾದ [illegible] ಶಕ್ತಿಯನ್ನು ಸ್ಥಿರಗೊಳಿಸ[illegible] ಇಂಥ ಕ್ರಯಶಕ್ತಿ ಸ್ಥಿರವಾಗಿದ್ದ[illegible] ಚಲಾವಣೆ ಪದ್ಧತಿಯಿಂದ ದೇಶವು [illegible] ಗಳಿಗೆ ಗುರಿಯಾಗುವ [illegible] ಪದ್ಧತಿಯಿಂದ ಉಂಟಾಗುವ [illegible] ಬಂತೆ, ಹೊಂದರೆ ಇವುಗಳಿಂದ [illegible] ವದು. ನಾವು ಕೊಳ್ಳುವ [illegible] ಬೆಲೆಯು ಏರಿರುವ [illegible] ಚಲಾವಣೆ ಧೋರಣದ [illegible] ಸ್ಥಿರವಾದ ಕ್ರಯಶಕ್ತಿಯು [illegible]

೧ ನಿಶ್ಚಿತ ಕ್ರಯಶಕ್ತಿಯುಳ್ಳ [illegible] ವಣೆ ಪದ್ಧತಿಯಿಂದ [illegible] ನೌಕರರಿಗೆ ತಾವು ಪಡೆಯುವ [illegible] ಸಂಬಳದ ಪ್ರಮಾಣದಂತೆಯೇ [illegible] ಯುವ ಪದಾರ್ಥಗಳು [illegible] ಯುವ ಭರವಸೆಯುಂಟಾ[illegible] ಆಹಾರ, ಬಟ್ಟೆ, ವಸತಿ [illegible] ಗಳನ್ನು ದೊರಕಿಸಲು ಸಂಬಳ [illegible] ಕೆಂದು ಸಂಪುಹೂಡುವ ಪ್ರಸಂಗವೇ [illegible] ಗದು.

೨ ನಿಶ್ಚಿತ ಕ್ರಯಶಕ್ತಿ[illegible] ಪದ್ಧತಿಯಿಂದ ಪಿಂಚಣಿದಾರರಿಗೂ [illegible] ನೌಕರರಿಗೂ ತಮ್ಮ ಚಿಕ್ಕ ಉಳ್ಪನ್ನದ [illegible] ಣಕ್ಕನುಸರಿಸಿ ಮೊದಲಿನಂತೆಯೇ [illegible] ಗಳು ದೊರೆಯುವ ಭರವ[illegible] ಹೋಲಿಕೆಗೆ [illegible] ವಿದ್ದರೂ ಕ್ರಮೇಣ ತಾವು ಕೊಳ್ಳುವ [illegible] ಗಳು ಕಡಿಮೆಯಾಗಿ ಅವರು [illegible] ಇಳಿಯುವದು ತಪ್ಪುವದು.

೩ ರೈತನೂ ನಿಶ್ಚಿತ ಕ್ರಯಶಕ್ತಿ[illegible] ದಿಂದ ಬರುವ ಆದಾಯವು [illegible] ಗಾಗವೆ ಉಳಿದು ತಾನು ಕೊಳ್ಳುವ [illegible] ಗಳ ಬಗ್ಗೆ ಮಾಡಬೇಕಾದ ವೆಚ್ಚವು [illegible] ಉಳಿಯುವದರಿಂದ ತನ್ನ ಆದಾಯ [illegible] ಅಂದಾಜು ಸರಿಯಾಗಿ ಮಾಡಿಕೊಂಡು [illegible] ಸಾಗಿಸಲು ಸಮರ್ಥನಾಗುವನು.

೪ ಕಂಟ್ರಾಕ್ಟದಾರರು, ಕಾರಖಾನೆ[illegible] ವ್ಯಾಪಾರಿಗಳು. ಪೇಟೆಯಲ್ಲಿ [illegible] ತಗಳಾಗುವದರಿಂದ ಅಗಬಹುದಾ[illegible] ಹಾನಿಯ ಚಿಂತೆಯಿಂದ ಮುಕ್ತ[illegible] ಅನಿಶ್ಚಿತ ಬೆಲೆಯಿದ್ದರೆ ತಾವು [illegible] ಮಾಡಿದ ಅಂದಾಜಿನಂತೆ ಕೊಡಗಿ[illegible] ವಲಕ್ಕಿಂತ ಹಿಂದಿನಿಂದ [illegible] ಹೆಚ್ಚಿನ ಬಂಡವಲ ಕೊಡ[illegible] ಗವೂ ಒದಗಲಾರದು.

೫ ಸರಕಾರಕ್ಕಾದರೂ [illegible] ಕ್ತಿಯು ಹಣದ ಚಲಾವಣೆ [illegible] ದಿಂದ ಬರುವ ಉತ್ಪನ್ನವು [illegible] ಬಂದು ಸರಕಾರವು ಆಡಳಿತ [illegible] ಸುಸೂತ್ರವಾಗಿ ಮಾಡಲು [illegible] ವದು.

ಮೇಲಿನ ಕಾರಣಗಳಿಂದ [illegible] ಧನವಾಗಬಹುದಾಗಲು ನಿಶ್ಚಿತ ಕ್ರ[illegible] ನಾಣ್ಯ ಚಲಾವಣೆಯು ಒಳಿತೆ[illegible] ಬರಬೇಕಾದುದು ಅಗತ್ಯ[illegible] ದವು ಹಣದ ಕ್ರಯಶಕ್ತಿ[illegible] ಒಕ್ಕಲತನ, ವಾಣಿಜ್ಯ, [illegible] ಇವುಗಳ ಪ್ರಗತಿ ಸಾಧ್ಯ[illegible]

[illegible]

ಹಿಮಾಲಯದ ತಪ್ಪಲಿನಲ್ಲಿ

ಲೇಖಕ:— ಶ್ರೀ. ಪಾವಿಗ ಕೃಷ್ಣಮೂರ್ತಿ

ನವದೆಹಲಿಯಿಂದ ಕಾರಿನಲ್ಲಿ ಕೇವಲ ಮೂರು ತಾಸಿನ ಹಾದಿ ದೆಹರಾಡೂನ್. ಅಲ್ಲಿಗೆ ಪಾಲಿವ್ಯಾಲದ ಮೇಲೆ ಹಾಯ್ದು ರೈಲೂ ಬರುತ್ತದೆ. ದೆಹಲಿಯಿಂದ ಸಂಜೆ ೭ ಕ್ಕೆ ಬಿಟ್ಟ ರೈಲು ಬೆಳಗ್ಗೆ ೮—೩೦ ಘಂಟೆಗೆ ಡೂನಿಗೆ ಬರುತ್ತದೆ. ಇಲ್ಲಿಯ ಜನ ದೆಹರಾಡೂನನ್ನು ಪ್ರೀತಿಯಿಂದ 'ಡೂನ್' ಎಂದು ಕರೆಯುತ್ತಾರೆ. ಇದಲ್ಲದೆ ದೆಹಲಿಯಿಂದ ಬಸ್ಸುಗಳೂ ಡೂನಿಗೆ ಬರುತ್ತವೆ.

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ನಿಮಿತ್ತ ಸಾವಿರಾರು ಜನ ಬಂದು ಇಲ್ಲಿಯ ಪ್ರಕೃತಿ ಸೌಂದರ್ಯ ಸವಿದು ಹೋದರು. ನೈಸರ್ಗಿಕವಾಗಿ ಬಂದ ಸೌಂದರ್ಯದ ಜೊತೆಗೆ ಇತಿಹಾಸದ ಮಹಿಮೆಯೂ ಡೂನನ್ನು ಆವರಿಸಿಕೊಂಡಿದೆ. ಪಂಚಪಾಂಡವರ ಗುರುಗಳಾದ ಆಚಾರ್ಯ ದ್ರೋಣರು ಇಲ್ಲಿಯೇ ವಾಸವಾಗಿದ್ದರಂತೆ. ಆ ಕಾರಣವೇ ಡೂನಿಗೆ 'ದ್ರೋಣ' ವೆಂಬ ಹೆಸರಿದ್ದು ಈಗ ದೆಹರಾಡೂನಾಗಿದೆ. ಸಮುದ್ರ ಮಟ್ಟದಿಂದ ೨೫೦೦ ಅಡಿ ಎತ್ತರದಲ್ಲಿದ್ದು, ಇಲ್ಲಿಗೆ ೩೦ ಮೈಲು ದೂರದಲ್ಲಿ ಗಂಗೆ, ಯಮುನೆ ನದಿಗಳು ಹರಿಯುತ್ತವೆ. ಇಲ್ಲಿಯ ಹವೆ ತಂಪಾಗಿದ್ದು ಸಾವಿರಾರು ಜನ ಇಲ್ಲಿ ತಮ್ಮ ಬೇಸಿಗೆಯ ವಿಹಾರ ಮಾಡಿಕೊಳ್ಳುತ್ತಾರೆ. ಇಲ್ಲಿಂದ ೨೨ ಮೈಲು ದೂರದಲ್ಲಿಯೇ ಪ್ರಪಂಚ ಪ್ರಸಿದ್ಧವಾದ "ಮಸ್ಸೂರಿ" ಇರುವದು. ೬ ಮೈಲು ದೂರದಲ್ಲಿ "ಸಹಸ್ರಧಾರ" ಎನ್ನುವ ಇನ್ನೊಂದು ಸ್ಥಳವಿದೆ.

ಅ. ಭಾ. ಕಾಂಗ್ರೆಸ್ ಸಮಿತಿಯ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ ಎರಡು ದಿನಗಳ ವರೆಗೆ ನಡೆಯಿತು. ಮೊದಲನೆಯದಿನ ಪೂರ್ತಿಯಾಗಿ "ಕಾಮನ ವೆಲ್ತ ನಿರ್ಣಯ"ದ ಚರ್ಚೆಯಾಯಿತು. ಚರ್ಚೆಯಲ್ಲಿ ಬಿಸಿಯೂ ಇರಲಿಲ್ಲ. ಸದಸ್ಯರಲ್ಲಿ ಆಸಕ್ತಿಯೂ ಇರಲಿಲ್ಲ. ಅಂತೂ ಅದು ಪಾಸಾಯಿತು. ಎರಡನೆಯದಿನ ಗುಪ್ತ ಅಧಿವೇಶನ ನಡೆಯಿತು. ಪತ್ರಿಕಾಪ್ರತಿನಿಧಿಗಳಿಗಾಗಲಿ, ಅಥವಾ ಪ್ರೇಕ್ಷಕರಿಗಾಗಲಿ ಪ್ರವೇಶವಿರಲಿಲ್ಲ. ಮಂತ್ರಿಗಳ ಕಾರ್ಯನಿರ್ವಹಣೆ, ಕಾಂಗೆಸ್ ಕಾರ್ಯಕರ್ತರ ಜವಾಬ್ದಾರಿ ಮುಂತಾದವುಗಳ ಮೇಲೆ ಚರ್ಚೆ ನಡೆಯಿತು. ಡಾ. ರಾಜೇಂದ್ರ ಪ್ರಸಾದ, ಆಚಾರ್ಯ ಕೃಪಲಾನಿ, ಪಂಡಿತ ನೆಹರು, ಡಾ. ಪಟ್ಟಾಭಿ, ಚರ್ಚೆಯಲ್ಲಿ ಭಾಗವಹಿಸಿದ್ದರು.

ಕರ್ನಾಟಕದ ದೃಷ್ಟಿಯಿಂದ ಈ ಅಧಿವೇಶನ ಕೊಂಚ ಅಪ್ರತ್ಯಕ್ಷವಾಗಿ ಮಹತ್ವದ್ದಾಗಿ ಕಂಡಿತು. ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ಶ್ರೀ ನಿಜಲಿಂಗಪ್ಪನವರ ಮುಖಂಡತ್ವದಲ್ಲಿ ಕನ್ನಡ ಏಕೀಕರಣದ ಬಗ್ಗೆ ನಿಯೋಗಗೋಷ್ಠಿ ತಂದಿದ್ದರು. ಅದರಲ್ಲಿ ನಾಡಿನ ನಾಯಕರಾದ ಶ್ರೀ ದಿವಾಕರರು, ಶ್ರೀ ಕರಮರಕರರು, ಶ್ರೀ ವೀರನಗೌಡರು, ಶ್ರೀ ಕಾರಂತರು, ಶ್ರೀ ಮಲ್ಲನಗೌಡರು ಪಾಟೀಲರು, ದೊಡ್ಡಮೇಟಿಯವರು ಮತ್ತು ಟಿ. ಸುಬ್ರಮಣ್ಯಂ ಇದ್ದರು. ಸರದಾರ ವಲ್ಲಭಭಾಯಿ ಪಟೇಲ್, ಡಾ. ರಾಜೇಂದ್ರ ಪ್ರಸಾದ, ಮತ್ತು ಕಾಂಗ್ರೆಸ್ ಕಾರ್ಯಸಮಿತಿಯ ಸದಸ್ಯರನ್ನು ಭೇಟಿಮಾಡಿ ಏಕೀಕರಣ ತಕ್ಷಣ ಆಗುವ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಕರಮರಕರರೇ ನಿಯೋಗದ ಮನವಿಯನ್ನು ಒಪ್ಪಿಸಿ ಚಾಕಚಕ್ಯತೆಯಿಂದ ತೀಕ್ಷ್ಣವಾದ ಶಬ್ದಯೋಜನೆಯಲ್ಲಿ ವಾದಗಳನ್ನು ಪ್ರಾರಂಭಿಸಿ ಏಕೀಕರಣದ ಬಗ್ಗೆ ಹೃದಯಂಗಮವಾಗಿ ವಿವರಿಸಿದರು. ದೆಹರಾಡೂನ್ ಅಧಿವೇಶನದಲ್ಲಿ ಒಂದು ಹೆಜ್ಜೆ ಮುಂದೆ ಹೋದಂತಾಗಿದೆ ಕನ್ನಡನಾಡು.

ಬಿಡಾರಗಳ ವ್ಯವಸ್ಥೆ

ಸ್ವಾಗತ ಸಮಿತಿಯವರು ಏರ್ಪಾಡುಗಳನ್ನು ಬಹು ವ್ಯವಸ್ಥಿತ ರೀತಿಯಿಂದ ಮಾಡಿದ್ದರು. ದೆಹರಾಡೂನಿನ ಕಾಂಗ್ರೆಸ್ ನಾಯಕರಾದ ಶ್ರೀ. ಮಹಾವೀರ ತ್ಯಾಗಿಯವರೇ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ದೆಹರಾಡೂನಿನಲ್ಲಿ ಅರಣ್ಯಸಂಶೋಧನಸಂಸ್ಥೆ Forest Research Institute ಎನ್ನುವ ಸಂಸ್ಥೆ ಇದೆ. ಈ ಕಟ್ಟಡ ಏಶಿಯಾಖಂಡದಲ್ಲೆಲ್ಲ ಬಹು ದೊಡ್ಡದಾದ ಕಟ್ಟಡವಂತೆ. ನನಗೂ ಹಾಗೆಯೇ ಕಾಣಿಸಿತು. ಇನ್ನೊಂದು ದೊಡ್ಡ ಅರಣ್ಯಶಾಸ್ತ್ರದ ಕಾಲೇಜು Forest College ಇದೆ. ಈ ಸಂಶೋಧನ ಸಂಸ್ಥೆಯ ಸಭಾಂಗಣದಲ್ಲೇ ಅ. ಭಾ. ಕಾಂ. ಸಭೆ ನಡೆದದ್ದು. ಅರಣ್ಯಶಾಸ್ತ್ರದ ಕಾಲೇಜಿನಲ್ಲಿ ಸದಸ್ಯರಿಗಾಗಿ ಬಿಡಾರ ಮಾಡಿದರು. ಭಾರತ ಸರಕಾರದ ಮಂತ್ರಿಗಳಿಗೆ ಬೇರೆ ಬೇರೆಯ ಮಹಲುಗಳನ್ನು ವ್ಯವಸ್ಥೆ ಮಾಡಿದ್ದರು. ಪಾಟಿಯಾಲಾ ಹೌಸಿನಲ್ಲಿ ಶ್ರೀ ದಿವಾಕರರಿಗಾಗಿ ಬಿಡಾರ ಮಾಡಿದ್ದರು. ಇವರ ಜೊತೆಗೆ ಸಂಯುಕ್ತಪ್ರಾಂತದ ಮುಖ್ಯ ಮಂತ್ರಿ ಶ್ರೀ ಗೋವಿಂದ ವಲ್ಲಭಪಂತ ಶ್ರೀ ಶಂಕರರಾವ ದೇವ ಬೊಂಬಾಯಿಯ ಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರ, ಸರಕಾರದ ಮುಖ್ಯ ಪ್ರತೋದ ಶ್ರೀ ಸತ್ಯನಾರಾಯಣ ಸಿಂಹ ಇವರೂ ಬಿಡಾರ ಮಾಡಿದ್ದರು.

ಭಾರತದ ಉಪಮುಖ್ಯಮಂತ್ರಿ ಸರ್ದಾರ್ ಪಟೇಲರು ಬೇಸಿಗೆಯ ದಿನಗಳನ್ನು ಕಳೆಯಲು ಇಲ್ಲಿಯೇ ಬಂದು ಪ್ರವಾಸಿಕರ ಬಂಗಲೆಯಲ್ಲಿ ತಂಗಿದ್ದಾರೆ. ಹೋದವರ್ಷ ಮಸ್ಸೂರಿಯಲ್ಲಿ ತಂಗಿದ್ದರು. ಸರ್ದಾರರು ದೆಹರಾಡೂನಿಗೆ ಬಂದಿದ್ದಾರೆಂದರೆ ಭಾರತದ ಅರ್ಧ ರಾಜಕೀಯ ವರ್ಗ ಅಲ್ಲಿಗೇ, ಅವರ ಜೊತೆಗೇ ಬಂದಂತೆ! ಅದುದರಿಂದ ಇತರ ಪ್ರಾಂತಗಳಿಂದ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಕೇಳಲು ದೆಹಲಿಗೆ ಬಂದವರು ದೆಹರಾಡೂನಿನ ಯಾತ್ರೆಯನ್ನೂ ಮಾಡಬೇಕಾಗುತ್ತದೆ. ಮಧ್ಯ ಇದೆಯಲ್ಲ—ಹರಿದ್ವಾರ—ಋಷಿಕೇಶ—ಸರ್ದಾರರನ್ನು ಭೇಟಿ ಮಾಡಿದ ಮೇಲೆ.

ಸಹಸ್ರಧಾರ

ದೆಹರಾಡೂನಿಗೆ ೬ ಮೈಲು ದೂರದಲ್ಲಿ "ಸಹಸ್ರಧಾರ"ವೆಂಬ ಸ್ಥಳವಿದೆ. ಹಿಮಾಲಯ ಪರ್ವತದ ತಪ್ಪಲಿನ ಸಣ್ಣ ಗುಡ್ಡವೊಂದರ ಮಧ್ಯ ಸಹಸ್ರಧಾರೆಯಾಗಿ ಮೇಲಿನಿಂದ ಗಂಗೆ ಬೀಳುತ್ತದೆ. ಅಲ್ಲೊಂದು ಶ್ರೀದೇವಸ್ಥಾನವಿದೆ. ಬೆಟ್ಟದ ಕಲ್ಲಿನಲ್ಲಿಯೇ ಆ ದೇವಸ್ಥಾನವನ್ನು ಕೊರೆದಿದ್ದಾರೆ. ಹಿಂದೆ ಅಲ್ಲೊಬ್ಬ ಸನ್ಯಾಸಿಯು ವಾಸಮಾಡುತ್ತಿದ್ದನಂತೆ. ಸಹಸ್ರಧಾರವನ್ನು ನೋಡಲು ಹೋಗುವಾಗ ಆ ಝರಿಯ ಮೇಲಿರುವ ಒಂದು ಸೇತುವನ್ನು ದಾಟಬೇಕು. ಅನಂತರ ಧಾರಾಕಾರವಾಗಿ ಮಳೆ ಬಂದಂತೆ ಬೀಳುತ್ತದೆ ನೀರು. ಅಲ್ಲಿಂದ ಮುಂದೆ ಗುಡ್ಡದಲ್ಲಿ ಒಂದು ಗವಿ ಇದೆ. ಕಲ್ಲಿನ ಕೊಳಾಯಿಯೂ ಇದೆ. ಅಲ್ಲಿ ಯಾವಾಗಲೂ ಮೊಳಕಾಲುಮಟ್ಟ ನೀರು ನಿಂತಿರುತ್ತದೆ. "ಸಹಸ್ರಧಾರ" ನೋಡುವಂಥ ಸ್ಥಳ. ಸಂಯುಕ್ತಪ್ರಾಂತ ಸರ್ಕಾರದವರು ಇತ್ತೀಚಿಗೆ ಒಂದು ಸಣ್ಣ ಹಾದಿಯನ್ನು ಮಾಡಿದ್ದಾರೆ. ಕಾರು ಗುಡ್ಡದ ಕೆಳಗಿನ ವರೆಗೂ ಹೋಗುವುದು.

ಸಹಸ್ರಧಾರದ ಎದುರಿಗೆ ಗಂಧಕೋತ್ಸಗಳು Sulphar Springs ಎಂಬ ಸರೋವರಗಳಿವೆ. ಗುಡ್ಡದ ಒಳಗೆ ಇರುವ ಗಂಧಕದ ಅದಿರಿನೊಳಗಿಂದ ನೀರು ಹಾಯ್ದುಬಂದು ಸರೋವರವನ್ನು ಸೇರುತ್ತದೆ. ಕಾಹಿಲೆ ಬಂದ ಜನ ಇಲ್ಲಿ ಹೆಚ್ಚಾಗಿ ಸ್ನಾನ ಮಾಡುತ್ತಾರೆ. ಗಂಧಕದ ವಾಸನೆ ಹೊಡೆಯುತ್ತಿರುತ್ತದೆ ಯಾವಾಗಲೂ. ಸಹಸ್ರಧಾರಕ್ಕೆ ಹೋಗುವ ಗುಡ್ಡದ ಮೇಲೆ ದಾರಿ ನಡೆಯುತ್ತಿರುವಾಗ ನಮಗೊಬ್ಬ ಮಾದರಿಯ ಹಿಂದುಸ್ತಾನದವ ಸಿಕ್ಕಿದ. ಅತನ ಹೆಸರು ಮಜಭೂತ್ ಬಾಲಕಿಶನ್. ಅತ ನಾಲ್ಕುದಿನಗಳಿಂದ ದಾರಿ ನಡೆಯುತ್ತಾ ದೆಹಲಿಯಲ್ಲಿ ಇರುವ ಒಬ್ಬನೇ ಮಗನನ್ನು ನೋಡಲು ಹೊರಟಿದ್ದ. ಅತ ಗಂಗೋತ್ರಿಯಿಂದ ಹೊರಟಿದ್ದನಂತೆ. ನಮ್ಮ ಜೊತೆಯಲ್ಲಿದ್ದ ಹಿಂದಿನ ಕೇಂದ್ರ ಶಾಸನಸಭಾ ಸದಸ್ಯರಾದ ಶ್ರೀ ಕರಮರಕರರು ಅಲ್ಲಿಯೇ ಪೂರಕ ಪ್ರಶ್ನೆಗಳನ್ನು ಪ್ರಾರಂಭಮಾಡಿಬಿಟ್ಟರು ಅರ್ಧಘಂಟೆಯ ವರೆಗೆ. ಪಾಪ! ಹಳೆಯದು ನೆನಪಾಗಿರಬೇಕು. ಶ್ರೀ ಕರಮರಕರರು ಕುಂಬಾ "ಮೋಜಿ"ನ ಮನುಷ್ಯರು, ಹುರುಪಿನ ಮಾತುಗಾರರು. ಎಂಥವರನ್ನಾದರೂ ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಳ್ಳಬಲ್ಲರು. ಮಾತು ಮಾತಿಗೆ ಅವರು "ಇದು ಮೋಜು" ಎನ್ನುತ್ತಾರೆ. ಅದು ಅವರ ಅಭ್ಯಾಸ. ಅಮೇರಿಕ, ಯುರೋಪುಗಳನ್ನು ತಿರುಗಿ ಬಂದ ಅವರು ಸಹಸ್ರಧಾರವನ್ನು ಒಳ್ಳೆಯ ವಿಹಾರ ಧಾಮವನ್ನಾಗಿ ಮಾಡದಿದ್ದುದನ್ನು ನೋಡಿ ತುಂಬ ವ್ಯಥೆ ಪಟ್ಟರು. ನನಗನ್ನಿಸಿತು. ಶ್ರೀ ಕರಮರಕರರನ್ನು ಹಿಂದುಸ್ತಾನ ಸರ್ಕಾರದ "ಮೋಜಿ"ನ ಮಂತ್ರಿಗಳನ್ನಾಗಿ ಏಕೆ ಮಾಡಬಾರದು? ಎಂದು. ಒಂದುದಿನ ಮಂತ್ರಿ ಆದಾರು! ನಾವು ಸಹಸ್ರಧಾರ ಬಿಟ್ಟು ಮನೆಗೆ ಬಂದಾಗ ಸಂಜೆ ೭ ಆಗಿತ್ತು.

ಮಸ್ಸೂರಿಗೆ ಪ್ರಯಾಣ

ಹೈದರಾಬಾದಿನಿಂದ ಅಲ್ಲಿಯ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ಅಲ್ಲಿಯ ಸಮಸ್ಯೆಗಳನ್ನು ಚರ್ಚಿಸಲು ಬಂದಿದ್ದರು. ಸರ್ದಾರರ ಕೂಡ ಎರಡು ತಾಸಿನ ವರೆಗೆ ಚರ್ಚೆ ನಡೆಸಿದರು. ಮರುದಿನ ಅವರು ಮಸ್ಸೂರಿಗೆ ಹೋಗುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಶ್ರೀ ದಿವಾಕರ ರಾಯರೂ ಅಲ್ಲಿಗೆ ಹೋಗುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು. ಅವರ ಇದ್ದಕ್ಕಿದ್ದ ಹಾಗೆಯೇ ಅವರಿಗೆ ಮಲೇರಿಯಾ ಜ್ವರ ಬಂದಿತು. ಶಿರಸಿಯ ಕಡೆ ಒಂದು ವಾರ ಪ್ರವಾಸ ಹೋಗಿದ್ದರಲ್ಲ! ಶ್ರೀ ಕರಮರಕರರು ಹಿಂದಿನ ದಿನ ಕರ್ನಾಟಕದ ಸಪ್ತಋಷಿ ನಿಯೋಗದ ಜೊತೆಗೆ ಮಸ್ಸೂರಿಗೆ ಹೋಗಿ ಬಂದಿದ್ದರು. ಅದುದರಿಂದ ಅವರನ್ನು ಶ್ರೀದಿವಾಕರರಲ್ಲಿ ಬಿಟ್ಟು ನಾನು, ಶ್ರೀ ದಿವಾಕರರ ಮಗ ಅನಂತ! ಹೈದರಾಬಾದಿನ ಸ್ವಾಮಿಯವರ ಕೂಡ ಮಸ್ಸೂರಿಗೆ ಪ್ರಯಾಣ ಮಾಡಿದೆವು.

"ಮಸ್ಸೂರಿ" ಇಂಗ್ಲೀಷರು ಇಲ್ಲಿಗೆ ಬಂದು ತಮಗಾಗಿ ಕಟ್ಟಿಕೊಂಡ ಆರೋಗ್ಯಧಾಮ. ಅಲ್ಲಿ ಮಾಲ್ ಎಂಬ ರಸ್ತೆ ಇದೆ. ಅಲ್ಲಿ ಭಾರತೀಯರಾರನ್ನೂ ಇಂಗ್ಲೀಷರು ಬಿಡುತ್ತಿರಲಿಲ್ಲವಂತೆ.

ಹಿಂದೆ ೧೦೦೦೦ ಯುರೋಪಿಯನ್ನರು ಅಲ್ಲಿದ್ದರು. ಈಗ ಸುಮಾರು ೪೦೦೦ ಇದ್ದಾರೆ. ರಾಜಮಹಾರಾಜರುಗಳಿಗಷ್ಟೇ ಇರಲಿಕ್ಕೆ ಸಾಧ್ಯವಾದ ಮಸ್ಸೂರಿಯಲ್ಲಿ ಈಗ ಸಾಮಾನ್ಯ ಜನರೂ ಕಡಿಮೆ ಖರ್ಚಿನಲ್ಲಿ ಕೆಲವು ದಿನ ಇದ್ದು ಬರಬಹುದು.

ಸುಮಾರು ೬೫೦೦ ಅಡಿ ಸಮುದ್ರ ಮಟ್ಟಕ್ಕೆ ಎತ್ತರವಿದೆ. ದೆಹರಾಡೂನ್ ಬಿಟ್ಟು ಆರು ಮೈಲು ಹೋಗುವುದರೊಳಗೆ ತಂಪಾದ ಗಾಳಿ ಬೀಸಲು ಪ್ರಾರಂಭವಾಗುವುದು. ಬೆಟ್ಟಗಳ ಮಧ್ಯದಲ್ಲಿಯೇ ಹಾಯ್ದು ಹೋಗುತ್ತದೆ ದಾರಿ. ಆಗ ನಮ್ಮ ಆಗುಂಬೆಯ ನೆನಪಾಗುತ್ತದೆ. ೨೦ ಮೈಲು ದಾರಿ ನಡೆಯಲು ಸುಮಾರು ಒಂದುಕಾಲು ಗಂಟೆ ಬೇಕಾಗುತ್ತದೆ. ಸಂ. ಪ್ರಾಂತ ಸರಕಾರದ ಅತಿಥ್ಯ ಸ್ವಾಮಿಯವರಿಗೆ. ಆ ಕಾರಿನ ಸಾರಥಿ ಸುಮಾರು ಸಾವಿರ ಸಲ ಮಸ್ಸೂರಿಗೆ ಹೋಗಿ ಬಂದಿದ್ದ. ನಮ್ಮನ್ನು ಪ್ರಯಾಸವಿಲ್ಲದೆ ಹೆದರಿಕೆಯಾಗದಂತೆ ಸಾರಥ್ಯ ನಡೆಸುತ್ತ ಮೇಲಕ್ಕೊಯ್ದ. ಇಲ್ಲಿ ಏಕಮುಖ ಪ್ರಯಾಣ (One way traffic) ಅದ್ದರಿಂದ ಮೇಲೆ ಹೋಗುವ ಮತ್ತು ಮೇಲಿನಿಂದ ಕೆಳಗೆ ಬರುವ ಕಾರು, ಬಸ್ಸುಗಳ ಕಾಲವನ್ನು ನಿಶ್ಚಿತ ಮಾಡಿದ್ದಾರೆ. ದೆಹರಾಡೂನಿನಿಂದ ಹೋಗಬೇಕಾದರೆ ಮೊದಲನೆಯ ದ್ವಾರ ಸಿಕ್ಕುತ್ತದೆ. ಅಲ್ಲಿ ಕಾರಿನಲ್ಲಿ ಕುಳಿತವರಿಗೆ ೨ ರೂ. ತಲೆಗಂದಾಯ, ಬಸ್ಸಿನಲ್ಲಿ ಕುಳಿತವರಿಗೆ ೧-೮-೦ ರೂ. ಹೀಗೆ ವಸೂಲು ಮಾಡುತ್ತಾರೆ.

ಹಿಮಾಲಯವಿಹಾರ

ನಾವು ಮಸ್ಸೂರಿಯನ್ನು ತಲ್ಪಿದಾಗ ಬೆಳಿಗ್ಗೆ ೯-೨೦ ಗಂಟೆ. ಕಾರು ಬೆಟ್ಟದ ತುದಿಯ ವರೆಗೂ ಹೋಗುವುದಿಲ್ಲ. ಸ್ವಲ್ಪ ದೂರ ನಡೆಯ ಬೇಕಾಗುವುದು ಇಲ್ಲವೆ ನರವಾಹನ (ರಿಕ್ಷಾ)ಗಳಿವೆ. ಕುದುರೆಗಳೂ ಇವೆ. ಇಲ್ಲಿಯ ಒಳ್ಳೆಯ ಹೊಟೇಲುಗಳೆಲ್ಲ ಇಂಗ್ಲಿಶ್ ಫ್ಯಾಶನ್ನಿನವು. ನಾವು ಸವಾಯ ಹೋಟೆಲಿನಲ್ಲಿ ಹೋಗಿಳಿದೆವು. ಬೆಳಿಗ್ಗೆ ೧೦ ರಿಂದ ಸಂಜೆ ೩ ರ ವರೆಗೆ ಒಂದು ಕೋಣೆಗೆ ೮ ರೂ. ಕೊಡಬೇಕೆಂದ. ಬೆಳಗಿನ ಉಪಾಹಾರಕ್ಕೆ ಅಲ್ಲಿಯೇ ನಿಂತೆವು. ನಾವು ನಾಲ್ಕು ಜನರಿದ್ದೆವು. ಸಜ್ಜಿಗೆಯ ಪಾಯಸ, ಎರಡು ಅಂಬೋಡೆ, ಬ್ರೆಡ್ಡಿನ ತುಣುಕು, ಕಾಫಿ, ಇಷ್ಟಕ್ಕೆ ನಾಲ್ವರಿಗೆ ೧೦ ರೂ. ಚಾರ್ಜ ಮಾಡಿದ. ಕೂಡಲೆ ನಾವು ಮಧ್ಯಾಹ್ನ ಅಲ್ಲಿಗೆ ಊಟಕ್ಕೆ ಬರುವುದಿಲ್ಲವೆಂದು ಹೇಳಿದೆವು.

ಅಲ್ಲಿಂದ ನಡೆದುಕೊಂಡು ಬಹು ಎತ್ತರವಾದ (Gun-Hill) ಕೋವಿಗುಡ್ಡಕ್ಕೆ ಹೋದೆವು. ಸ್ವಾಮಿಯವರು ಮಾತ್ರ ರಿಕ್ಷಾದಲ್ಲಿಯೇ ಬಂದರು. ಕೋವಿಗುಡ್ಡದಿಂದ ಮಸ್ಸೂರಿ, ಲ್ಯಾಂಡನ್ ಮುಂತಾದ ಪ್ರದೇಶಗಳು, ಹಿಮಾಲಯ ಪರ್ವತದ ಶ್ರೇಣಿಗಳು, ಕೇದಾರನಾಥ, ಬದರೀನಾಥದ ಶಿಖರಗಳು ಮುಂತಾದವು ಕಂಡವು. ಮಧ್ಯಾಹ್ನ ೧ ಗಂಟೆಯ ಬಿಸಿಲಿದ್ದರೂ ತಣ್ಣನೆಯ ಗಾಳಿ ತುಂಬ ಆಹ್ಲಾದಕರವಾಗಿ ಬೀಸುತ್ತಿತ್ತು. ಅಲ್ಲಿಂದ ಕೆಳಗಿಳಿದು ಬಂದು ಪ್ಲಾಜಾ ಹೋಟೆಲಿನಲ್ಲಿ ಐಸ್‌ಕ್ರೀಂ ತಿಂದೆವು. ಒಂದೊಂದಕ್ಕೆ ೧ ರೂ. ಸ್ವಾಮೀಜೀಯವರು ಮಾತ್ರ ವಿಶ್ರಾಂತಿ ತೆಗೆದುಕೊಳ್ಳಲು ಕೊಠಡಿಗೆ ಹೊರಟು ಹೋದರು. ನಾವು ಅಲ್ಲಿಯೇ ಸುತ್ತಾಡುತ್ತಾ ಕೆಲವು ಸುಂದರ ದೃಶ್ಯಗಳ ಛಾಯಾಚಿತ್ರಗಳನ್ನು ಹಿಡಿದೆವು.

ಮಧ್ಯಾಹ್ನದ ಊಟಕ್ಕೆ ಒಂದು ಮಧ್ಯಮ ತರಗತಿಯ ಭಾರತೀಯ ಭೋಜನಾಲಯದಲ್ಲಿ ಗೊತ್ತು ಮಾಡಿದ್ದೆವು. ಅತ ಸೊಗಸಾದ ಹುಳಿ, ಅನ್ನ, ಮೊಸರು, ಚಟ್ನಿ, ಪಲ್ಯ, ಚಪಾತಿ ಕೊಟ್ಟ. ಊಟ ಮಾಡಿಕೊಂಡು ಮಧ್ಯಾಹ್ನ ಮೂರು ಗಂಟೆಗೆ ಪುನಃ ದೆಹರಾಡೂನಿಗೆ ಹಿಂತಿರುಗಿದೆವು.

ಭಾರತಕ್ಕೆ ಸ್ವಾತಂತ್ರ್ಯ ಬಂದಂದಿನಿಂದ ಯುರೋಪಿಯನ್ ಜನಾಂಗ ಬಹುಕಡಿಮೆಯಾಗಿ ಈಗ ಮಸ್ಸೂರಿಯಲ್ಲಿ ಹೋಟೆಲುಗಳೇ ಹೆಚ್ಚಾಗಿಬಿಟ್ಟವೆ. ಆ ಕಾರಣದಿಂದ ದರಗಳು ಇಳಿದು ಹೋಗಿವೆ.

ನಾಲ್ಕು ಗಂಟೆಯ ವೀಕ್ಷಣೆಯ ವಿಹಾರಕ್ಕಿಂತ ನಾಲ್ಕು ದಿನ ನಿಂತರೆ ಮಸ್ಸೂರಿ ಮಸ್ಸೂರಿಯಾಗಿ ತೋರುವುದು!

---

* ೧೭೯೨ ಎಂಬುದು ಒಂದು ಸಂಖ್ಯೆಯಲ್ಲ. ಫ್ರಾನ್ಸಿನ ಕಾಲವ್ಹಿಯರ್ಸಿನಲ್ಲಿ ವಾಸಿಸುತ್ತಿದ್ದ ಒಂದು ಕುಟುಂಬದ ಹೆಸರು. ಅಲ್ಲಿ ನಾಲ್ಕು ಜನ ಗಂಡುಮಕ್ಕಳಿದ್ದರು. ಅವರಿಗೆ ತಿಂಗಳುಗಳ ಹೆಸರಿಡಲಾಯಿತು: ಜನವರಿ ೧೭೯೨, ಫೆಬ್ರುವರಿ ೧೭೯೨, ಮಾರ್ಚ ೧೭೯೨ ಮತ್ತು ಎಪ್ರಿಲ್ ೧೭೯೨ ಎಂದು. ಮಾರ್ಚ-೧೭೯೨ ಎಂಬವನು ಸೆಪ್ಟಂಬರ್ ೧೮೦೪ ರಲ್ಲಿ ಕೈಲಾಸವಾಸಿಯಾದನು.

೧೦೦೦ ರೂಪಾಯಿ ಬಕ್ಷೀಸು

ಈ ಕೆಳಗಿನ ಔಷಧಿಗಳಲ್ಲಿ ಗುಣವಿಲ್ಲೆಂದು ಸಿದ್ಧಮಾಡಿಕೊಟ್ಟಲ್ಲಿ ೧೦೦೦ ರೂ. ಇನಾಮು

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ, ಬೆಳಗಾವ

ನಪುಂಸಕತ್ವಾರಿ ಗುಳಿಗೆ

(ಷಂಡತ್ವವಿನಾಶಕ ಗುಳಿಗೆಗಳು, ಕಿಮ್ಮತ್ತು ೫ ರೂ. ಅ. ವೆ. ಬೇರೆ)

ಮಿತಿ ಮೀರಿದ ಕಾಮುಕ ಜೀವನ, ಸ್ವಪ್ನಾವಸ್ಥೆ, ಮುಷ್ಟಿಮೈಥುನದ ಪರಿಣಾಮ ಹಾಗು ಅನೈಸರ್ಗಿಕ ಅಭ್ಯಾಸ ಮತ್ತು ಧಾತುಕ್ಷೀಣತೆ ಮುಂತಾದ ಯಾವದೇ ಕಾರಣದಿಂದ ಬಂದ ನಪುಂಸಕತ್ವ, ಇಂದ್ರಿಯ ಶಿಥಿಲತೆ ನಾಶ ಮಾಡಿ ನವಜೀವನ ಮತ್ತು ಹೊಸ ಪುರುಷತ್ವ, ಪ್ರಾಪ್ತ ಮಾಡಿ ಕೊಡುತ್ತಿದೆ. ಈ ಔಷಧ ಸೇವನೆಯಿಂದ ನಿರ್ಬಲ ಮತ್ತು ಶಿಥಿಲವಾದ ನರಗಳನ್ನು ಸಶಕ್ತವನ್ನಾಗಿ ಮಾಡಿ ೧।೮ ಕಡಕಿ ನಾಶವಾಗಿ ವೀರ್ಯ ವೃದ್ಧಿಯಾಗುವದು. ಪಚನಶಕ್ತಿ ಸುಧಾರಿಸಿ ಜಠರಾಗ್ನಿ ಉಜ್ವಲ ಮಾಡುತ್ತದೆ. ಬದ್ಧಕೋಷ್ಠ, ಅಜೀರ್ಣ, ಅಪಚನಾದಿ ವಿಕಾರಗಳನ್ನು ದೂರ ಮಾಡಿ ನಿಯಮಿತ ಮಲಶುದ್ಧಿ ಮಾಡುತ್ತದೆ. ಶಾರೀರಕ ಮತ್ತು ಮಾನಸಿಕ ಅಶಕ್ತತೆಯನ್ನು ಹೋಗಲಾಡಿಸಿ ಜ್ಞಾನತಂತು ಸತೇಜವನ್ನಾಗಿ ಮಾಡಿ ನವಜೀವನ ಪ್ರಾಪ್ತಮಾಡಿ ಕೊಡುತ್ತದೆ. ಎಷ್ಟೋ ಔಷಧಿಗಳನ್ನು ತೆಗೆದುಕೊಂಡು ನಿರಾಶರಾದ ಪುರುಷರು ಸನ್ ೧೯೩೫ ರಿಂದ ಈ ಔಷಧದಿಂದ ಏಳು ದಿವಸಗಳಲ್ಲಿ ಪೂರ್ಣ ಗುಣ ಹೊಂದಿರುವರು. ಈ ವಿಷಯವಾಗಿ ಆದ ಎಲ್ಲ ಪತ್ರವ್ಯವಹಾರವನ್ನು ಗುಪ್ತವಾಗಿರಿಸಲ್ಪಡುವದು. ಅನುಪಾನ ಪತ್ರಿಕೆ ಔಷಧದ ಕೂಡ ಪಥ್ಯ ಏನೂ ಇಲ್ಲ.

ಪತ್ತೆ— ವೈದ್ಯರಾಜ ವಿ. ಬಿ. ಸಿದನಾಳ

ಮನೆ ನಂಬರ ೧೩೮೯ (ಕ. ವೀ.) ಬಸವಣಗಲ್ಲಿ, ಬೆಳಗಾವಿ

ಯಶವಂತ ಕನ್‌ಫೆಕ್‌ಶನರಿ ವರ್ಕ್ಸ್ ಲಿಮಿಟೆಡ್

(೨ನೇ ಪುಟದಿಂದ ಮುಂದರಿದುದು)

ಶೇರುಗಳ ತರಗತಿ

ಶೇಅರು ಭಾಂಡವಲನ್ನು (೧) ಆರ್ಡಿನರಿ ಶೇಅರು ಹಾಗೂ (೨) ರಿಡಿಮೇಬಲ್ ಕ್ಯುಮ್ಯುಲೇಟಿವ್ಹ ಪ್ರಿಫರನ್ಸ ಶೇಅರ ಹೀಗೆ ಎರಡು ವರ್ಗಗಳಲ್ಲಿ ವಿಭಾಗಿಸಲಾಗಿದೆ. ಲಾಭ ಹಂಚುವಿಕೆಯು ಯಾವದೇ ವರ್ಷದಲ್ಲಿ ರಿಡೀಮೇಬಲ್ ಪ್ರಿಫರನ್ಸ ಶೇರ ಹೋಲ್ಡರರಿಗೆ, ಅವರು ಸಂದಾಯ ಮಾಡಿದ ರಕಮಿನ ಮೇಲೆ ಪ್ರತಿವರುಷ ೧೦೦ ಕ್ಕೆ ೫ರಂತೆ ದರದ ಕ್ಯುಮ್ಯುಲೇಟಿವ್ಹ ಪ್ರಿಫರನ್ಸಿಯಲ್ ಡಿವಿಡೆಂಡ ದೊರೆಯುವದಕ್ಕಾಗಿ, ಹಾಗೂ ಅದರಂತೆ ಕಂಪನಿ ನಿಲ್ಲಿಸುವದಾದರೆ, ಬಂಡವಾಳ ತಿರುಗಿಕೊಡುವ ಬಗ್ಗೆ ಅವರ ಅಗ್ರ ಹಕ್ಕು ಉಳಿಯುವದು.

ಮತದಾನದ ವಿಷಯದಲ್ಲಿ ಎರಡೂ ತರಗತಿಯ (ಭಾಗಿದಾರರಿಗೆ) ಪಾಲುಗಾರರಿಗೆ ಸರಿಸಮಾನವಾದ ಅಂದರೆ ಒಂದು ಶೇಅರಿಗೆ, ಮತನೋಂದಾಯಿಸುವ ಸ್ಥಳದಲ್ಲಿ ಒಂದೇ ಮತ ಕೊಡುವ ಹಕ್ಕು ಇರುತ್ತದೆ.

ಮತನೋಂದಣಿಯ ನಿರ್ಬಂಧ

ಯಾವನೊಬ್ಬ ಪಾಲುಗಾರನು ಸ್ವಂತಕ್ಕಾಗಿ ತೆಗೆದುಕೊಂಡ ಕಂಪನಿಯ ಶೇಅರುಗಳ ವಿಷಯದಲ್ಲಿ ಯಾವದೇ ಸ್ವರೂಪದ ಇಲ್ಲವೆ ಬೇಡಿಕೆಯ ರಕಮು ಇಲ್ಲವೆ ಸ್ವಂತ ಅವನ ಕಡೆಗಾಗಲಿ, ಬೇರೆ ಯಾವನೊಬ್ಬ ವ್ಯಕ್ತಿಯ ಸಂಗಡ ಅವನ ಕಡೆಗೆ ಯಾವದೇ ಕಾರಣದ ಸಲುವಾಗಿ ಯಾವದೇ ಸ್ವರೂಪದ ರಕಮು ಬರುವದಿದ್ದರೆ, ಮತ್ತು ಅವನು ಅದನ್ನು ಕಂಪನಿಗೆ ಕೊಡುವದಿದ್ದಲ್ಲಿ, ಅವನಿಗೆ ಕಂಪನಿಯ ಯಾವದೇ ಸರ್ವ ಸಾಧಾರಣ ಸಭೆಗೆ ಉಪಸ್ಥಿತನಿರಲು ಬರಲಾರದು, ಇಲ್ಲವೆ ಮತನೋಂದಣಿಯ ಸ್ಥಳದಲ್ಲಿ ಯಾವದೇ ಪ್ರಶ್ನದ ಮೇಲೆ ಸ್ವತಃ ಅವನಿಗೆ ಇಲ್ಲವೆ ಪ್ರಾಕ್ಸಿ ಮುಖಾಂತರ ಇಲ್ಲವೆ ಎರಡನೆಯವರ ಪ್ರಾಕ್ಸಿ ಎಂದು ಮತವನ್ನು ನೊಂದಾಯಿಸಲು ಬರಲಾರದು. ಇಲ್ಲವೆ ಗಣಸಂಖ್ಯೆ (ಎಣಿಕೆ) ಯ ವಿಷಯದಲ್ಲಿ ಪ್ರಶ್ನವುಂಟಾದರೆ, ಆತನ ಅಸ್ತಿತ್ವದವು ಮಾನ್ಯಮಾಡಲಿಕ್ಕೆ ಬರಲಾರದು.

ಶೇಅರು ಎರಡನೆಯವರ ಹೆಸರಿನಿಂದ ಮಾಡುವ ಕುರಿತು ನಿರ್ಬಂಧ

ಯಾವನೊಬ್ಬನು ತನ್ನ ಶೇಅರುಗಳನ್ನು ಎರಡನೇಯವರ ಹೆಸರಿನಿಂದ ಬದಲಾಯಿಸಿ ಕೊಟ್ಟ ವ್ಯವಹಾರವನ್ನು ನಾಮಂಜೂರ ಮಾಡುವ ನಿರ್ಣಯಾತ್ಮಕ ಸಂಪೂರ್ಣ ಅಧಿಕಾರವು ಸಂಚಾಲಕರಿಗೆ ಇದೆ. ಅಲ್ಪ ವಯಸ್ಸಿನ ಇಲ್ಲವೆ ಬುದ್ಧಿ-ಭ್ರಷ್ಟವ್ಯಕ್ತಿಯ ಹೆಸರಿನಿಂದ ಶೇಅರುಗಳು ಬದಲಾಯಿಸಲಿಕ್ಕೆ ಬರಲಾರವು.

ಸಂಚಾಲಕರ ಹಿತಸಂಬಂಧವು

ಕಂಪನಿಯ ಕರಾರಿನಲ್ಲಿ ಇಲ್ಲವೆ ಕಂಪನಿಯು ಸ್ವಾಧೀನಪಡಿಸಿಕೊಂಡ ಸರಕು-ಸಾಮುಗ್ರಿಗಳಲ್ಲಿ ಶ್ರೀ ಕೆ. ಎಲ್. ಜೋಗದೇವ ಇವರ ಹೊರತಾಗಿ, ಬೇರೆ ಯಾವ ಸಂಚಾಲಕರ ಹಿತ-ಸಂಬಂಧಗಳೂ ಇರುವದಿಲ್ಲ. ಕಂಪನಿಯು ಕೊಡುಕೊಂಡ ಉದ್ಯೋಗದ ಒಡೆಯರು ಅವರೊಬ್ಬರೇ ಇದ್ದರು; ಮತ್ತು ಅವರೇ ತಮ್ಮ ಉದ್ಯೋಗವನ್ನು ಕಂಪನಿಯ ವಶಕ್ಕೆ ಕೊಟ್ಟಿರುವರು. ಅವರು ಮ್ಯಾನೇಜಿಂಗ ಏಜನ್ಸಿ ಫರ್ಮಿನ ಪಾಲುಗಾರರಿದ್ದಾರೆ. ಯಾವದೇ ಸಂಚಾಲಕನಿಗೆ ಈ ಕಂಪನಿಯನ್ನು ಆರಂಭಿಸಲು, ಅವರು ಮಾಡಿದ ಶ್ರಮದ ಪ್ರತಿಫಲವೆಂದು ಯಾವದೇ ಬಗೆಯ ರಕಮು ಕೊಡಲಾಗುವದಿಲ್ಲ.

ಕಾಗದ ಪತ್ರಗಳ ವಿಚಾರಣೆ

(೧) ೧೦ ನೇ ಎಪ್ರೀಲ ೧೯೪೯ ಈ ದಿನ ಆದ ಮ್ಯಾನೇಜಿಂಗ ಏಜನ್ಸಿ ವಿಷಯದ ಕರಾರು.

(೨) ೧೦ ನೇ ಎಪ್ರೀಲ ೧೯೪೯ ಈ ದಿವಸ ಮಾಡಿದ "ಯಶವಂತ ಕನ್‌ಫೆಕ್‌ಶನರಿ ವರ್ಕ್ಸ್" ದ ಖರೀದಿ ವ್ಯವಹಾರದ ಕರಾರು.

(೩) ಆರ್ಟಿಕಲ್ ಆಫ್ ಅಸೋಸಿಯೇಶನ್.

ಈ ಎಲ್ಲ ಕಾಗದ ಪತ್ರಗಳು ಕಂಪನಿಯ ರಜಿಸ್ಟರ್ಡ ಆಫೀಸಿನಲ್ಲಿ ಗೊತ್ತಾದ ಕೆಲಸದ ವೇಳೆಯಲ್ಲಿ ತಪಾಸಮಾಡಿ ನೋಡಲು ದೊರೆಯಬಹುದು.

ಪ್ರಾಸ್ಪೆಕ್ಟಸದ ಪ್ರತಿಯು (ಕಾಗದ) ಹಾಗೂ ಶೇಅರುಗಳ ಬೇಡಿಕೆಯ ಅರ್ಜಿಯ ನಮೂನೆ (ಫಾರ್ಮ) ಗಳು ರಜಿಸ್ಟರ್ಡ ಆಫೀಸಿನಲ್ಲಿಯೂ ನಮ್ಮ ಬ್ಯಾಂಕರ್ಸರ ಕಡೆಗೂ, ಶೇಅರು ಮಾರಾಟದ ಚೀಫ್ ಏಜಂಟರಾದ ಶ್ರೀ. ಪಿ. ಆರ್. ಸಿದ್ಧಯೋಗಿ, ಬಸವಣ್ಣಗಲ್ಲಿ, ಬೆಳಗಾವಿ ಇವರಲ್ಲಿಯೂ ದೊರೆಯುವವು.

ಸಮಸ್ತ ಭಾರತ

ಮುಂಬಯಿ

ಬೀಳು ಭೂಮಿಗಳನ್ನು ಸಾಗು ಮಾಡುವವರಿಗೆ ಪ್ರತಿ ಎಕರೆಗೆ ೫೦ ರೂಪಾಯಿಗಳಂತೆ ಸಹಾಯ ಧನ ಮಾಡಲು ಮುಂಬಯಿ ಸರಕಾರ ನಿರ್ಧರಿಸಿದೆ. ನಿರ್ದಿಷ್ಟ ಅವಧಿಯಲ್ಲಿ ಇಂಥ ಭೂಮಿಗಳನ್ನು ಸಾಗು ಮಾಡದಿದ್ದವರಿಂದ ೧೦೦ ಕ್ಕೆ ೫॥ ಯಂತೆ ಬಡ್ಡಿ ಸಹಿತ ಹಣವನ್ನು ವಸೂಲ ಮಾಡಲಾಗುವದು.

೧೯೪೮–೪೯ ರಲ್ಲಿ ಸಾರ್ವಜನಿಕ ಆರೋಗ್ಯಕ್ಕಾಗಿ ದುಡಿದ ಗ್ರಾಮಸ್ಥರಿಗೆ ಕೊಡಲಾದ ಪಾರಿತೋಷಕಗಳಲ್ಲಿ ಕುಮಟೆಯ ಗೋಪಾಳ ಅನಂತ ಭಟ್ಟರಿಗೆ ಮತ್ತು ಮುಂಡರಗಿಯ ಭೀಮನಗೌಡರಿಗೆ ೩೦ ರೂಪಾಯಿ ಮತ್ತು ಮುಂಡರಗಿಯ ನೀಲಪ್ಪಾ ದಾಸಪ್ಪಾ ಹಾಗು ಗಣಪಯ್ಯ ಸುಬ್ಬು ಕುಮಟಾ ಇವರಿಗೆ ೧೦ ರೂ. ಬಹುಮಾನ ಕೊಡಲಾಯಿತು.

ಸುರತ ಜಿಲ್ಹಾ ಲೋಕಲ್ ಬೋರ್ಡಿನಲ್ಲಿಯ ಎಲ್ಲ ೪೨ ಸ್ಥಳಗಳು ಕಾಂಗ್ರೆಸ್ಸಿಗೆ ದೊರೆತಿವೆ.

ಒಳ್ಳೆಣ್ಣೆ ಇಲ್ಲವೆ ಕೊಬ್ರಿ ಎಣ್ಣೆಯಲ್ಲಿ ವ್ಹಾಯಿಟ ಆಯಿಲ್ ಮಿಶ್ರ ಮಾಡುವದು ಸರಕಾರಕ್ಕೆ ಕಂಡು ಬಂದದ್ದರಿಂದ ಇದನ್ನು ತಡೆಯಲು ಅವಶ್ಯಕ ಉಪಾಯಗಳನ್ನು ಯೋಚಿಸಲು ಅದು ಅಣಿಯಾಗಿದೆ. ಬೆರಕೆಯಾದ ಎಣ್ಣೆಯೆಂದು ಸಂಶಯ ಬಂದರೆ ಅದನ್ನು ಪುಣೆಯ ಆರೋಗ್ಯ ಶಾಖೆಯ ಪ್ರಯೋಗ ಶಾಲೆಗೆ ಕಳಿಸಿದ್ದಾದರೆ ಅದನ್ನು ತಪಾಸ ಮಾಡಿ ಆ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಲಾಗುವದೆಂದು ಮುಂತಾಗಿ ಮುಂಬಯಿ ಸರಕಾರ ಪ್ರಕಟಿಸಿದೆ.

ಬರುವ ಜುಲೈ ೬ ರಂದು ಪಂಢರಪುರದಲ್ಲಿ ನಡೆಯುವ ಆಷಾಢ ಜಾತ್ರೆಗೆ ಹೋಗಬಯಸುವ ಯಾತ್ರಿಕರು ರೇಲ್ವೆಯಲ್ಲಿಯ ದಟ್ಟಣಿಯನ್ನು ತಪ್ಪಿಸುವದಕ್ಕೋಸ್ಕರ ಮೊದಲೆ ಪ್ರಯಾಣ ಬೆಳಸುವದು ಹಿತಕರ ಎಂದು ಮುಂತಾಗಿ ಮುಂಬಯಿ ಸರಕಾರವು ಸೂಚಿಸಿದೆ.

ಸರಕಾರೇತರ ಮಾಧ್ಯಮಿಕ ಶಾಲೆಗಳ ಚಾಲಕರು ತಮ್ಮ ಶಿಕ್ಷಕರಿಗೆ ಮತ್ತು ಇತರ ನೋಕರರಿಗೆ ಸರಕಾರೀ ನೋಕರರಿಗೆ ಕೊಡುವ ಪ್ರಮಾಣದಂತೆಯೆ ಇದೇ ಜೂನ ೧ ರಿಂದ ತುಟ್ಟಿಭತ್ತೆಯನ್ನು ಕೊಡಬೇಕೆಂದು ಸರಕಾರವು ನಿರ್ದೇಶಿಸಿದೆ. ಕಳೆದ ಫೆಬ್ರುಅರಿಯ ಸರಕಾರೇತರ ಸಂಸ್ಥೆಗಳಿಗೆ ತುಟ್ಟಿಭತ್ತೆಯ ವೆಚ್ಚದಲ್ಲಿ ಸರಕಾರವು ಅರ್ಧದಷ್ಟು ಕೊಡಲು ಒಪ್ಪಿದೆ.

ಲೀನಹೊಂದಿದ ದಕ್ಷಿಣ ಮತ್ತು ಗುಜರಾಥ ಸಂಸ್ಥಾನಗಳ ವೆಚ್ಚವು ಉತ್ಪನ್ನಕ್ಕಿಂತ ಹೆಚ್ಚಿಗಿದೆಯೆಂದು ಮುಖ್ಯ ಮಂತ್ರಿ ಶ್ರೀ ಖೇರರು ಕಾಂಗ್ರೆಸ ಪಕ್ಷದ ಸಭೆಯಲ್ಲಿ ಹೇಳಿದರು. ಶಾಸನ ಸಭೆಗೆ ೬೫ ಜನರನ್ನು ನಿಯುಕ್ತ ಮಾಡಲಾಗುವದೆಂದೂ ಅವರು ಹೇಳಿದರು. ಚುನಾವಣೆ ನಡೆಯಲು ಬಹಳ ಸಮಯ ಹತ್ತುವದರಿಂದ ಎಲ್ಲ ಪಕ್ಷಗಳಿಗೆ ಪ್ರಾತಿನಿಧ್ಯ ದೊರೆಯುವದನ್ನು ಗಮನದಲ್ಲಿ ಇಟ್ಟುಕೊಂಡು ಸದಸ್ಯರನ್ನು ನಾಮಕರಣ ಮಾಡಲಾಗುವದೆಂದೂ ಅವರು ಹೇಳಿದರು.

ಹೈದರಾಬಾದ

ನವಾಬ ಮೊಯಿನ್ ನವಾಜಜಂಗ ಇವರನ್ನು ಹೈದರಾಬಾದದ ಅರ್ಥಮಂತ್ರಿಪದದಿಂದ ಹಾಗು ಸಿವಿಲ್ ಸರ್ವೀಸಿನಿಂದ ಮಾರ್ಚ ೧೯ ರಿಂದ ತಳ್ಳಿದ್ದನ್ನು ಹೈದರಾಬಾದ ಸರಕಾರದವರು ಘೋಷಿಸಿದ್ದಾರೆ. ಸರಕಾರೀ ಹಣವನ್ನು ದುರುಪಯೋಗಗೊಳಿಸಿದ ಮತ್ತು ಸರಕಾರದ ಹಾಗು ನಿಜಾಮರ ಆಜ್ಞೆಗಳನ್ನು ಪಾಲಿಸದಿದ್ದ ಆರೋಪ ಇವರ ಮೇಲೆ ಇದೆ.

ಪೋಲೀಸರು ಮತ್ತೆ ಅವಧಿ ಬೇಡಿದ್ದರಿಂದ ಶೋಬುಲ್ಲಾಖಾನರ ಕೊಲೆಯ ಖಟ್ಲೆಯ ವಿಚಾರಣೆಯನ್ನು ಜೂನ ೨೩ ಕ್ಕೆ ಮುಂದು ಮಾಡಲಾಗಿದೆ.

ಔರಂಗಾಬಾದದ ಅಜಂತಾದಲ್ಲಿ ನಿಜಾಂ ಸೈನ್ಯವು ದೇಶೀ ಬಾಂಬುಗಳನ್ನು ತಯಾರಿಸುತ್ತಿದ್ದಿತೆಂದು ತಿಳಿದುಬಂದಿದೆ. ಪೋಲೀಸ ಕ್ರಮದ ನಂತರ ಈ ದೇಶೀ ಬಾಂಬುಗಳನ್ನೆಲ್ಲ ಸ್ಫೋಟಮಾಡಿದ್ದರೂ ಇನ್ನೂ ಹಲವು ಉಳಿದದ್ದರಿಂದಬಿಟ್ಟ ಪೋಲೀಸ ಹುಗಿಯಲ್ಪಟ್ಟ ಕೊಳವೆಯೊಂದನ್ನು ತೆಗೆಯುತಿರುವಾಗ ಬಾಂಬು ಸ್ಫೋಟವಾಗಿ ಅವನಿಗೆ ಗಾಯವಾಯಿತು.

ಹೊಸದಿಲ್ಲಿ

ಗಾಂಧೀ ಕೊಲೆಯ ಖಟ್ಲೆಯ ಅಪೀಲ ವಿಚಾರಣೆ ಕೊನೆಗಂಡಿದ್ದು ತೀರ್ಪು ಕಾದಿಡಲಾಗಿದೆ. ಅಪೀಲಿನ ವಿಚಾರಣೆ ಮೇ ೨ ಕ್ಕೆ ಪ್ರಾರಂಭವಾಗಿ ೩೬ ದಿನಗಳ ವರೆಗೆ ನಡೆಯಿತು.

ಸರ್ ಚಂದ್ರೇಶ್ವರ ನಾರಾಯಣಸಿಂಹರು ನೇಪಾಳದಲ್ಲಿ ಭಾರತದ ರಾಯಭಾರಿಗಳಾಗಿ ನೇಮಕ ಹೊಂದಿರುವರು.

ಹಾಲಂಡದಲ್ಲಿ ಗಾಳಿಯಿಂದ ನಡೆಯುವ ಯಂತ್ರಗಳಿಂದ ನೀರಾವರಿ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯುತಿರುವದನ್ನನುಲಕ್ಷಿಸಿ ಹಿಂದುಸ್ತಾನದ ಕೇಂದ್ರ ನೀರಾವರಿ ಸಂಸ್ಥೆಯವರು ಆದರ ಪ್ರಯೋಗವನ್ನು ಮಾಡಲು ನಿರ್ಧರಿಸಿದ್ದಾರೆ. ಇದರಲ್ಲಿ ಯಶಸ್ಸು ಸಿಕ್ಕರೆ ದೊಡ್ಡ ಪ್ರಮಾಣದಲ್ಲಿ ಇದನ್ನು ಕೈಕೊಳ್ಳಲಾಗುವದೆಂದು ತಿಳಿಯುತ್ತದೆ.

ಶ್ರೀ ಮೋದಿಯವರು ಯುಕ್ತಪ್ರಾಂತದ ಗವರ್ನರರಾಗಿ ನೇಮಕ ಹೊಂದಿದ್ದರಿಂದ ಘಟನಾಸಮಿತಿಯಲ್ಲಿಯ ಅವರ ಸ್ಥಳಕ್ಕೆ ಕಾಂಗ್ರೆಸ ಪಕ್ಷದವರು ಶ್ರೀ ಎಂ. ಆರ್. ಮಸಾನಿಯವರನ್ನು ನಿಲ್ಲಿಸಲು ನಿರ್ಧರಿಸಿದ್ದಾರೆ.

ಡೆಹರಾಡೂನಿನಲ್ಲಿ ಸೈನಿಕ ವಿದ್ಯಾಲಯದ ಉದ್ಘಾಟನ ಮಾಡುವಾಗ ಸರದಾರ ವಲ್ಲಭಭಾಯಿಯವರು ಎಲ್ಲ ಕಾಲದಲ್ಲಿಯೂ ನಮ್ಮ ಸೈನ್ಯಪಡೆಯು ಸಿದ್ಧವಾಗಿರಬೇಕೆಂದು ಮುಂತಾಗಿ ಹೇಳಿದರು.

ಗಾಂಧೀ ಸ್ಮಾರಕ ನಿಧಿಯಿಂದ ವಿಧಾಯಕ ಕಾರ್ಯಗಳಿಗಾಗಿ ೧॥ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಿಧಿ ಸಮಿತಿಯ ಅಧ್ಯಕ್ಷರು ನಿರ್ಧರಿಸಿದ್ದಾರೆ.

ಪುನಃ ರಾಜಕಾರಣದಲ್ಲಿ ಸೇರಬೇಕೆಂದು ಹಿಂದೂ ಮಹಾಸಭೆಯು ಇತ್ತೀಚಿನ ತನ್ನ ಸಭೆಯಲ್ಲಿ ನಿರ್ಧರಿಸಿದ್ದು ತಾನು ಹಾಕಿಕೊಂಡ ಅಷ್ಟಮುಖದ ಕಾರ್ಯಕ್ರಮಕ್ಕೆ ಸಾರ್ವಜನಿಕರ ಮನವೊಲಿಸಲು ಪ್ರಯತ್ನಿಸಬೇಕೆಂದು ಶಾಖೆಗಳಿಗೆ ತಿಳಿಸಲಾಗಿದೆ. ಈ ಪರಿಸ್ಥಿತಿಯಲ್ಲಿ ಹೊಣೆಗೆಟ್ಟ ಹೇಳಿಕೆಗಳನ್ನು ಕೊಡಬಾರದೆಂದೂ ಅದು ನಿರ್ದೇಶಿಸಿದೆ.

ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ದಿಲ್ಲಿ ಸಬ್ ಜೇಲಿನಲ್ಲಿರುವ ಡಾ. ಲೋಹಿಯಾ ಇವರಿಗೆ ಮಾವಿನ ಹಣ್ಣಿನ ಬುಟ್ಟಿಯನ್ನು ಕಳಿಸಿದ್ದರು. ಡಾ. ಲೋಹಿಯಾ ಮತ್ತು ಅವರ ಗೆಳೆಯರು ಆ ಹಣ್ಣು ತಿಂದರು.

ಸಾಮ್ಯವಾದಿ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರ ಮೇಲಿನ ಖಟ್ಲೆಯ ವಿಚಾರಣೆಯು ಜೂನ ೨೨ ಕ್ಕೆ ನಡೆಯುವದು.

ಸಂಯುಕ್ತಪ್ರಾಂತ

ಪ್ರಾಂತೀಯ ರಕ್ಷಕದಲದಲ್ಲಿ ಸಂಯುಕ್ತ ಪ್ರಾಂತ ಸರಕಾರವು ೬೦ ಲಕ್ಷ ಜನರನ್ನು ಸೇರಿಸಿಕೊಂಡಿದೆ, ' ಅಂತರಿಕ ಶಾಂತಿಯನ್ನು ಕಾಯಿದುಕೊಳ್ಳಲು ಮತ್ತು ಅಪರಾಧಿಗಳನ್ನು ಪತ್ತೆ ಹಚ್ಚಲು ಪೋಲೀಸರಿಗೆ ಸಹಾಯ ಮಾಡಲು ಈ ದಳವನ್ನು ಸಂಘಟಿಸಲಾಗಿದೆ.

ತಮ್ಮ ರಾಜಕೀಯ ಉದ್ದೇಶ ಸಾಧನೆಗಾಗಿ ಸಾಮ್ಯವಾದಿಗಳು ಕೂಲಿಕಾರರನ್ನು ಪಯೋಗಿಸಿಕೊಳ್ಳುತಿರುವರೆಂಬ ಕಾಂಗ್ರೆಸಿನ ಆರೋಪವನ್ನು ಪಾಟ್ನಾದಲ್ಲಿಯ ಒಂದು ಸಭೆಯಲ್ಲಿ ಶ್ರೀ ಜಯಪ್ರಕಾಶ ನಾರಾಯಣರು ಅಲ್ಲಗಳೆಯುತ್ತ ಕಾಂಗ್ರೆಸ್ಸೇ ರಾಷ್ಟ್ರೀಯ ಮಜದೂರ ಸಂಘವನ್ನು ಸ್ಥಾಪಿಸಿಕೊಂಡು ಕೂಲಿಕಾರನ್ನು ತಮ್ಮ ಪಕ್ಷದತ್ತ ಎಳೆದುಕೊಳ್ಳುತಿರುವದೆಂದು ಆರೋಪಿಸಿದ್ದಾರೆ.

ಮದರಾಸ

ಮದರಾಸ ಸರಕಾರದವರು ಜುಲೈ ಒಂದರಿಂದ ಪ್ರಾಂತದಲ್ಲಿಯ ಪ್ರತಿಯೊಂದು ಸಿನೆಮ ಪ್ರದರ್ಶನದ ಮೇಲೆ ಸಧ್ಯದ ಮನೋರಂಜನೆಯ ಕರದ ಹೊರತಾಗಿ ಹೊಸ ಕರ ಹೇರಲು ನಿರ್ಧರಿಸಿದ್ದಾರೆ. ಪ್ರತಿಯೊಂದು ಪ್ರದರ್ಶನದ ಮೇಲೆ ೫ ರೂ. ದೊಡ್ಡ ಮುನಸಿಪಾಲಿಟಿ ಇದ್ದಲ್ಲಿ ೪ ರೂ. ಸಣ್ಣ ಮುನಿಸಿಪಾಲ್ಟಿ ಇದ್ದಲ್ಲಿ ೩ ರೂ. ಉಳಿದೆಡೆಗೆ ೨ ರೂ. ಹೀಗೆ ಇರುವದು. ಇದರಿಂದ ಸರಕಾರಕ್ಕೆ ೧೮ ಲಕ್ಷ ರೂಪಾಯಿ ಬರುವದೆಂದು ಅಂದಾಜು.

ಅಮೇರಿಕ ರಾಷ್ಟ್ರದ ಅಸ್ತಿವಾರ

(೬ನೆಯ ಪುಟದಿಂದ)

ಈಗಲೂ ಕೆಲವು ಜನಾಂಗಗಳು, ಆಕಿರುಕದ ಕುಟುಂಬಗಳು ರಿಸರ್ವೇಶನ್‌ಗಳಲ್ಲಿ ವಾಸಿಸುತ್ತಿವೆ. ಯಾವ ಇಂಡಿಯನ್ನನೂ ಸರಕಾರೀ "ಅಪ್ಪಣೆ ಪತ್ರ" (Permit) ಇಲ್ಲದೆ ರಿಸರ್ವೇಶನ್ನನ್ನು ಬಿಟ್ಟು ಹೊರಹೋಗಕೂಡದು. ಶಾಲೆ ಕಾಲೇಜು ಇತ್ಯಾದಿ ವಿದ್ಯೆಯ ಯಾವ ಅನುಕೂಲತೆಗಳೂ ಇಲ್ಲ. ಇವರ ಆಸ್ತಿಗಳ ಆಡಳಿತೆಯುಳ್ಳ ಸರಕಾರದಿಂದ ನಿಯುಕ್ತರಾದ ಮಂಚಕ ವಕೀಲರುಗಳ ಕೈಯಲ್ಲಿದೆ.

ಕಳೆದ ಮಹಾಯುದ್ಧದಲ್ಲಿ ಓಮಾ ಜಾತಿಯ ಇಂಡಿಯನ್ ಯುವಕನೊಬ್ಬನು ಅಮೇರಿಕನ್ ಸೈನ್ಯಕ್ಕೆ ಸೇರಿ, ಇವೊಜಿಮಾ ಮೊದಲಾದ ಪೆಸಿಫಿಕ್ ರಣರಂಗಗಳಲ್ಲಿ ಸಾಹಸದಿಂದ ಕಾದಿ ಬಹುಮಾನವನ್ನು ಪಡೆದನು. ಆತನ ಹೆಸರು ಇರ್ ಹೇಯ್ಸ್. ಆತನಿಗೆ ಅಮೇರಿಕದೇಶಕ್ಕಾಗಿ ರಕ್ತವನ್ನು ಸುರಿಸಲು, ಜೀವ ಬಲಿದಾನ ಮಾಡಲು ಏನೋ ಹಕ್ಕಿದೆ. ಆದರೆ ಊರಿಗೆ ಮರಳಿದ ಮೇಲೆ ಯಾವ ಚುನಾವಣೆಯಲ್ಲೂ ಮತದಾನ ಮಾಡುವ ಹಕ್ಕಿಲ್ಲ.

ಕೆಲ ಕೆಲವು ಇಂಡಿಯನ್ನರು ಬಿಳಿಯರೊಡನೆ ರಕ್ತಸಂಬಂಧ ಬೆಳೆಸಿ ಅವರೊಡನೆ ಕಲೆತು ಹೋಗುತ್ತಿದ್ದಾರೆ. ತಮ್ಮ ಭಾಷೆ, ಸಂಸ್ಕೃತಿ, ದೇವರು, ವೇಷ, ಭೂಷಣಗಳನ್ನು ತ್ಯಜಿಸಿ, ಬಿಳಿಯರಾಗುತ್ತಿದ್ದಾರೆ. ಇಂಥವರೇ ಸೌಖ್ಯದಲ್ಲೇ ಇದ್ದಾರೆ. ಒಕ್ಲಹೋಮಾ ನಗರದ ಅಧ್ಯಕ್ಷನಲ್ಲಿ ಸ್ವಲ್ಪ ಇಂಡಿಯನ್ ರಕ್ತ ಸೇರಿಕೊಂಡಿದೆಯೆಂದು ಆತನೇ ಹೆಮ್ಮೆ ಪಡುತ್ತಾನೆ. ಆದರೆ ಎಷ್ಟೋ ಜನಾಂಗಗಳ ಪತಿಶೇಷ ಪಂಗಡಗಳು—ಅಪಾಶ್, ಅರಾಪಾಹೂ, ಪಾನೀ, ಒಸಾಜ್ ಜನಾಂಗಗಳು ಬಿಳಿಯರ ಸಂಸ್ಕೃತಿಯನ್ನು ಅಂಗೀಕರಿಸಲೊಲ್ಲದೆ, ಸ್ವಾಭಿಮಾನದಿಂದ ಗುಡ್ಡಗಾಡುಗಳಲ್ಲಿ ಪ್ರತ್ಯೇಕವಾಗಿ ಇದ್ದಾರೆ. ಇವರು ಕಂಬಳಿಯನ್ನೇ ಮೈಗೆ ಸುತ್ತಿಕೊಳ್ಳುತ್ತಿರುವದರಿಂದ ಇವರಿಗೆ ಕಂಬಳಿ ಇಂಡಿಯನ್ನರು (Blanket Indians) ಎಂದು ಮೂದಲಿಕೆಯ ಹೆಸರಾಗಿದೆ. ನೀಗ್ರೋಗಳ ಮಹಾತ್ಮನಾಗಿದ್ದ ಬೂಕರ್ ಟಿ. ವಾಶಿಂಗಟನ್ನನು ಹೇಳಿದ ಚಿಕ್ಕಮಾತು ನೆನಪಿಗೆ ಬರುತ್ತದೆ: "ಬಿಳಿಯರ ಸಿದ್ಧಾಂತವೇನೆಂದರೆ—ಯಾವನು ತಮ್ಮಂತೆಯೇ ಉಡುವುದಿಲ್ಲವೋ, ಉಣ್ಣುವುದಿಲ್ಲವೋ, ಆಚರಿಸುವುದಿಲ್ಲವೋ, ಆತನು ದಸ್ಯು, ಅನಾಗರಿಕ ಎಂದು."

(೮ನೆಯ ಪುಟದಿಂದ)

ನೋಡಬೇಕು! ಇಂಥ ಸಾಂದ್ರವಾದ ಅಜ್ಞಾನಾಂಧ ತಮಸ್ಸು ಹರಡುತ್ತಿರುವುದೇ ಇಂದಿನ ಅಷ್ಟು ಸ್ತ್ರೀಯರ ಸಮಸ್ಯೆ, ಭ್ರಮೆ ಮತ್ತು ತತ್ಪರಿಣಾಮವಾದ ಅಶಾಂತಿ, ಅತೃಪ್ತಿಗಳಿಗೆ ಕಾರಣವಾಗಿದೆ. ಸುಧಾರಕ ಬುದ್ಧಿಯ ಸ್ತ್ರೀಯರಾರೂ ದೂರದರ್ಶಿತ್ವವಿದ್ದರೆ, ಸ್ವಾನುಭವವಿದ್ದರೆ ಇಂಥ ಮಾತುಗಳಿಗೆ ಬೆಲೆ ಕೊಡರು. ಇಂಥ ಅಪ್ರಸ್ತುತ ಪ್ರಲಾಪ ಅಭಿನಯ ಕಲೆಯಲ್ಲಿ ಸ್ತ್ರೀಯರು ಮನಬಂದಂತೆ ಭಾಗವಹಿಸುವುದನ್ನು ಸಮರ್ಥಿಸಲಾರದು. ದೇಶ, ಕಾಲ, ಸಂದರ್ಭಗಳನ್ನು ಅವಲೋಕಿಸಿಯೇ ಬುದ್ಧದೇವನು ಹೆಂಗಸರು ಬೌದ್ಧ ದೀಕ್ಷೆ ತೆಗೆದುಕೊಂಡರೆ ಸಾವಿರ ವರ್ಷ ಬದುಕಬಹುದಾದ ಬುದ್ಧ ಭಿಕ್ಷು ಸಂಘ ಐನೂರೇ ವರ್ಷಗಳು ಬಾಳೀತು ಎಂದದ್ದು. ಹಾಗೆ ಹೇಳಿದ್ದಕ್ಕೆ ಬೌದ್ಧ ದೀಕ್ಷೆ ತೆಗೆದುಕೊಂಡ ಅವನ ಹೆಂಡತಿ ಯಾವ ಪ್ರತಿಭಟನೆಯನ್ನೂ ಮಾಡಿದ ಉಲ್ಲೇಖವಿಲ್ಲ. ಅದೇಕೆ? ಸ್ವತಃ ಗಾಂಧಿಯವರ ಆಶ್ರಮದಲ್ಲಿ ಕೂಡ ತರುಣ ತರುಣಿಯರ ನಡುವೆ ಅನಾವಶ್ಯಕವಾಗಿ ಅಕಾರ್ಯ ನಡೆದು ಹೋಗಿ ಅವರು ಆಶ್ರಮವಾಸಿಗಳಲ್ಲಿ ಮಲಗುವ ಹೊಸ ನಿಯಮವನ್ನು ಅಮಲಿನಲ್ಲಿ ತರಬೇಕಾಯಿತು. ಆದುದರಿಂದ ಅಲ್ಪಸಂಖ್ಯರ ಕೂಟದಲ್ಲಲ್ಲದೆ, ಸಾರ್ವಜನಿಕರ ಬಹುಸಂಖ್ಯ ಸಾಮಾಜಿಕ ಕೂಟವೆನಿಸುವ ಕಂಪೆನಿಗಳ ವಿಷಯದಲ್ಲಿ ಎಚ್ಚರಿಕೆ ಕೊಡುವುದು ಸಮಾಜ ಹಿತಚಿಂತಕರ ಆದ್ಯ ಕರ್ತವ್ಯ. ಅದರಿಂದ ಸ್ತ್ರೀಯರು ಎಂದೂ ಎಲ್ಲೂ ಕುಳಿತೇ ನಡೆಯುಟ್ಟುಕೊಂಡು ಕಲಾರಾಧನೆ ಮಾಡಲಾರರೆಂದು ಹೇಳಿದಂತಾಗುವುದಿಲ್ಲ.

ಮೇಲಿನ ವಿವರಣೆಯಿಂದ ಉಕ್ತ ಪ್ರತಿವಾದಿಗಳೂ ಅವರಂತೆ ವಿಚಾರ ಮಾಡತಕ್ಕವರೂ ಕಣ್ಣು ತೆರೆದು ವಸ್ತುಸ್ಥಿತಿಯನ್ನೂ ಶಾಸ್ತ್ರಕಾಂತವನ್ನು ಅವಲೋಕಿಸಿ ಉಪದೇಶ ಮಾಡಲು ಹೊರಡಬೇಕಲ್ಲದೆ ಸುಮ್ಮನೆ ಭಾವೋನ್ಮಾದದಿಂದ ಏನಾದರೂ ಹೇಳಹೊರಟರೆ 'ವಿವೇಕ ಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ' ಎಂಬಂತಾಗದಿರದು!

ಟಿಪ್ಪಣಿಗಳು

ಪ್ರತ್ಯಾರೋಪ

ಶ್ರೀ ವಿನೋಬಾ ಮತ್ತು ಶ್ರೀ ಪ್ಯಾರೇಲಾಲರ ವಿರುದ್ಧ ಹಿಂಸಾತ್ಮಕವಾದ ಬರೆಹ ಮುಂಬಯಿಯ "ಬ್ಲಿಟ್ಝ" ಪತ್ರಿಕೆಯು ...ನ್ನು ಮತ್ತು ಅದೇ ಪತ್ರಿಕೆಯ ಉಲ್ಲೇಖವನ್ನು ಪ್ರಕಟಿಸಿ ಇನ್ನು ಹಲವು ಪತ್ರಿಕೆಗಳ ಮುಖಕು...ನ್ನು ಕಳಿಸಲಾಗಿ ನನ್ನ ಕಡೆಗೆ ಹಲವು ಸುದ್ದಿ ...ದು ಕಳಿಸಿರುವರು. ಶ್ರೀ ವಿನೋಬಾರ ಬಗ್ಗೆ ಬರೆದ ಬರೆಹವೆಂದರೆ ಕೆಲ ತಿಂಗಳ ಹಿಂದೆ ಪ್ರಸಿದ್ಧವಾದ ಲೇಖನದ ಪುನರಾವೃತ್ತಿಯು ಆಗಿದೆ. ಆಗಲೆ ನಾನು ಆ ವಿಷಯ ಬಗ್ಗೆ ವಿಚಾರಮಾಡಿದೆ ಮತ್ತು ಈಗ ಪ್ಯಾರೇಲಾಲರನ್ನೂ ಕೇಳಿಕೊಂಡೆ. ಇವೆರಡೂ ಸಂಗತಿಗಳ ಪೂರ್ಣ ವಿವರಗಳನ್ನು ಪ್ರಸಿದ್ಧಿಸಬೇಕೆಂದರೆ ಬಹಳ ಸ್ಥಳ ಬೇಕಾಗುವದು. ...ದಿ ಅನವಶ್ಯಕ, ಅಲ್ಲದೆ ಅದಕ್ಕೆ ಉತ್ತರ ಕೊಡಬೇಕೆಂದು ಅವರಿಬ್ಬರಲ್ಲಿ ಯಾರೂ ಬಯಸುವದಿಲ್ಲ. ಈ ವರದಿಗಳು ಕೀಳ ...ಮಯೋಕ್ತಿಗಳಿಂದ ಕೂಡಿವೆ ಎಂದು ಹೇಳಿದರೆ ಸಾಕೆಂದೆನಿಸುತ್ತದೆ. ಅವರಿಬ್ಬರ ...ವೂ ಸಮಂಜಸವಾಗಿದ್ದಿತು.

ಈ ಪತ್ರಿಕೆಯು ಸುಳ್ಳು ಆರೋಪಮಾಡಿದ್ದರೆ ಅದರವಿರುದ್ಧ ಕ್ರಮ ತೆಗೆದುಕೊಳ್ಳರೆಂದು ಕೆಲ ಪತ್ರಗಾರರು ಸೂಚಿಸುತ್ತಾರೆ. ಹಾಗೆ ಮಾಡಗದು. ಯಾವನೊಬ್ಬ ಸಾರ್ವಜನಿಕ ಕಾರ್ಯಕರ್ತನು ತನ್ನ ವಿರುದ್ಧ ಮಾಡಲಾದ ಮಿಥ್ಯಾರೋಪಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಲ್ಲಿ ಸಮಯ ಮತ್ತು ಉತ್ಸಾಹವನ್ನು ವ್ಯಯಗೊಳಿಸಲಾರನು. ಅವನು ಅದನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಳ್ಳತಕ್ಕದ್ದು. ಯಾರ ವರದಿಯಲ್ಲಿ ವಿಶ್ವಾಸವಿಡಬೇಕೆಂಬುದು ಸಾರ್ವಜನಿಕರಿಗೆ ಇಂದಿಲ್ಲ ನಾಳೆ ತಿಳಿಯದಿರದು—

ವರ್ಧಾ. ಕಿ. ಘ. ಮ.
೨೭.೫.೪೯

ಕಾಲಕ್ರಮದ ವಿಸಂಗತಿ

ಗಾಂಧೀಜಿಯ ಜೀವನ ಚರಿತ್ರೆಯಲ್ಲಿ ಕಾಲಕ್ರಮದ ಕೆಲ ವಿಸಂಗತಿಗಳನ್ನು ಲುಯಿ ಫಿಶರು ನನ್ನ ಗಮನಕ್ಕೆ ತಂದಿರುವರು. ಅವುಗಳ ಬಗ್ಗೆ ನಾನು ವಿಚಾರ ಮಾಡಿದೆ. ಜನರ ಅವಗಾಹನೆಗಾಗಿ ನಾನು ಇಲ್ಲಿ ಅವನ್ನು ಉದ್ಧರಿಸುತ್ತೇನೆ.

೧) ವಿದ್ಯಾರ್ಜನೆಗಾಗಿ ಮುಂಬಯಿಯಿಂದ ಇಂಗ್ಲೆಂಡಿಗೆ ಹೊರಟಿದ್ದು ೧೮೮೭ ಇಸ್ವಿ ಅಲ್ಲ; ಅದರೆ ಸಪ್ಟಂಬರ ೪, ೧೮೮೮. ಗಾಂಧೀಜಿ ೧೮೮೭ ನೇ ಇಸ್ವಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಭಾವನಗರದಲ್ಲಿಯ ಸಾಮಲದಾಸ ಕಾಲೇಜನ್ನು ಸೇರಿದರು. ಅಲ್ಲಿ ೧೮೮೮ ನೆ ಜನೆವರಿಯಿಂದ ಏಪ್ರಿಲವರೆಗೆ ಇದ್ದು ಅನಂತರ ೪-೯-೧೮೮೮ ಕ್ಕೆ ಇಂಗ್ಲೆಂಡಿಗೆ ತೆರಳಿದರು. ಶ್ರೀ ಎಚ್. ಎಸ್. ಪೋಲಕರು ನನ್ನ ವಿನಂತಿಯ ಮೇರೆಗೆ ಇಂಗ್ಲೆಂಡಿನಲ್ಲಿ ಈ ಬಗ್ಗೆ ವಿಚಾರ ಮಾಡಿದಾಗ ೧೮೮೮ ನವೆಂಬರ ೬ ನೇ ತಾರೀಕಿಗೆ ಬಾಪೂ 'ಇನ್ನರ ಟೆಂಪಲ್' ದ ವಿದ್ಯಾರ್ಥಿಗಳೆಂದು ಪ್ರವೇಶ ಪಡೆದರೆಂದು ತಿಳಿದು ಬಂದಿತು. ೧೮೯೧ ನೇ ಜೂನ ೧೦ ನೇ ತಾರೀಕಿಗೆ ಅವರು ಬ್ಯಾರಿಸ್ಟರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ೧೮೯೧ ನೇ ಇಸ್ವಿಯ ಜೂನ ೧೧ ಕ್ಕೆ ವಕೀಲಿ ವೃತ್ತಿಯಲ್ಲಿ ದಾಖಲಾದರು. ಲಂಡನ ವಿಶ್ವವಿದ್ಯಾಲಯದಲ್ಲಿ ವಿಚಾರ ಮಾಡಿದಾಗ ೧೮೯೦ ನೇ ಇಸ್ವಿಯ ಜೂನ ತಿಂಗಳಲ್ಲಿ ಅವರು ಮ್ಯಾಟ್ರಿಕ್ಯುಲೇಶನ ಪಾಸಾದರೆಂದು ತಿಳಿದು ಬಂದಿತು. ಮುಂದಿನಿಂದ ಅವರು ೧೮೮೮ ರಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದಂತೆ ತೋರುತ್ತದೆ.

೨) 'ಇಂಡಿಯನ್ ಓಪೀನಿಯನ್' ಮೊದಲು ೧೯೦೩ ರಲ್ಲಿ ಮದನಜಿತ್‌ರಿಂದ ಪ್ರಾರಂಭವಾಯಿತು. ಅನಂತರ ೧೯೦೪ ರಲ್ಲಿ ಗಾಂಧೀಜಿಯವರು ಅದನ್ನು ಪೂರ್ಣವಾಗಿ ತಮ್ಮ ವಶಕ್ಕೆ ತೆಗೆದುಕೊಂಡರು. ಕೆಲವರು ೧೯೦೩ ನೇ ಇಸ್ವಿ ಎಂದು ಬರೆದಿದ್ದಾರೆ. ಇನ್ನು ಹಲವು ಕಡೆ ೧೯೦೪ ಎಂದು ಬರೆಯಲಾಗಿದೆ. ಈ ವಿವರದಿಂದ ಎಲ್ಲವೂ ಸ್ಪಷ್ಟವಾಗುವದೆಂದು ಎಣಿಸಲಾಗಿದೆ.

೩) ಹಿಂದ ಸ್ವರಾಜ್ಯ ಬರೆದದ್ದೆಂದು? ೧೩–೧೧–೧೯೦೯ ರಲ್ಲಿ ಎಸ್. ಎಸ್. ಕಿಲ್ಡೊನನ್ ಕ್ಯಾಸಲ್ ಎಂಬ ಹಡಗದಲ್ಲಿ ಪ್ರಯಾಣ ಮಾಡುವಾಗ ಇದನ್ನು ಬರೆದದ್ದು; ೧೯೦೮ ನೇ ಇಸ್ವಿಯಲ್ಲಿ ಬರೆದದ್ದು ಎಂದು ಪುಸ್ತಕದ ಪುನರ್ಮುದ್ರಣದಲ್ಲಿ ಬರೆದದ್ದು ತಪ್ಪಾಗಿದೆ. ಗಾಂಧೀಜಿಯವರ ಗಮನವನ್ನು ಇತ್ತ ಸೆಳೆಯಲು ಕಾರಿಸ್ತಿಂದಲೂ ಅವರು ಅದನ್ನು ತಿದ್ದಬೇಕೆಂದು ಬಯಸಿದ್ದರೆಂದೂ ಅವರ ಅವರು ಜೀವಂತವಿರುವವರೆಗೆ ಅದು ಶಕ್ಯವಾಗಲಿಲ್ಲೆಂದೂ ಶ್ರೀ ಪ್ಯಾರೇಲಾಲರು ಅಭಿಪ್ರಾಯಪಡುತ್ತಿರುವರು.

ವರ್ಧಾ ೨೭-೫-೪೯ ಕಿ. ಘ. ಮ.

ಗವರ್ನರರ ಸ್ಥಳಗಳು

ಘಟನಾಸಮಿತಿಯು ತನ್ನ ಮೊದಲಿನ ನಿರ್ಣಯವನ್ನು ಬದಲಿಸಿ, ಗವರ್ನರರನ್ನು ಆರಿಸತಕ್ಕದ್ದಲ್ಲ, ಅವರನ್ನು ನೇಮಿಸತಕ್ಕದ್ದು ಎಂಬುದಾಗಿ ನಿರ್ಣಯಿಸಿದ್ದು ಸಮಾಧಾನಕರವಾಗಿದೆ. ನೇಮಕ ಹೊಂದುವ ಗವರ್ನರರಾದರೂ ಸಾಮಾನ್ಯವಾಗಿ ಆಯಾ ಪ್ರಾಂತಗಳ ಹೊರಗಿನವರಿರತಕ್ಕದ್ದೆಂದು ಗೊತ್ತಾಗಿದೆ. ಈ ಬಗೆಯ ನೇಮಕವು ಪ್ರಜಾಪ್ರಭುತ್ವ ತತ್ವಗಳಿಗೆ ಅದೆಂತು ವಿಸಂಗತ ಎಂಬುದು ನನಗೆ ಹೊಳೆಯದಾಗಿದೆ. ಪ್ರಜಾಪ್ರಭುತ್ವವೆಂದಕೂಡಲೆ ಪ್ರತಿಯೊಂದು ಮಟ್ಟದಲ್ಲಿ ಮತ್ತು ಪ್ರತಿಯೊಂದು ಸ್ಥಳದಲ್ಲಿ ನೇರವಾದ ಚುನಾವಣೆಯಾಗತಕ್ಕದ್ದು ಎಂದಲ್ಲ. ನೇಮಕ ಮಾಡತಕ್ಕ ವ್ಯಕ್ತಿಯು ಪ್ರಜೆಗಳಿಗೆ ಹೊಣೆಗಾರನಿದ್ದರೆ, ಅಂದರೆ ಜನರಿಗೆ ಬೇಡಾದರೆ ಅವನನ್ನು ತಳ್ಳಿಹಾಕುವಂತಿದ್ದರೆ, ಅವನು ಮಾಡತಕ್ಕ ನೇಮಕವು ಒಂದು ಬಗೆಯ ಅಪ್ರತ್ಯಕ್ಷ ಚುನಾವಣೆಯೇ ಸೈ. ಪ್ರತಿಯೊಂದು ಸಂಸ್ಥೆಯೂ ತನ್ನ ಅಧಿಕಾರಿಗಳ ಕಡೆಗೆ ಮಹತ್ವದ ಅಧಿಕಾರಗಳನ್ನು ಕೊಡಲಿಬೇಕಾಗುತ್ತದೆ. ಘಟನಾತ್ಮಕ ಗವರ್ನರರನ್ನು ಮತ್ತು ಅವರ ಮುಖ್ಯಮಂತ್ರಿಯನ್ನು ನೇಮಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡುವುದೆಂದರೆ ಅವರಿಗೆ ಕೊಟ್ಟ ಅನೇಕ ಮಹತ್ವದ ಅಧಿಕಾರಗಳ ದೃಷ್ಟಿಯಿಂದ ಕಡಮೆ ಮಹತ್ವದ್ದೆಂದೇ ಹೇಳಬೇಕಾಗುವದು.

ವರ್ಧಾ
೨-೬-೪೯ ಕಿ. ಘ. ಮ

'ತಿಂಗಳಿಗೆ ಒಂದು ರೂ. ಸಂಬಳ'

ತಿಂಗಳಿಗೆ ಒಂದೇ ಒಂದು ರೂಪಾಯಿ ನಾಮಮಾತ್ರ ಸಂಬಳದ ಮೇಲೆ ಡಾ. ಜೀವರಾಜ ಮೇಥಾ ಇವರನ್ನು ಆರೋಗ್ಯಖಾತೆಯ ಸಲಹೆಗಾರರನ್ನಾಗಿ ನೇಮಿಸಿದ್ದು ಅಷ್ಟೇ ಸಮಾಧಾನಕರವಾದ ಸಂಗತಿಯಾಗಿದೆ. ಇದೊಂದು ಬಗೆಯ ಹೊಸ ಮಾದರಿಯು; ಉಳಿದ ನೋಕರಿಗಳಲ್ಲಿಯೂ ಯೋಗ್ಯ ಸಂದರ್ಭದಲ್ಲಿ ಇದು ಅನುಕರಿಸಲ್ಪಡಲೆಂದು ಆಶಿಸುತ್ತೇನೆ. ನೇಮಕ ಹೊಂದತಕ್ಕವನು ಮೊದಲೆ ಶ್ರೀಮಂತನಿದ್ದರೆ ಇಲ್ಲವೆ ಬೇರೆ ಸ್ಥಳದಿಂದ ಸಾಕಷ್ಟು ಸಂಬಳವನ್ನು ಪಡೆಯುತ್ತಿದ್ದರೆ ಮತ್ತು ನಿಜವಾಗಿ ಸಂಬಳದ ಅವಶ್ಯಕತೆ ಇಲ್ಲದಿದ್ದರೆ ಪೂರ್ಣ ತರಬೇತಿ ಹೊಂದಿದ ಇಂಥ ಮನುಷ್ಯನು ದೇಶಕ್ಕೆ ಪುಕ್ಕಟೆ ಸೇವೆಯನ್ನು ಸಲ್ಲಿಸಲು ಸಿದ್ಧನಿದ್ದರೆ, ಅದನ್ನೇಕೆ ತೆಗೆದುಕೊಳ್ಳಬಾರದು? ಅದೊಂದು ನೋಕರಿಯ ಸ್ಥಳವಾಗಿದ್ದು, ಗೌರವದ ಸೇವಕನೆಂದು ನೇಮಕ ಮಾಡುವದರಿಂದ ತೊಂದರೆ ಬರುವಂತಿದ್ದರೆ ನಾಮಮಾತ್ರ ಸಂಬಳವನ್ನು ಗೊತ್ತುಪಡಿಸಬಹುದು. ಗೌರವದ ಅಧಿಕಾರಿಯಾಗುವದರಲ್ಲಿ ಹೆಚ್ಚು ಮರ್ಯಾದೆಯುದೆಯೆಂದೂ ಅದು ಶಕ್ಯವಿಲ್ಲದಿದ್ದರೆ ಆ ಸ್ಥಳಕ್ಕೆ ತಕ್ಕುದಾದ ಸಂಬಳವನ್ನು ಪಡೆಯಬೇಕೆಂದೂ ಕೆಲವರ ಭಾವನೆ. ಆದರೆ ಡಾ. ಜೀವರಾಜ ಮೇಥಾರವರು ಇಂಥ ಯಾವ ದುರಭಿಮಾನಕ್ಕೂ ಒಳಗಾಗದೆ, ನಿಜವಾಗಿ ಏನೂ ಪಡೆಯದೆ ರಾಷ್ಟ್ರದ ಸಂಬಳದ ಸೇವಕನೆಂದು ಕರೆಯಿಸಿಕೊಳ್ಳಲು ಸಿದ್ಧರಾದುದು ಅಭಿನಂದನೀಯವಾಗಿದೆ. ಈ ರೀತಿ ನಾಮಮಾತ್ರ ಸಂಬಳ ತೆಗೆದುಕೊಂಡು ಗವರ್ನರರ ಮತ್ತು ಉಳಿದ ಮಹತ್ವದ ಸ್ಥಳಗಳನ್ನು ಅಲಂಕರಿಸುವ ವ್ಯಕ್ತಿಗಳು ಸಿಕ್ಕುವ ಸುದಿನಗಳು ಮುಂದೆ ಬರಬಹುದೆಂದು ನಾವು ಆಶಿಸುವಾ—

ವರ್ಧಾ ೨-೬-೪೯ —ಕಿ. ಘ. ಮ.

ಭಾರತ ಸೇವಕ ಸಮಾಜ

ಜೂನ ೧೨ ನೇ ತಾರೀಕು ಭಾರತ ಸೇವಕ ಸಮಾಜದ ಸಂಸ್ಥಾಪನೆಯ ದಿನವು. ೪೪ ವರುಷಗಳ ಹಿಂದೆ, ಆಗಿನಕಾಲದ ಅಖಿಲ ಭಾರತದ ತರುಣ ಧುರೀಣರಾಗಿದ್ದ ಶ್ರೀ ಗೋಪಾಲಕೃಷ್ಣ ಗೋಖಲೆಯವರು ಮತ್ತು ಅವರ ಮೂವರು ಸಹಕಾರಿಗಳೆಂದು ನನಗೆನಿಸುತ್ತದೆ, ದೇಶಕಾರ್ಯದಲ್ಲಿ ತಮ್ಮ ಜೀವನವನ್ನು ಧಾರೆಯೆರೆಯಲು ಪ್ರತಿಜ್ಞೆ ತೆಗೆದುಕೊಂಡರು. ಭಾರತ ಸೇವಕ ಸಮಾಜದ ಸಂಸ್ಥಾಪನೆಯ ಕಥೆಯೆ ಇದು. ದೇಶದಲ್ಲಿಯೆ ಈ ಮಾದರಿಯ ಸಂಸ್ಥೆ ಇದೊಂದೆ. ದಿನ ಹೋದಂತೆ ಅನೇಕ ಬುದ್ಧಿವಂತ ಉತ್ಸಾಹಿ ತರುಣರನ್ನು ಅದು ಆಕರ್ಷಿಸಿತು. ಮುಂದೆ ಒಂದೆರಡು ದಶಕಗಳಲ್ಲಿ ದೇಶದ ಬಹುತರ ಎಲ್ಲ ಪ್ರಾಂತಗಳಲ್ಲಿ ಅದರ ಶಾಖೆಗಳು ಸ್ಥಾಪಿತವಾದವು. ಬಗೆಬಗೆಯ ರಾಷ್ಟ್ರೀಯ ಕಾರ್ಯಗಳನ್ನು ಈ ಸಂಸ್ಥೆ ಕೈಗೊಂಡಿತು. ಇದು ಕೇವಲ ಒಂದೇ ಒಂದು ಸಂಸ್ಥೆಯಾಗಿರದೆ ತನ್ನ ಸದಸ್ಯರ ಮುಖಾಂತರ ಬೇರೆ ಬೇರೆ ಸಂಸ್ಥೆಗಳ ಸ್ಥಾಪನೆಗೆ ಕಾರಣವಾಯಿತು.

ಗೋಖಲೆಯವರು ತಮ್ಮ ರಾಜಕೀಯ ಗುರುಗಳೆಂದು ಗಾಂಧೀಜಿ ಭಾವಿಸುತ್ತಿದ್ದರೆಂಬುದೂ ಸಮಾಜದ ಸದಸ್ಯರಾಗಲು ಅವರು ಮನವಿ ಮಾಡಿಕೊಂಡಿದ್ದರೆಂಬುದೂ ಪ್ರಸಿದ್ಧವಿದೆ. ಸದಸ್ಯರಾಗಿ ತೆಗೆದುಕೊಳ್ಳಲ್ಪಡದಿದ್ದರೂ ಅವರು ಆ ಸಂಸ್ಥೆಯ ನೊಂದಾಯಿಸಲ್ಪಡದಿದ್ದ ಸದಸ್ಯರೆಂದು ಯಾವಾಗಲೂ ತಿಳಿದುಕೊಳ್ಳುತ್ತಿದ್ದರು. ಮತ್ತು ನೊಂದಾಯಿಸಲ್ಪಟ್ಟ ಸದಸ್ಯರಷ್ಟೇ ಆಳವಾದ ಉತ್ಸಾಹವನ್ನು ಸಮಾಜದ ಕಾರ್ಯದಲ್ಲಿ ತೆಗೆದುಕೊಳ್ಳುತ್ತಿದ್ದರು ಮತ್ತು ಸಮಾಜದ ಸಹಾಯವನ್ನು ಪಡೆದದ್ದಲ್ಲದೆ ತಮ್ಮ ಸಹಾಯವನ್ನೂ ಆ ಸಂಸ್ಥೆಗೆ ಒದಗಿಸಿಕೊಟ್ಟು ಅದರ ಸುಖ ದುಃಖಗಳಲ್ಲಿಯೂ ಪಾಲುಗಾರರಾಗಿದ್ದರು. ಗೋಖಲೆಯವರೊಡನೆ ನೇರವಾದ ಸಂಬಂಧ ನನಗೆಬಾರದೇಇದ್ದರೂ ಅವರ ಹೆಸರಿನವರೇ ಆದ ಗೋಪಾಲಕೃಷ್ಣ ದೇವಧರರು ರಾಷ್ಟ್ರಕಾರ್ಯ ಮಾಡಬೇಕೆಂಬ ಬೀಜವನ್ನು ನನ್ನಲ್ಲಿ ಬಿತ್ತಿದರು. ನಾಲ್ವತ್ತು ವರುಷಗಳ ಹಿಂದೆ ವಿಲಕ್ಷಣವಾದ ವೈಯಕ್ತಿಕ ಸಂಗತಿಯೊಂದು ಸಮಾಜದೊಡನೆನನ್ನ ಸಂಬಂಧ ಬೆಳೆಸಲು ಕಾರಣವಾಯಿತು. ಆಗ ಅದು ಕೇವಲ ಮೂರು ವರ್ಷದ್ದಾಗಿದ್ದರೂ ಮುಂಬಯಿಯಲ್ಲಿ ಶಾಖೆಯನ್ನು ಸ್ಥಾಪಿಸುವಷ್ಟು ಸುಸಂಘಟಿತವಾಗಿದ್ದಿತು. ನಾನು ನನ್ನ ಬಾಲ್ಯವನ್ನು ಯಾವ ಮನೆಯಲ್ಲಿ ಕಳೆದಿದ್ದೆನೊ ಅಲ್ಲಿಯೆ ಆ ಶಾಖೆ ಕಾರ್ಯವನ್ನು ನಡೆಸಿದ್ದಿತು. ತನ್ನ ಮನೆಯ ಬಗ್ಗೆ ಇರುವ ಸಹಜವಾದ ಪ್ರೇಮ, ಸಮಯ ದೊರೆತಾಗೆಲ್ಲ ಅದನ್ನು ಕಾಣುವ ಸಹಜ ಪ್ರವೃತ್ತಿ ಇವುಗಳಿಂದ ಶ್ರೀ ಗೋಪಾಳ ಕೃಷ್ಣ ದೇವಧರರ ಪರಿಚಯವಾಗಲು ಸಂಧಿಯೊದಗಿಸಿದವು. ಅವರ ಸಹಕಾರಿಗಳ ಪರಿಚಯವೂ ನನಗಾಯಿತು. ಶ್ರೀ ಎನ್ ಎಂ ಜೋಶಿ ಶ್ರೀ ಠಕ್ಕರಬಾಪಾ ಮತ್ತು ಉಳಿದವರ ಪರಿಚಯವೂ ನನಗಾಯಿತು. ಒಂದು ದಿನ ಮಧ್ಯಾಹ್ನ ಶ್ರೀ ದೇವಧರರ ಕೂಡ ನಾನೊಬ್ಬನೆ ಮೇಲ್ಮಾಳಿಗೆಯ ಮೇಲೆ ಕುಳಿತಾಗ ದೇಶದ ಪರಿಸ್ಥಿತಿ, ತರುಣರು ಮಾಡತಕ್ಕ ಕರ್ತವ್ಯದ ಬಗ್ಗೆ ಗಂಭೀರ ರೀತಿಯಿಂದ ವಿಚಾರಮಾಡಲು ನನಗೆ ಹೇಳಿದರು. ಪರಿಸ್ಥಿತಿ ಅನುಕೂಲವಾದರೆ ಪದವೀಧರನಾದ ಕೂಡಲೆ ಸಮಾಜವನ್ನು ಸೇರುವದಾಗಿ ವಚನ ಕೊಡುವಷ್ಟು ನನ್ನಲ್ಲಿ ಪರಿವರ್ತನೆಯಾಯಿತು. ಆದರೆ ಅವರು ಅಂದು ಬಿತ್ತಿದ ವಿಚಾರವು ಮೂರ್ತಸ್ವರೂಪ ಹೊಂದಲು ಹತ್ತು ವರ್ಷ ಹಿಡಿದವು. ಅಷ್ಟೊತ್ತಿಗೆ ಶ್ರೀ ಅಮೃತಲಾಲ ಠಕ್ಕರ (ಈಗ ಠಕ್ಕರಬಾಪ್ಪಾ) ರು ನಮ್ಮ ಮನೆತನದ ಸದಸ್ಯರಂತೆಯೆ ಆಗಿದ್ದರು. ನಾನು ಸಿದ್ಧನಾಗಿರುವೆನೆಂದು ತಿಳಿದ ಕೂಡಲೆ ಒಂದು ದಿನ ಅವರು ನನ್ನನ್ನು ನೇರವಾಗಿ ಗಾಂಧೀಜಿಯ ಸೇವೆಯಲ್ಲಿ ಸದ್ದಿಲ್ಲದೆ ಸೇರಿಸಿ ಬಿಟ್ಟರು.

ರಾಷ್ಟ್ರೀಯ ಕಾರ್ಯಕರ್ತರ ಈ ಸಂಸ್ಥೆ ಮತ್ತು ಕೀರ್ತಿವೆತ್ತ ಅದರ ಸದಸ್ಯರಿಗೆ ನಾನೀ ಸಮಯದಲ್ಲಿ ಧನ್ಯವಾದಗಳನ್ನರ್ಪಿಸುತ್ತೇನೆ.

ವರ್ಧಾ ೨೮—೫—೪೯ ಕಿ. ಘ. ಮ.

(೧೩ ನೆಯ ಪುಟದಿಂದ)

...ಸುವ ಶಕ್ತಿ ಇದ್ದೇ ಇದೆ. ಕವಾಯಿತು ಮಾಡುವ ಸೈನಿಕರಿಗೆ ಆಜ್ಞೆ ಕೊಡುವ ಸೇನಾಪತಿಯಂತೆ ಹಣದ ಚಲಾವಣೆ ನಿಯಂತ್ರಿಸುವ ಸಾಮರ್ಥ್ಯವಿದ್ದವರಿಗೆ ಮನಸ್ಸು ಮಾಡಿದರೆ, ಅದರ ಬೆಲೆಯನ್ನು ಸ್ಥಿರೀಕರಗೊಳಿಸಲೂ ಬರುವದು. ಸೆಂಟ್ರಲಬ್ಯಾಂಕದ ಚಲಾವಣಶಾಖೆಯ ಪರಿಮಿತ ಶಕ್ತಿಯನ್ನು ಉಪಯೋಗಿಸಲು ಅಧಿಕಾರವಿದ್ದ ನಾನು ಮನಸ್ಸುಮಾಡಿದರೆವ್ಯಾಪಾರಿಗಳನ್ನೂ ನೌಕರರನ್ನೂ ಕಂಗಾಲರನ್ನಾಗಿ ಮಾಡಬಲ್ಲೆ, ಕೂಲಿಕಾರರು ನಿರುದ್ಯೋಗಿಗಳಾಗಿ ಬೀದಿಯಲ್ಲಿ ಅಲೆಯುವಂತೆ ಮಾಡಬಲ್ಲೆ; ಎಲ್ಲ ಹಡಗು ಕಂಪನಿಗಳ ವ್ಯವಹಾರವನ್ನು ನಿಲ್ಲಿಸಿ ಬಿಡಬಲ್ಲೆ; ಎಲ್ಲ ಗಣಿಗಳಲ್ಲಿಯ ಕೆಲಸ ನಿಂತು ಅಲ್ಲಿ ನೀರು ತುಂಬಿ ನಿಲ್ಲುವಂತೆ ಮಾಡಬಲ್ಲೆ; ಹಿಂದಿನಿಂದ ಒಂದು ವಾರದ ಅನಂತರ ಆದೇಕೆ ೪೮ ತಾಸಿನ ಅನಂತರ ಜಗತ್ತಿನಲ್ಲಿಹಿಂದೆ ಎಂದೂ ಕಂಡುಬಂದಿರದಂಥ ಸುಭಿಕ್ಷ-ಪರಿಸ್ಥಿತಿಯನ್ನೂ ನಿರ್ಮಿಸಿ ತೋರಿಸಬಲ್ಲೆ.

-ಸಿಲ್ವಿಯೊ ಗೆಸೆಲ್

(ಫ್ರೀಡಮ್ ಅಂಡ ಪ್ಲೆಂಟೀ, ಜಾನೇವಾರಿ-ಫೆಬ್ರುವರಿ ೧೯೪೯ ಸಂಚಿಕೆಯಿಂದ) (೧೯೧೯)

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

	ತಾ. ೮
ಮುಂಬಯಿ ಡಾಯಿಂಗ್	೯೪೧-೪-೦
ಕೋಹಿನೂರು	೩೬೦-೦-೦
ಫಿನ್ಲೆ	೩೪೯-೦-೦
ಸ್ವದೇಶಿ	೩೮೪-೦-೦
ಗೋಕಾಕ	೩೫೩-೦-೦
ಸಿಂಧುರಿ	೩೪೭-೦-೦
ಸಿಂಪ್ಲೆಕ್ಸ	೧೬೯-೮-೦
ಟಾಟಾ ಸ್ಟೀಲ ಡೆಫರ್ಡ	೧೭೯೭-೮-೦
ಇಂಡಿಯನ್ ಅಯರ್ನ್	೨೧-೪-೦
ಅಸೋ. ಸಿಮೆಂಟ್ಸ	೧೩೪-೦-೦
ಸೆಂಟ್ರಲ ಬ್ಯಾಂಕ್	೮೧-೧೨-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೭೯೫-೦-೦

ಚಿನ್ನ ಬೆಳ್ಳಿ

ತಯಾರಿ ಚಿನ್ನ	೧೧೮-೧೨-೦
ವಾಯದಾ ,,	೧೧೮-೦-೦
ತಯಾರಿ ಬೆಳ್ಳಿ	೧೯೦-೧೦-೦
ವಾಯದಾ ,,	೧೯೦-೨-೦

ಅರಳೆ

ಅನಧಿಕೃತ ದರಗಳು ಇಂತಿವೆ.

ಮೇ	—
ಜುಲೈ	೬೩೫-೦-೦
ಸೆಪ್ಟೆಂಬರ	೬೩೩-೮-೦

ಎಣ್ಣೆಕಾಳು

ಶೇಂಗಾ	೧೮೯-೧-೦
ಅಗಸೆ (ತಯಾರಿ)	೩೯-೫-೦
,, ಹೊಸ	೩೯-೩-೦
,, ಎಣ್ಣೆ	೧೬-೧೨-೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

		ತಾ. ೯
ಜ. ಹೊಸ ಹತ್ತಿ (ನಗಕ್ಕೆ)		೪೨೫-೪೫೦
ಅಷ್ಲಂಡ ಹತ್ತಿ		ಧಾರಣೆ ಹೊರಟಿಲ್ಲ
ಜೇ. ಅರಳೆ		೨೯೨-೩೧೧
ಡಬಲ್ ರೋಲ್ ,,	,,	೩೦೦-೩೧೦
ಕುಸುಬಿ (ಬ. ಮಣಕ್ಕೆ)	೧೪-೧೩	೦ ೧೫-೦-೦
ಅಗಸಿ.	(ಚೀಲಕ್ಕೆ) —	೩೯-೪೦
ಊಡಲ	,,	೩೬-೦-೦
ಜ. ಹೆಸರು	,,	೪೬-೮-೦ ೪೮-೧೨-೨
ಕರಿ ಎಳ್ಳು	,,	೬೦-೬೪
ಬಿಳಿ ಎಳ್ಳು	,,	೮೦
ಕಡಲೆ	,,	೫೫.೦-೦ ೫೬-೧೪-೨
ಜ. ತೊಗರಿ	,,	೨೬-೨೯
ಹುರಳಿ	,,	೩೫-೩೬-೦-೦
ಕೆಂ. ಅಲಸಂದಿ	,,	೫೫
ಬಿ. ಅಲಸಂದಿ	,,	೫೬
ಶೇಂಗಾ (ಹೇರು)		೫೦-೫೪
ಶೇಂಗಾ ಕಾಳು		೮೦—೮೪

ಸಾಂಗಲಿ ಪೇಟೆ

ಅರಿಸಿಣ	೯೬-೧೦೫
ಮೆಣಸಿನಕಾಯಿ	೧೫೦-೧೯೫
ಶೇಂಗಾ	೧೪೬
ಬೆಲ್ಲ	೫೦-೬೭

ಶಿವಮೊಗ್ಗೆ ಅಡಿಕೆ ಪೇಟೆ

	ತಾ. ೨೯
ದೇಶಾವರ ನಂ. ೧ (ಮಣಕ್ಕೆ)	೩೦-೩೨
,, ೨	೨೬-೩೦
ರಾಜಾ ಆಲವು	೨೬-೨೮
ಕೊರಸಾಲು	೨೨-೨೬
ಬೆಟ್ಟವಂತಿ	೧೭-೧೮
ಬೆಟ್ಟೆ	೧೪-೧೬
ಸೀಗೆಕಾಯಿ	೭-೮

೫೦೦ ರೂ. ಇನಾಮು
ಆಶ್ಚರ್ಯಕರವಾದ ಶೋಧ
ಮಾಯಾ ಉಂಗುರ

ಮಾಯಾ ಮಂತ್ರ ತಂತ್ರ ಶಕ್ತಿಯಿಂದ ಸಿದ್ಧವಾದ ಈ ಉಂಗುರವು ದುಷ್ಟಗ್ರಹಗಳ ಬಾಧೆಯಿಂದ ನಿಮಗೆ ರಕ್ಷಣೆ ಕೊಡುವದಲ್ಲದೆ ಅದನ್ನು ಧರಿಸಿದವರಿಗೆ ಪ್ರೇಮ ಸಂಪಾದನೆ, ವ್ಯಾಜ್ಯ, ಆರೋಗ್ಯ – ಸಂಪತ್ತು – ವೈಭವ – ಮುಂತಾದ್ದರಲ್ಲಿ ಯಶಸ್ಸು ದೊರೆಯಲು ಅಮಿತ ಬಲ ಕೊಡುತ್ತದೆ. ಒಂದು ದಿನ ರಾತ್ರಿ ಉಪಯೋಗಿಸಿದರೆ ಅದರ ಅದ್ಭುತ ಶಕ್ತಿ ತಿಳಿಯುವದು.

ಉಂಗುರವೊಂದಕ್ಕೆ ರೂ. ೨
ಮೂರಕ್ಕೆ ರೂ. ೫
ಪ್ಯಾಕಿಂಗ ಪೋಷ್ಟೇಜ ಎಲ್ಲಕ್ಕೂ ಬೇರೆ.

Mahakali Ashram
No. 247, Kanpur

ಕರ್ನಾಟಕದಲ್ಲಿ

ಧಾರವಾಡ

ರಾಣೇಬೆನ್ನೂರಿನ ನಗರವಿದ್ಯಾಪ್ರಸಾರ ಮಂಡಲದ ಕಟ್ಟಡಕ್ಕೆ ಉರುವಕೊಂಡದ ಸ್ವಾಮಿಗಳು ೫೦೦೧ ರೂಪಾಯಿ ಆಶೀರ್ವದಿಸಿದ್ದಾರೆ. ಸ್ಥಳೀಯ ವ್ಯಾಪಾರಸ್ಥರಿಂದ ಈ ಮೊದಲು ೧೦೦೦ ರೂಪಾಯಿ ಬಂದಿವೆ.

ಹಾವೇರಿಯಲ್ಲಿಯ ಬಸೆಟ್ಟೆಪ್ಪಾ ಹುಂಬಿ ಇವರ ಮನೆಯ ಮಾಳಿಗೆಯ ಹಂಚು ತೆಗೆದು ಎರಡು ಸಾವಿರರೂಪಾಯಿಗಳಿಗೆ ಮೇಲ್ಪಟ್ಟು ಬೆಲೆಬಾಳುವ ಸಾಮಾನುಗಳನ್ನು ಕಳವುಮಾಡಿಕೊಂಡು ಹೋಗಿದ್ದಾರೆ. ಪೋಲೀಸರ ತಪಾಸಣೆ ನಡೆದಿದೆ.

ಶ್ರೀ ಸಿದ್ದಪ್ಪಾ ಬಣಗಾರ ಇವರೇ ಮತ್ತೆ ರಾಣೇಬೆನ್ನೂರ ನಗರಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಹುಬ್ಬಳ್ಳಿಯಲ್ಲಿ ಹಿರೇಪೇಟೆಯಲ್ಲಿ ಅಣ್ಣಪ್ಪಾ ಬೆಲವಗಿ ಇವರ ದಲಾಲಿಅಂಗಡಿಯಲ್ಲಿಯ ದೊಡ್ಡ ವಖಾರವನ್ನು ಸೀಡಾ ಇನಸ್ಪೆಕ್ಟರರು ಪೋಲೀಸರ ಸಹಾಯದಿಂದ ತಪಾಸ ಮಾಡಿ ಬಚ್ಚಿಟ್ಟ ೨೮ ಅಕ್ಕೀ ಚೀಲಗಳನ್ನು ಜಪ್ತ ಮಾಡಿದರು. ಸಕ್ಕರೆಚೀಲಗಳಲ್ಲಿ ಇವನ್ನು ಬಚ್ಚಿಡಲಾಗಿದ್ದಿತಂತೆ. ಈ ವಖಾರವನ್ನು ಶ್ರೀ. ಜೀವಪ್ಪ ಸವಣೂರ ಇವರು ಬಾಡಿಗೆಯಿಂದ ಹಿಡಿದಿದ್ದರಂತೆ. ಮುಂದಿನ ಕ್ರಮ ನಡೆದಿದೆ.

ಹುಬ್ಬಳ್ಳಿಯ ಭೋಜನಾಲಯವೊಂದರಲ್ಲಿ ತಂಗಿದ್ದ ವ್ಯಾಪಾರಿಯೊಬ್ಬನ ೭ ಸಾವಿರ ರೂಪಾಯಿ ಬೆಲೆ ಬಾಳುವ ವಜ್ರವೈಡೂರ್ಯಾದಿಗಳು ಅವನ ಗೆಳೆಯನೆಂದು ನಟಿಸಿ ಅದೇ ಕೋಣೆಯಲ್ಲಿ ಮಲಗಿದ್ದ ಮತ್ತೊಬ್ಬನಿಂದ ಅಪಹರಿಸಲ್ಪಟ್ಟ ಸಂಗತಿ ತಿಳಿದು ಬಂದಿದೆ. ಇವರಿಬ್ಬರಲ್ಲಿ ದಾರಿಯಲ್ಲಿಯೇ ಗೆಳೆತನಕೂಡಿ ಇಬ್ಬರೂ ಒಂದೇ ಕೋಣೆಯಲ್ಲಿ ಮಲಗಿದಾಗ ಬೆಳಗಿನಜಾವದಲ್ಲಿ ಆರೋಪಿಯು ವ್ಯಾಪಾರಸ್ಥನ ಪೆಟ್ಟಿಗೆಯನ್ನು ತೆಗೆದುಕೊಂಡು ಕೋಣೆಯ ಹೊರಬಾಗಿಲಿಗೆ ಬೀಗ ಜಡಿದು ಫರಾರಿಯಾಗಿರುವನೆಂದು ತಿಳಿಯುತ್ತದೆ. ಪೋಲೀಸರು ತಪಾಸ ನಡೆಸಿದ್ದಾರೆ.

ಉತ್ತರ ಕನ್ನಡ

ಈ ಸಲದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಕಾರವಾರ ಮತ್ತು ಕುಮಟಾ ಕೇಂದ್ರಗಳ ಪರಿಣಾಮವು ಬೇರೆ ಎಲ್ಲ ಕೇಂದ್ರಗಳಿಗಿಂತ ಹೆಚ್ಚು ಚೆನ್ನಾಗಿ ಆಗಿದ್ದು ಕಾರವಾರ ಹಿಂದೂ ಹಾಯಸ್ಕೂಲಿನ ಕುಮಾರಿ ಮೀರಾ ರಾವ ಇವರು ೫೫೬ ಗುಣಗಳನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಎಂಟನೆ ನಂಬರು ಬಂದಿರುವರು.

ಉತ್ತರ ಕನ್ನಡ ಜಿಲ್ಹೆಯಲ್ಲಿ ಹಣ್ಣು ಹಂಪಲ ಹಾಗು ಕಾಯಿಪಲ್ಲೆಗಳ ಬೀಜಗಳನ್ನು ಪುಕ್ಕಟೆ ಹಂಚಲು ಜಿಲ್ಹಾ ಕಲೆಕ್ಟರರು ೪೮೦ ರೂಪಾಯಿ ಮಂಜೂರು ಮಾಡಿದ್ದು ಜಿಲ್ಹಾ ಒಕ್ಕಲತನದ ಅಧಿಕಾರಿಗಳಲ್ಲಿ ಬೀಜ ದೊರೆಯುವ ವ್ಯವಸ್ಥೆ ಮಾಡಿದ್ದಾರೆ. –ಪ್ರತಿ ಸರಕಾರಿ ಕಟ್ಟಡ ಮತ್ತು ಶಾಲೆ ಮೊದಲಾದವುಗಳ ಪಟಾಂಗಣದಲ್ಲಿ ಕಾಯಿಪಲ್ಲೆ ಬೆಳೆಸುವ ವ್ಯವಸ್ಥೆ ಮಾಡಿದೆ.

ವಿಜಾಪೂರ

ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಈ ವರುಷ ಇಂಟರ ಸಾಯನ್ಸ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ನೂರಕ್ಕೆ ೭೦ ರಂತೆ ಪಾಸಾಗಿದ್ದು ಅವರಲ್ಲಿ ೧೧ ವಿದ್ಯಾರ್ಥಿಗಳು ೨ ನೆ ವರ್ಗದಲ್ಲಿ ಪಾಸಾಗಿರುವರು. ಇಂಟರ ಆರ್ಟ್ಸ ಪರೀಕ್ಷೆಯ ಪರಿಣಾಮ ೧೦೦ ಕ್ಕೆ ೬೧ ರಂತೆ ಆಗಿದೆ ಮೂರು ವಿದ್ಯಾರ್ಥಿಗಳು ಎರಡನೇ ವರ್ಗದಲ್ಲಿ ತೇರ್ಗಡೆಹೊಂದಿರುವರು. ವಿಶ್ವವಿದ್ಯಾಲಯದ ಈ ಪರೀಕ್ಷೆಗಳ ಪರಿಣಾಮ ಅನುಕ್ರಮವಾಗಿ ೧೦೦ ಕ್ಕೆ ೫೦ ಮತ್ತು ೬೧ ಆಗಿದೆ.

ಹಿರೇಮುರಾಳದ ನೀಲಕಂಠರಾವ ಮಾಧವರಾವ ಜಾಗಿರದಾರ ಇವರು ವರುಷಕ್ಕೆ ೬೦ ರೂಪಾಯಿಗಳ ಶಿಷ್ಯವೃತ್ತಿಯನ್ನು ವಿಜಾಪುರ ಪಿ. ಡಿ. ಜೆ. ಹಾಯಸ್ಕೂಲಿನ ೭ ನೆಯ ವರ್ಗದ ಬುದ್ಧಿವಂತ ಬಡವಿದ್ಯಾರ್ಥಿಗೆ ಕೊಡಬೇಕೆಂದು ನಿರ್ಧರಿಸಿದ್ದಾರೆ. ಇದೇ ರೀತಿ ವಾಸುದೇವ ಲಕ್ಷ್ಮಣ ಶಾಸ್ತ್ರೀಯವರೂ ತಿಂಗಳಿಗೆ ನಾಲ್ಕು ರೂಪಾಯಿಗಳ ಶಿಷ್ಯವೃತ್ತಿಯನ್ನಿಟ್ಟಿದ್ದಾರೆ.

ವಿಜಾಪುರದಲ್ಲಿಯ ಗೋಲಗುಮ್ಮಟವನ್ನು ದುರಸ್ತಿ ಮಾಡಬೇಕೆಂದು ಸರಕಾರದವರು ನಿರ್ಧರಿಸಿದ್ದು ಇದೇ ೧೫ ರಿಂದ ಅದು ಪ್ರಾರಂಭವಾಗುವದು. ಅಂದಿನಿಂದ ದುರಸ್ತಿ ಮುಗಿವವರೆಗೆ ಸಾರ್ವಜನಿಕರಿಗೆ ಅಲ್ಲಿ ಪ್ರವೇಶ ದೊರೆಯುವದಿಲ್ಲ. ಈ ಗುಮ್ಮಟದಲ್ಲಿ ಹೊರಡುವ ಪ್ರತಿಧ್ವನಿ ಶಕ್ತಿಯು ಇತ್ತೀಚೆಗೆ ಕಡಮೆಯಾಗಿದ್ದು ಆ ಬಗ್ಗೆ ತಜ್ಞರು ವಿಚಾರ ಮಾಡುವರು.

ಬೆಳಗಾವಿ

ಮುಂಬಯಿ ಬಾಡಿಗೆ ಖಾನಾವಳಿ ಮತ್ತು ವಸತಿಗೃಹಗಳ ದರ ನಿಯಂತ್ರಣ ಕಾಯದೆ (೧೯೪೭) ಯ ಎರಡನೆ ಭಾಗವು ಚಿಕ್ಕೋಡಿಯಲ್ಲಿ ಬಾಡಿಗೆಯಿಂದ ಕೊಡಲ್ಪಡುವ ಎಲ್ಲ ಮನೆಗಳಿಗೆ ಅನ್ವಯಿಸುವದು.

ಕಳೆದವಾರ ದರೋಡೆಗಾರರು ಬಾರ್ಸಿ ಲಾಯಿಟ ರೇಲ್ವೆ ಮಾರ್ಗದಲ್ಲಿಯ ಅರಗ ಸ್ಟೇಶನ ಮತ್ತು ಸ್ಟೇಶನ ಮಾಸ್ತರ ಕಾನಿಟಕರ ಇವರ ಮನೆಯ ಮೇಲೆ ದಾಳಿ ಮಾಡಿ ಒಂದೂವರೆ ಸಾವಿರ ರೂಪಾಯಿಗಳ ಸಾಮಾನುಗಳನ್ನು ದೋಚಿಕೊಂಡು ಹೋಗಿರುವರು.

ಮುಧೋಳದ ಇಬ್ಬರು ಶಿಂದೀ ಕಂತ್ರಾಟದಾರರು ಲಂಚನಿರ್ಮೂಲನ ಶಾಖೆಯ ಸಬ್ ಇನಸ್ಪೆಕ್ಟರ ಶ್ರೀ ಎನ್. ಎ. ನಾಯಕರಿಗೆ ೧೦೧೦ ರೂ. ಲಂಚ ಕೊಡಲು ಹೋದಾಗ ಬಂಧಿಸಲ್ಪಟ್ಟರು. ಮೊದಲೇ ಈ ಸುದ್ದಿ ಗೊತ್ತಾದ್ದರಿಂದ ವರಿಷ್ಠಾಧಿಕಾರಿಗಳುಸಮಯ್ಯ ಸಾಧಿಸಿ ಅಪರಾಧಿಗಳೀರ್ವರನ್ನೂ ಬಂಧಿಸಿದರು.

ಉಡುಪಿಯ ಗುರುಗುಂಡಿ ರಾಮಾಚಾರ್ಯರು ವಯಸ್ಸಿನ ೬೩ ನೇ ವರ್ಷದಲ್ಲಿ ಪರಂಧಾಮವನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ದ್ವೈತವೇದಾಂತ ವಿದ್ವಾಂಸರು ಮತ್ತು ಬ್ರಾಹ್ಮಣ ಸಮಾಜದ ಮುಕುಟಮಣಿಯಂತಿದ್ದರು.

ದಕ್ಷಿಣ ಕನ್ನಡ

ಮಂಗಳೂರು ಪೌರಸಭಾ ಸಮಿತಿಯವರು ಕಂಕನಾಡಿಯ ಸ್ಯಾಂಟ್ ಜೋಸೆಫ್ ಕುಷ್ಟರೋಗಿ ಅಸ್ಪತ್ರೆಗೆ ರೂ. ೧೬೫೦ ನ್ನೂ ಮಂಗಳೂರಿನ ಭಗಿನೀ ಸಮಾಜದವರಿಗೆ ರೂ. ೧೨೦೦ ನ್ನೂ ಸಹಾಯ ನಿಧಿಯಾಗಿ ನೀಡಿದರು.

ಮಂಗಳೂರಿನ ಬೆಸೆಂಟ್ ರಾಷ್ಟ್ರೀಯ ಬಾಲಿಕಾಪಾಠ ಶಾಲೆಯಲ್ಲಿ ಮದ್ರಾಸು ಸರಕಾರದ ವಿಭಜಿಸಿದ ಶಿಕ್ಷಣ ಯೋಜನೆಯಂತೆ ಅಧ್ಯಾಪಿಕೆಯರಾಗುವ ಶಿಕ್ಷಣ ತರಬೇತಿಯ ದರ್ಜೆಯನ್ನು ತೆರೆಯಲಿದ್ದಾರೆ. ಅದರಂತೆ ತಮ್ಮ ಎಸ್. ಎಸ್. ಎಲ್. ಸಿ. ಆದೊಡನೆ ಅಧ್ಯಾಪಿಕೆಯರಾಗುವ ಟ್ರೈನಿಂಗಿಗೆ ಸೇರುತ್ತೇವೆಂದು ಬಾಧ್ಯತೆ ಬರೆದುಕೊಡುವವರಿಗೆ ೪ ನೇ ೫ ನೇ ಮತ್ತು ೬ ನೇ ಫಾರ್ಮುಗಳಲ್ಲಿ ಸಂಪೂರ್ಣ ಸಂಬಳವು ಮಾಫಿಯಾಗುವುದಲ್ಲದೆ, ಪುಸ್ತಕಗಳ ವೆಚ್ಚಕ್ಕಾಗಿ ಪ್ರತ್ಯೇಕ ಹಣ ಸಿಗುವುದು.

ಮೂಲ್ಕಿಯ ಬಲ್ಲವ ಸಮಾಜಸೇವಾ ಸಂಘದ ೧೫ ನೇ ವಾರ್ಷಿಕೋತ್ಸವವು ದಿನಾಂಕ ೨೮ ರಂದು ಶ್ರೀಮಾನ್ ಕೆ. ವೈ. ಪೂಜಾರಿಗಳ ಅಧ್ಯಕ್ಷತೆಯಲ್ಲಿ ಜರುಗಿತು,

ಉಡುಪಿಯ ಕಲಾವೃಂದದ ವಾರ್ಷಿಕೋತ್ಸವದ ವೇಳೆಯಲ್ಲಿ ಲೇಖನ ಸ್ಪರ್ಧೆಯೊಂದು ನಡೆಯಲಿದೆ. ಅಖಿಲ ಕರ್ನಾಟಕದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕಲೆ, ಸಾಹಿತ್ಯ, ಸಂಸ್ಕೃತಿ, ಧರ್ಮ, ಇತ್ಯಾದಿ ವಿಷಯಗಳ ಮೇಲೆ ಸ್ವತಂತ್ರ ಲೇಖನವಿರಬೇಕು. ಲೇಖನವು ಜುಲಾಯಿ ೧೫ ರೊಳಗೆ ಕಾರ್ಯದರ್ಶಿ ಕಲಾವೃಂದ, ಉಡುಪಿ. ದಕ್ಷಿಣಕನ್ನಡ–ಇವರಿಗೆ ತಲ್ಪಬೇಕು.

ಉಪ್ಪಿನಂಗಡಿಯಲ್ಲಿ ದಿನಾಂಕ ೨೭ ರಂದು ದಕ್ಷಿಣಕನ್ನಡ ಜಿಲ್ಲಾ ಹರಿಜನ ಅಭಿವೃದ್ಧಿ ಕಮಿಟಿಯ ಸಭೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರುಗಿತು. ಮಧ್ಯಾಹ್ನ ಉಪ್ಪಿನಂಗಡಿ ಬೋರ್ಡ್ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಮಿಶ್ರಭೋಜನವೊಂದು ಜರಗಿತು. ತಮಗೆ ಹೊಟೆಲ್ ಪ್ರವೇಶವಿಲ್ಲವೆಂದು ಕೆಲವು ಹರಿಜನರು ಕಲೆಕ್ಟರರಿಗೆ ತಿಳಿಸಿದಾಗ ಅವರ ನೇತೃತ್ವದಲ್ಲಿ ಎರಡು ಹೊಟೆಲುಗಳನ್ನು ಪ್ರವೇಶಿಸಿ ಕಾಫಿ ಕುಡಿಯಲಾಯಿತು.

ಕನ್ನಡ ಸಂಸ್ಥಾನ

ಮೈಸೂರಿನಲ್ಲಿ ಒಂದು ಖಾದೀ ವಿದ್ಯಾಲಯ ಹಾಗು ಒಂದು ಖಾದೀ ಕಾರಖಾನೆಯು ಸ್ಥಾಪಿಸಲ್ಪಡುವವು. ಇವೆರಡೂ ಯೋಜನೆಗಳಿಗೆ ಸರಕಾರವು ಬಂಡವಲನ್ನೊದಗಿಸುವದಲ್ಲದೆ ಮೈಸೂರು ಚರಖಾ ಸಂಘವು ಈ ಯೋಜನೆಗಳನ್ನು ಸಿದ್ಧಪಡಿಸಿದೆ.

ಸಾಗರದಲ್ಲಿ ದೊಡ್ಡದೊಂದು ಆಸ್ಪತ್ರೆಯ ಕಟ್ಟಡವನ್ನು ಕಟ್ಟಲು ಮೈಸೂರು ಸರಕಾರದವರು ಒಂದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ.

ಬೆಂಗಳೂರಿನಲ್ಲಿಯ ಗೋಖಲೆ ಸಾರ್ವಜನಿಕ ಸಂಸ್ಥೆಗೆ ಹಿಂದುಸ್ತಾನದ ಗವರ್ನರ ಜನರಲ್‌ರಾದ ಶ್ರೀ ರಾಜಗೋಪಾಲಾಚಾರ್ಯರು ೫೦೦ ರೂಪಾಯಿ ಕಾಣಿಕೆ ಕಳಿಸಿ ಸಂಸ್ಥೆ ಮಾಡುತಿರುವ ಕಾರ್ಯಕಲಾಪಗಳನ್ನು ಪ್ರಶಂಸಿಸಿರುವರು.

ಕಾಂಗ್ರೆಸ್ ಪಕ್ಷದ ಪುರಿಯಾಳುಗಳಾದ ಶ್ರೀ ಬಿ. ಕೆ. ಬಸಪ್ಪ ಶೆಟ್ಟರ ಇವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಕನ್ನಡ ನಿಘಂಟು ತಯಾರಿಸಲು ಏರ್ಪಟ್ಟಿರುವ ಸಮಿತಿಗೆ ಮೈಸೂರು ಸರಕಾರದವರು ೨೦೦೦ ರೂಪಾಯಿಗಳ ಸಹಾಯವನ್ನು ಇನ್ನು ಮೂರು ವರುಷ ಕೊಡಬೇಕೆಂದು ನಿರ್ಧರಿಸಿದ್ದಾರೆ.

ಚಿಕ್ಕ ಜಂತಗಲ್ಲದಲ್ಲಿ ಕಳೆದ ಎರಡು ತಿಂಗಳಿಂದ ಕಳ್ಳಪೇಟೆ ನಡೆದ ಸುದ್ದಿ ಹತ್ತಿದ್ದರಿಂದ ಅಧಿಕಾರಿಗಳು ಅಲ್ಲಿಗೆ ಹೋಗಿ ಕಳ್ಳಪೇಟೆಗೆ ಹೆಸರಾದವನೆಂದು ಹೇಳಲಾಗುತ್ತಿದ್ದ ಬಟಾರಿ ಹನುಮಂತನ ಮನೆಯನ್ನು ಶೋಧಿಸಿದರು. ಆದರೆ ಅಲ್ಲಿ ಏನೂ ದೊರೆಯದ್ದರಿಂದ ಅವನ ಜವಾನಿ ತೆಗೆದುಕೊಂಡರು. ಬರಗೂರ ಬಸಣ್ಣ ಮತ್ತು ಪಿ ವೆಂಕಣ್ಣ ಇವರ ಮನೆ ಶೋಧಿಸಲಾಗಿ ಕಂಟಲಿಗೆ ಕಳಿಸುವ ಉದ್ದೇಶದಿಂದ ಇಟ್ಟಿದ್ದ ೧೫೦ ಚೀಲ ಹತ್ತಿಕಾಳನ್ನು ಜಪ್ತ ಮಾಡಿದರು.

ಶಿವಮುಗ್ಗಿಯಲ್ಲಿ ಸಬ್ ಅಸಿಸ್ಟಂಟ ಫಾರೆಸ್ಟ ಕಂಜರ್ವೇಟರರಾಗಿದ್ದ ಎಂ. ಸಿ. ಮುತ್ತಣ್ಣ ಇವರು ೭ ನೇ ತಾರೀಕು ಬೆಳಗಿನ ಜಾವದಲ್ಲಿ ಗುಂಡು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿಯುತ್ತದೆ. ಇದಕ್ಕೂ ಮೊದಲು ಅವರೊಂದು ಪತ್ರ ಬರೆದು ಸಹಿಸಲಾರದ ಬೇನೆಗಾಗಿ ಆತ್ಮಹತ್ಯೆ ಮಾಡಿಕೊಳ್ಳುತಿರುವದಾಗಿ ಉಲ್ಲೇಖಿಸಿರುವರು.

ಮೊ. ಕೆ. ಮನೂಭಾಯಿ & ಕಂ.
ಟೀ ಮರ್ಚಂಟ್ಸ
ರವಿವಾರ ಪೇಟೆ, ಬೆಳಗಾವಿ
ನಮ್ಮ ಕಡೆಗೆ ಕಲಕತ್ತಾ, ದಾರ್ಜಿಲಿಂಗ, ನೀಲಗಿರಿ ಮತ್ತು ಸಿಲೋನದ
ಚಹಾ
ಠೋಕ ಹಾಗೂ ಯೋಗ್ಯದರದಿಂದ ಸಿಗುತ್ತದೆ. ನಮೂನೆಗೆ ಹಾಗೂ ದರದ ವಿಷಯಕ್ಕೆ ಬರೆಯಿರಿ.

ದಮ್ಮು ವೆಚ್ಚಗಾದೀತು ಆದರೆ
ಪುರೋಹಿತ ಶ್ವಾಸಹಾರಿಯಿಂದಲೇ!
ಗೂರಲು ಮತ್ತು ಶ್ವಾಸಕೋಶ ಕಾಹಿಲೆಗಳನ್ನು ಗುಣಪಡಿಸಲು ಇದೊಂದೇ ವೈದ್ಯರ ಔಷಧ
ಪುರೋಹಿತ ಶ್ವಾಸಹಾರೀ
DR. PUROHIT PHARMACY,
ಹುಬ್ಬಳ್ಳಿ ಸ್ಟಾಕಿಸ್ಟರು– ಹುಬಳಿ ಫಾರ್ಮಸಿ

ಪೂರ್ವಕಾಲದಲ್ಲಿ ಅಜ್ಜಿಯ ಚೀಲ
ಮನೆಯಲ್ಲಿ ಇದ್ದೇ ಇರುತ್ತಿತ್ತು. ಅದರಲ್ಲಿಯ ಔಷಧಿಗಳು ಮನೆಯವರಿಗೂ ನೆರೆಯವರಿಗೂ ಸಣ್ಣ ಸಣ್ಣ ಬೇನೆಗಳಿಗಾಗಿ ಉಪಯೋಗಕ್ಕೆ ಬರುತ್ತಿದ್ದವು. ಆದರೆ ಈಗ ಇಂಥ ಬೇನೆ ನಿವಾರಣೆಗಾಗಿ ಜವೇರಿಯವ ಜೀವನ ಮಿಕ್ಶ್ಚರದ ಉಪಯೋಗ ...
ಎಮ್. ಎಚ್. ಜವೇರಿಯವ ಮತ್ತು ಕಂಪನಿ, ಮುಂಬಯಿ ೨. ಇವರ ಕಡೆಯಿಂದ ತರಿಸಿಕೊಳ್ಳಿರಿ.
ಜವೇರಿಯವ ಜೀವನ ಮಿಕ್ಶ್ಚರ

೩೦೦ ರೂಪಾಯಿ ಪುಕ್ಕಟೆ ಇನಾಮು
ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದುಃಖಿ ಹಾಗು ನಿರಾಶರಾಗಿರುವವರು ಒಮ್ಮೆ ನಮ್ಮ ಅಸಲಿ ಮಹಾಕಾಳಿ ಯಂತ್ರ (ತಾಯಿತ)ವನ್ನು ತರಿಸಿ ತಮ್ಮ ಆಶೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಬಹುದು. ಈ ಯಂತ್ರವನ್ನು ನಿಮ್ಮ ಹತ್ತರ ಇಟ್ಟುಕೊಳ್ಳುವದರಿಂದ ನೀವು ಮನಸ್ಸಿನಲ್ಲಿ ಯಾರನ್ನು ನೆನಸುವಿರೊ, ಅವರು ಎಂಥ ಕಲ್ಲೆದೆಯವರು, ಅಭಿಮಾನಿಗಳು ಹಾಗೂ ದುರ್ಲಭರು ಇದ್ದರೂ ನಿಮ್ಮನ್ನು ಕಾಣಲು ಅತ್ಯಂತ ಆತುರರಾಗುವರು. ಮತ್ತು ನೀವು ಅವರ ಹತ್ತರ ಹೋದ ಕೂಡಲೇ ನಿಮ್ಮ ಮೇಲೆ ಮೋಹಗೊಂಡು ಪ್ರೀತಿಸಹತ್ತುವರು. ಕಳಕೊಂಡ ಮಾಲಿನ ಪತ್ತೆ ಹಚ್ಚುವದಕ್ಕೆ, ಮೃತಾತ್ಮದ ಕೂಡ ಮಾತನಾಡುವದು ಮುಂತಾದವುಗಳ ಬಗ್ಗೆ ನೀವು ಕೇಳಿದ ಪ್ರಶ್ನೆಗೆ ಉತ್ತರ ಸಿಗುವದು. ನೀವು ಸಾವಿರಸಾರೆ ಯತ್ನಿಸಿದರೂ ಫಲಿಸದೆ ಉಳಿದ ನಿಮ್ಮ ಇಷ್ಟಾರ್ಥಗಳೂ ಸಹ ಈ ಮಹಾಕಾಳಿ ತಾಯಿತದಿಂದ ಕೆಲವೇ ದಿವಸಗಳಲ್ಲಿ ಪೂರ್ತಗೊಳ್ಳುವವು.
ಕಿಮ್ಮತ್ತು ಒಂದು ತಾಯಿತಕ್ಕೆ ರೂ. ೧–೪–೦ ಮೂರು ತಾಯಿತಗಳಿಗೆ ರೂ. ೩–೮–೦. ಮಾತ್ರ. ಅತಿ ತೀವ್ರ ಪರಿಣಾಮಕಾರಿಯಾದ ಸ್ಪೆಶಲ ಮಹಾಕಾಳಿ ತಾಯಿತಕ್ಕೆ ರೂ. ೩–೧೫–೦ ಒಂದರಿಂದ ಮೂರು ತಾಯಿತಗಳ ವರೆಗೆ ಕಳಿಸುವ ಅಂಚೆವೆಚ್ಚ ರೂ. ೧–೧೨–೦ ತಾಯಿತದಿಂದ ಲಾಭವಾಗದೆ ಇದ್ದರೆ, ಕಿಮ್ಮತ್ತು ತಿರುಗಿ ಕೊಡುವೆವು. ಇದರಲ್ಲಿ ದೋಷ ಸಿದ್ಧಮಾಡಿ ಕೊಟ್ಟವರಿಗೆ ರೂ. ೩೦೦ ರೋಖ ಇನಾಮು ಕೊಡಲಾಗುವದು. ತರಿಸಿಕೊಳ್ಳಲು ಬರೆಯಿರಿ:–
Prof: Bengal Mesmerism House (K.V. H.) Hoshiarpur

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.